ನಾದಿಗಳು ಮತ್ತೆ ಉತ್ತೇಜಿತರಾದರು. ಆದರೆ ಯುಧಿಷ್ಠಿರನು ಅವರನ್ನು ಶಾಂತಪಡಿಸುತ್ತಿದ್ದನು. ನಿರ್ಮಲಚಿತ್ತನೂ ದಯಾವಂತನೂ ಆದ ಆತನು ಎಂದಿಗೂ ಕೌರವರಿಗೆ ಅಹಿತವನ್ನು ಚಿಂತಿಸಿದವನಲ್ಲ. ಆದ್ದರಿಂದ ಅವನು ತಾಯಿಯನ್ನೂ ಸೋದರರನ್ನೂ ಪರಿವಾರವನ್ನೂ ಒಡಗೊಂಡು ಮತ್ತೆ ದಕ್ಷಿಣದ ಕಡೆಗೆ ಹೋದನು. ಹೋಗುತ್ತ ವಿಂಧ್ಯವನ ಸೇರಿದನು. ಅಲ್ಲಿ ತನ್ನ ಆಶ್ರಮದಲ್ಲಿದ್ದುಕೊಂಡು ತಪದಲ್ಲಿ ತೊಡಗಿದ್ದ ವಿದುರನನ್ನು ನೋಡಿ ತಮ್ಮಂದಿರೊಡನೆ ಅವನಿಗೆ ವಂದಿಸಿ, ಸ್ತುತಿಸಿದನು. "ಹೇ ಪೂಜ್ಯ, ನಿನ್ನ ಜನ್ಮವೇ ಸಫಲ. ಸಿರಿಸಂಪದಗಳನ್ನು ಬಿಟ್ಟು ಜಿನೋಕ್ತಮಾರ್ಗದಲ್ಲಿ ಮಹಾತಪಸ್ಸಿನಲ್ಲಿ ತೊಡಗಿದ್ದು ನಿರ್ಭೀತನಾಗಿದ್ದೀಯೆ. ಯಾವ ಮಾರ್ಗದಲ್ಲಿ ರತ್ನತ್ರಯಗಳು ಪ್ರತಿಪಾದಿತವಾಗಿದೆಯೋ, ವ್ರತ ಗುಪ್ತಿ ಮುಂತಾದುವು ನಿರೂಪಿತವಾಗಿವೆಯೋ ಅಂಥ ಮಾರ್ಗದಲ್ಲಿ ಸ್ಥಿರವಾಗಿರುವ ನಿನ್ನಂಥ ಮಹಾನುಭಾವರು ಶೀಘ್ರದಲ್ಲಿಯೇ ಸಿದ್ಧಪದವಿಯನ್ನು ಗಳಿಸುತ್ತಾರೆ" ಎಂಬುದಾಗಿ ಜಿನೋಕ್ತಮಾರ್ಗವನ್ನೂ ಮಹಾಮುನಿ ವಿದುರನನ್ನೂ ಸ್ತುತಿಸಿ, ದ್ವಾರಿಕೆಗೆ ಹೋದನು.

ಪಾಂಡವರ ಬರವಿನ ಸುದ್ದಿ ತಿಳಿಯುತ್ತಲೂ ಯಾದವರು ಅವರನ್ನು ಅತಿಶಯವಾಗಿ ಸ್ವಾಗತಿಸಿದರು. ತಮ್ಮಂದಿರೊಡನೆ ಯುಧಿಷ್ಠಿರನು ದ್ವಾರಿಕೆಯನ್ನು ಹೊಕ್ಕನು. ಸಮುದ್ರವಿಜಯಾದಿಗಳಾದ ಸೋದರರು ಬಹಳ ಕಾಲವಾದ ಮೇಲೆ ತಮ್ಮ ತಂಗಿಯನ್ನೂ ಸೋದರಳಿಯಂದಿರನ್ನೂ ಕಂಡಿದ್ದರಾದ್ದರಿಂದ ಈ ಸಮಾಗಮದಿಂದ ಅವರಿಗೆ ಆನಂದವಾಯಿತು. ನೇಮಿನಾಥ ಕೃಷ್ಣ ಬಲದೇವ ಮುಂತಾದ ಸಮಸ್ತ ಯಾದವಕುಮಾರರೂ ಅಂತಃಪುರದವರೂ ಪ್ರಜೆಗಳೂ ಎಲ್ಲರೂ ಸಂತೋಷಿಸಿದರು. ಯಾದವರೂ ಪಾಂಡವರೂ ಪರಸ್ಪರವಾಗಿ ಕಲೆತು ನಲಿಯಲು ಹಾಗೆ ಅವಕಾಶವಾದ್ದು, ಶತ್ರುಗಳಿಂದ ಅಪಕಾರವಾಗಲಿಲ್ಲ, ಉಪಕಾರವೇ ಆಯಿತು ಎನ್ನುವಂತಾಯಿತು. ಆಮೇಲೆ ಕೃಷ್ಣನು ತೋರಿಸಿಕೊಟ್ಟ ಸರ್ವಭೋಗಪ್ರದಗಳಾದ ಐದು ಉತ್ತಮ ಪ್ರಾಸಾದಗಳಲ್ಲಿ ಪಾಂಡವರೈವರೂ ಬೇರೆ ಬೇರೆ ಸುಖವಾಗಿದ್ದುಕೊಂಡರು. ಯುಧಿಷ್ಠಿರನು ಲಕ್ಷ್ಮೀಮತಿ, ಭೀಮನು ಶೇಷವತಿ, ಅರ್ಜುನನು ಸುಭದ್ರೆ, ಸಹದೇವನು ವಿಜಯೆ, ನಕುಲನು ರತಿ—ಎಂಬ ಕನ್ಯೆಯರನ್ನು ವರಿಸಿದರು. ಅವರೊಡನೆ ಸುಖದಲ್ಲಿದ್ದರು.

ಗೌತಮಸ್ವಾಮಿ ಹೇಳುತ್ತಾನೆ : "ಹೇ ಶ್ರೇಣಿಕನೆ, ನಾನು ನಿನಗಾಗಿ ಸಂಕ್ಷೇಪದಿಂದ ಕುರುವೀರರ ಕಥೆ ಹೇಳಿದ್ದೇನೆ. ಈಗ ನಾನು ಪ್ರದ್ಯುಮ್ನನ ಚೇಷ್ಟಿತಗಳನ್ನು ಹೇಳುತ್ತೇನೆ, ಕೇಳು :

ವಿಜಯಾರ್ಧದ ಮೇಲೆ ಬಂಧುಗಳನ್ನು ತನ್ನ ಕಲ್ಯಾಣಗುಣಗಳಿಂದ ನಲಿಸುತ್ತ ಪ್ರದ್ಯುಮ್ನನು ಚಂದ್ರನಂತೆ ವರ್ಧಿಸುತ್ತಿದ್ದನು. ಆ ವಿದ್ಯಾಧರಪುತ್ರನು ಬಾಲ್ಯದಲ್ಲೇ ವಿದ್ಯಾಧರೋಚಿತಗಳಾದ ಆಕಾಶಗಾಮಿನಿ ಮುಂತಾದ ವಿದ್ಯೆಗಳನ್ನು ಬೇಗ ಕಲಿತನು. ತನ್ನ ರೂಪಲಾವಣ್ಯಾದಿಗಳಿಂದ ಶತ್ರುಗಳ. ಮಿತ್ರರ ವನಿತೆಯರ ಮನಸೆಳೆಯುತ್ತಿದ್ದನು. ಯೌವನಸ್ಥನಾಗುತ್ತಲೂ ಸರ್ವಾಸ್ತ್ರಕೌಶಲವನ್ನು ಗಳಿಸಿದನು. ತನ್ನ ಸೌಂದರ್ಯದಿಂದ

ಅನ್ಯಯುವಕರು ಅಸೂಯೆ ಪಡುತ್ತಿದ್ದರು. ಮನ್ಮಥ, ಮದನ, ಕಾಮದೇವ, ಮನೋಭವ ಮೊದಲಾದ ಅನ್ವರ್ಥನಾಮಗಳನ್ನು ಪಡೆದಿದ್ದನು. ಅವನು ದಿಟವಾಗಿ ಅನಂಗನಲ್ಲದಿದ್ದರೂ ಅನಂಗನೆನ್ನುತ್ತಿದ್ದರು. ಯುದ್ಧದಲ್ಲಿ ಕಾಲಸಂವರನ ಐನೂರ್ವರು ಪುತ್ರರನ್ನು ಸೋಲಿಸಿ ಕಳಿಸಿದ್ದ ಸಿಂಹರಥನೊಡನೆ ಪ್ರದ್ಯುಮ್ನನು ತಾನು ಕಾದಾಡಿ, ಸಿಂಹರಥನನ್ನು ಗೆದ್ದು ಹಿಡಿದುತಂದು ಕಾಲಸಂವರನಿಗೆ ತೋರಿಸಿದನು. ಇಂಥ ವೀರಪುತ್ರನ ಬಗ್ಗೆ ಅವನಿಗೆ ಸಂತೋಷವಾಯಿತು. ವಿಜಯಾರ್ಧದ ಶ್ರೇಣಿದ್ವಯಗಳೇ ತನ್ನ ವಶವಾದವೆಂದು ಆತನು ಭಾವಿಸಿದನು. ಇದರಿಂದ ಪ್ರಭಾವಿತನಾಗಿ ಪ್ರದ್ಯುಮ್ನನಿಗೆ ಯುವರಾಜಪಟ್ಟ ಕಟ್ಟಿದನು. ಇದರಿಂದ ಕಾಲಸಂವರನ ಬೇರೆ ಐನೂರ್ವರು ಪುತ್ರರು ಎಲ್ಲಾ ರೀತಿಯಿಂದ ಪ್ರದ್ಯುಮ್ನನ ನಾಶಕ್ಕೆ ಉಪಾಯಗಳನ್ನು ಚಿಂತಿಸತೊಡಗಿದರು. ನಿರಂತರವಾಗಿ ಉಪಾಯಾಂತರವನ್ನು ಹುಡುಕುತ್ತಲೇ ಇದ್ದರು. ಆಸನ ಶಯನ ವಸ್ತ್ರ ತಾಂಬೂಲ ಅನ್ನಪಾನಗಳಲ್ಲಿ ಅವನನ್ನು ವಂಚಿಸಲು ಆ ವಂಚನಾತತ್ಪರರಿಗೆ ಎಷ್ಟುಮಾತ್ರವೂ ಸಾಧ್ಯವಾಗಲಿಲ್ಲ.

ಒಂದು ದಿನ ಕುಮಾರರೆಲ್ಲ ಸೇರಿ ಪ್ರದ್ಯುಮ್ನನನ್ನು ಸಿದ್ಧಾಯತನದ ಗೋಪುರದ ಬಳಿಗೆ ಕರೆದೊಯ್ದರು. "ಯಾವಾತನು ಈ ಗೋಪುರದ ತುದಿಗೇರುತ್ತಾನೋ, ಅವನಿಗೆ ಅಲ್ಲಿ ವಾಸಿಸುವ ದೇವನಿಂದ ವಿದ್ಯಾಕೋಶವೂ ಕಿರೀಟವೂ ಲಭ್ಯವಾಗುತ್ತವೆ" ಎಂದು ಪ್ರೇರಿಸತೊಡಗಿದರು. ಹೀಗೆ ಸಂಗಡಿಗರು ಪ್ರೇರಿಸಲಾಗಿ, ಪ್ರದ್ಯುಮ್ನನು ಕೂಡಲೇ ಆ ಗೋಪುರದ ತುದಿಗೇರಿ ಅಲ್ಲಿ ವಾಸಿಸುತ್ತಿದ್ದ ದೇವನಿಂದ ವಿದ್ಯಾಕೋಶವನ್ನೂ ಕಿರೀಟವನ್ನೂ ತೆಗೆದುಕೊಂಡೇ ಬಂದನು. ಆ ಮೇಲೆ ಆ ಸೋದರರಿಂದ ಮತ್ತೆ ಪ್ರೇರಿತನಾಗಿ ಮಹಾಕಾಲಗುಹೆ ಹೊಕ್ಕು ಅಲ್ಲಿಂದ ಕತ್ತಿಗುರಾಣಿಗಳು ಛತ್ರಚಾಮರಗಳು ಇವನ್ನು ತಂದನು. ಅಲ್ಲಿಂದ ಹೊರಬಿದ್ದು ನಾಗಗುಹೆಗೆ ಹೋಗಿ ಅಲ್ಲಿಯ ದೇವನಿಂದ ಪಾದಪೀಠ, ನಾಗಶಯ್ಯೆ, ಆಸನ, ವೀಣೆ, ಪ್ರಾಸಾದಕಾರಿಣೀವಿದ್ಯೆ ಇವನ್ನು ತಂದನು. ಅಲ್ಲಿಂದ ಬಂದು ಯಾವುದೋ ವಾಪಿಕೆಗೆ ಹೋಗಿ ಯುದ್ಧದಲ್ಲಿ ಸುರರಿಂದ ಜಯಿಸಲ್ಪಟ್ಟ ಉತ್ತುಂಗಮಕರಧ್ವಜವನ್ನು ತಂದನು. ಆಮೇಲೆ ಅಗ್ನಿಕುಂಡವನ್ನು ಹೊಕ್ಕು ಅಲ್ಲಿಂದ ಅಗ್ನಿಸಂಶುದ್ಧಿಯಾದ ವಸ್ತ್ರಯುಗ್ಮವನ್ನು ತಂದನು. ಆಮೇಲೆ ಮೇಷಾಕೃತಿಗಿರಿಯನ್ನು ಪ್ರವೇಶಿಸಿ ಕರ್ಣಕುಂಡಲದ್ವಯವನ್ನು ತಂದನು. ಆಮೇಲೆ ಪಾಂಡುಕವನವನ್ನು ಹೊಕ್ಕು ಅಲ್ಲಿಯ ಮರ್ಕಟನೆಂಬ ದೇವನಿಂದ ಮೌಲಿಯನ್ನೂ ಅಮೃತಮಾಲೆಯನ್ನೂ ತಂದನು. ಕಪಿತ್ಥವನಕ್ಕೆ ಹೋಗಿ ಅಲ್ಲಿಯ ದೇವತೆಯಿಂದ ವಿದ್ಯಾಕರಿಯನ್ನು ತಂದನು. ವಲ್ಮೀಕವನಕ್ಕೆ ಹೋಗಿ ಅಲ್ಲಿಯ ದೇವನಿಂದ ಕ್ಷುರಿಕಾ ಕವಚ ಮುದ್ರಿಕೆ ಮುಂತಾದುವನ್ನು ತಂದನು. ಶರಾವಪರ್ವತಕ್ಕೆ ಹೋಗಿ ಅಲ್ಲಿಂದ ಕಟಿಸೂತ್ರ ಉರಶ್ಛದ ಕಟಕ ಕೇಯೂರ ಕಂಠಿಕೆ ಈ ಭೂಷಣಗಳನ್ನು ತಂದನು. ಶೂಕರವನದಲ್ಲಿ ಶೂಕರದೇವನಿಂದ ಶಂಖ ಧನುಸ್ಸುಗಳನ್ನೂ, ಅಲ್ಲಿಯೇ ಕೀಲಿಸಲ್ಪಟ್ಟ ಮನೋವೇಗನಿಂದ ಹಾರವನ್ನೂ ಸುರೇಂದ್ರಜಾಲವನ್ನೂ ಪಡೆದುಬಂದನು. ಮನೋವೇಗನ ವೈರಿ ವಸಂತನೆಂಬ ವಿದ್ಯಾಧರ. ಪ್ರದ್ಯು

ಮ್ನನು ಆ ಇಬ್ಬರಿಗೂ ಮೈತ್ರಿಮಾಡಿಸಿ ಆ ವಸಂತನಿಂದ ಇದಕ್ಕಾಗಿ ಒಬ್ಬ ಕನ್ಯೆ ಹಾಗೂ ನರೇಂದ್ರಜಾಲಗಳನ್ನು ಪ್ರಾಪ್ತಮಾಡಿಕೊಂಡನು. ಮುಂದೆ ಹೋಗಿ ಒಂದು ಭವನವನ್ನು ಹೊಕ್ಕು ಅದರ ಒಡೆಯನಾದ ಅರ್ಜುನನೆಂಬ ದೇವನಿಂದ ಕುಸುಮಚಾಪವನ್ನೂ ಉನ್ಮಾದ ಮೋಹ ಸಂತಾಪ ಮದ ಶೋಕಪ್ರದಗಳಾದ ಬಾಣಗಳನ್ನೂ ತಂದನು. ಆಮೇಲೆ ಇನ್ನೊಂದು ನಾಗಗುಹೆ ಹೊಕ್ಕು ಅಲ್ಲಿಯ ದೇವನಿಂದ ಚಂದನಾಗರು ಮಾಲಿಕೆಯನ್ನೂ ಪುಷ್ಪಚ್ಛತ್ರವನ್ನೂ ಪುಷ್ಪಶಯ್ಯೆಯನ್ನೂ ಪಡೆದನು. ಆಮೇಲೆ ಜಯಂತಗಿರಿಯ ಮೇಲಿದ್ದ ದುರ್ಜಯವನವನ್ನು ಹೊಕ್ಕು, ಅಲ್ಲಿಂದ ಖೇಟವಾಯು ಮತ್ತು ಅವನ ಸರಸ್ವತಿ ಎಂಬ ಪತ್ನಿಯಲ್ಲಿ ಹುಟ್ಟಿದ ರತಿಯೆಂಬ ಪುತ್ರಿಯನ್ನು ಕರೆದುಕೊಂಡು ಮರಳಿದನು.

ಹೀಗೆ ಈ ಷೋಡಶಲಾಭಸ್ಥಾನಗಳಲ್ಲಿ ಪ್ರದ್ಯುಮ್ನನಿಗೆ ಅನೇಕ ಮಹಾಲಾಭಗಳೊಗಿದುದನ್ನು ಕಂಡು ಸಂವರನೇ ಮುಂತಾದ ಕುಮಾರರಿಗೆ ಅಚ್ಚರಿಯಾಯಿತು. ಪುಣ್ಯದ ಮಾಹಾತ್ಮ್ಯವರಿತು ಸಮಾಧಾನಗೊಂಡವರಾಗಿ ಪ್ರದ್ಯುಮ್ನನೊಡನೆ ನಗರಕ್ಕೆ ಹಿಂದಿರುಗಿದರು. ತನಗೆ ಪ್ರಾಪ್ತವಾಗಿದ್ದ ಧವಲವೃಷಾಧಿಷ್ಠಿತ ದಿವ್ಯರಥವೇರಿ ಧನುರ್ಬಾಣಗಳು ಧ್ವಜಚ್ಛತ್ರಗಳು ಭೂಷಣಗಳು ಇವುಗಳಿಂದ ಕೂಡಿ ಪ್ರದ್ಯುಮ್ನನು ನೂರಾರು ಕುಮಾರರಿಂದ ಪರಿವೃತನಾಗಿ ಮೇಘಕೂಟನಗರಕ್ಕೆ ಬಂದನು. ಮೊದಲು ಕಾಲಸಂವರನಿಗೆ ಕಾಣಿಸಿಕೊಂಡು ವಂದಿಸಿ, ಅದೇ ರಥದಲ್ಲಿ ಕುಳಿತು ಕನಕಮಾಲೆಯ ಮನೆಯತ್ತ ಹೋದನು. ಅಂಥ ವೇಷಭೂಷಣಗಳನ್ನು ಧರಿಸಿ ತನ್ನಲ್ಲಿಗೆ ಬಂದ ಅವನ ಬಗ್ಗೆ ಆಕೆಗೆ ಬೇರೊಂದು ರೀತಿಯ ಭಾವನೆಯೇ ಬಂದಿತು. ರಥದಿಂದಿಳಿದುಬಂದು ತನಗೆ ಮಣಿದ ಅವನನ್ನು ಆಕೆ ತುಂಬ ಪ್ರಶಂಸಿಸಿದಳು. ಮೂರ್ಧಾಘ್ರಾಣಮಾಡಿದಳು. ಬಳಿಯಲ್ಲೇ ಕೂರಿಸಿಕೊಂಡಳು. ಮೃದುಹಸ್ತದಿಂದ ಸ್ಪರ್ಶಿಸಿದಳು. ಗಾಢವಾದ ಮೋಹೋದಯದಿಂದ ಅವಳ ಆತ್ಮ ಪರವಶಗೊಂಡು ದುಷ್ಟವಾದ ಆಕಾಂಕ್ಷೆಗಳು ತಲೆದೋರಿದುವು. ಯಾವ ಹೆಂಗಸು ಒಮ್ಮೆ ಈತನ ಅಂಗಸ್ಪರ್ಶವನ್ನು ತನ್ನ ಶಯ್ಯೆಯಲ್ಲಿ ಪಡೆಯುತ್ತಾಳೋ ಅವಳೇ ದಿಟವಾಗಿ ಹೆಂಗಸು ; ಅನ್ಯರು ಆಕೃತಿಮಾತ್ರದಿಂದ ಹೆಂಗಸರು—ಎಂದೆನಿಸಿತು. ನನಗೆ ಈ ಪ್ರದ್ಯುಮ್ನನ ಆಲಿಂಗನ ದೊರೆತರೆ ನನ್ನ ರೂಪಲಾವಣ್ಯಗಳೆಲ್ಲ ಸಫಲವಾಗುತ್ತವೆ. ಉಳಿದಲ್ಲ ನನಗೆ ತೃಣಸಮಾನ ಎಂದು ಭಾವಿಸಿದಳು. ಈ ವಿಪರೀತಭಾವನೆಯ ಕಲ್ಪನೆಯೂ ತನಗಿರದ ಪ್ರದ್ಯುಮ್ನನು ಆ ಸಂಕಲ್ಪವಿಕಲ್ಪಚಿತ್ತದ ಕನಕಮಾಲೆಗೆ ಮಣಿದು, ಹರಕೆಗೊಂಡು ತನ್ನ ಮನೆಗೆ ಹೋದನು.

ಇತ್ತ ಪ್ರದ್ಯುಮ್ನನ ಆಲಿಂಗನಸುಖಕ್ಕಾಗಿ ಕಾತರಿಸಿ ಕಳವಳಗೊಳ್ಳುತ್ತಿದ್ದ ಕನಕಮಾಲೆ ತನ್ನ ಕೆಲಸಕಾರ್ಯಗಳನ್ನು ಮರೆತುಬಿಟ್ಟಳು. ಮಾರನೆಯ ದಿನ ಅವಳು ಅಸ್ವಸ್ಥಳಾಗಿರುವ ಸುದ್ದಿ ಕೇಳಿ ಪ್ರದ್ಯುಮ್ನನೇ ಅವಳನ್ನು ನೋಡಲು ಬಂದನು. ಅವಳು ಕಮಲಪತ್ರದ ಶಯ್ಯೆಯ ಮೇಲೆ ವ್ಯಾಕುಲಪಡುತ್ತಿದ್ದಳು. ಪ್ರದ್ಯುಮ್ನನು ಅವಳ ಅಸ್ವಸ್ಥತೆಗೆ ಕಾರಣವೇನೆಂದು ಪ್ರಶ್ನಿಸಲು, ಕನಕಮಾಲೆ ಆಂಗಿಕ ವಾಚಿಕ ಚೇಷ್ಟೆಗಳ ಮೂಲಕ ತನ್ನ

ಆಶಯವನ್ನು ವ್ಯಕ್ತಪಡಿಸಿದಳು. ಆ ಆಶಯವನ್ನರಿತ ಪ್ರದ್ಯುಮ್ನನು ಕರ್ಮಚೇಷ್ಟಿತವನ್ನು ಹಳಿದು ಆಕೆಗೆ ತಾಯಿಮಗ ಸಂಬಂಧವನ್ನು ತಿಳಿಸಿಕೊಡಲು ಉದ್ಯುತನಾದನು. ಇದಕ್ಕೆ ಉತ್ತರವಾಗಿ ಕನಕಮಾಲೆ ಆತನಿಗೆ ಆದಿ ಮಧ್ಯಾಂತವಾದ ಸಕಲವೃತ್ತಾಂತವನ್ನೂ ಅವನು ಅಡವಿಯಲ್ಲಿ ದೊರೆತದ್ದು, ಅವನನ್ನು ಬೆಳೆಸಿದ್ದು, ಅವನಿಗೆ ವಿದ್ಯಾಲಾಭವಾದದ್ದು, ಎಲ್ಲವನ್ನೂ ವಿವರಿಸಿದಳು. ಅವಳ ಈ ಸಂಬಂಧಕಥನದಿಂದ ಪ್ರದ್ಯುಮ್ನನ ಮನಸ್ಸು ಸಂಶಯಗ್ರಸ್ತವಾಗಿ ಸ್ಪಷ್ಟವಾಗಿ ಪ್ರಶ್ನಿಸಲೆಂದು ಜಿನಮಂದಿರದಲ್ಲಿರುತ್ತಿದ್ದ ಸಾಗರಚಂದ್ರ ಮುನಿಯಲ್ಲಿಗೆ ಹೋದನು. ಅವರಲ್ಲಿ ತನ್ನ ಎಲ್ಲಾ ಪೂರ್ವಭವವನ್ನೂ ಪ್ರಶ್ನಿಸಿ ತಿಳಿದನು. ಅಲ್ಲದೆ ಕನಕಮಾಲೆ ಪೂರ್ವಭವದಲ್ಲಿ ಚಂದ್ರಾಭೆಯಾಗಿದ್ದುದೂ ತಿಳಿಯಿತು. ಅದೇ ಮುನಿಯಿಂದ ಆತನಿಗೆ ಕನಕಮಾಲೆಯಿಂದ ತನಗೆ ಪ್ರಜ್ಞಪ್ತಿ ವಿದ್ಯೆ ಲಭಿಸಲಿರುವುದೂ ತಿಳಿಯಿತು. ಪ್ರದ್ಯುಮ್ನನು ಹಿಂದಿರುಗಿ ಬಂದು ಕಾಮಪೀಡಿತೆ ಕನಕಮಾಲೆಯನ್ನು ಪ್ರಜ್ಞಪ್ತಿವಿದ್ಯೆಯ ವಿಷಯವಾಗಿ ಪ್ರಶ್ನಿಸಿದನು. ಆಗ ಆಕೆ "ಎಲೈ ಕಾಮ, ನಾನೊಂದು ಹೇಳುತ್ತೇನೆ, ಕೇಳು. ನೀನು ನನ್ನನ್ನು ಬಯಸುವೆಯಾದರೆ, ನಾನು ನಿನಗೆ ಗೌರೀವಿದ್ಯೆ ಪ್ರಜ್ಞಪ್ತಿವಿದ್ಯೆಗಳನ್ನು ಹೇಳಿಕೊಡುತ್ತೇನೆ, ಗ್ರಹಿಸು'' ಎಂದಳು. ಅವನು "ಇದು ನಿಮ್ಮ ದಯೆ ; ನಾನು ನಿಮ್ಮನ್ನು ಬಯಸುವೆ. ವಿದ್ಯೆಗಳನ್ನು ನನಗೆ ಕೊಡಿ'' ಎಂದನು. ಕನಕಮಾಲೆ ವಿದ್ಯಾಧರರಿಗೆ ದುಷ್ಪ್ರಾಪ್ಯವಾದ ಎರಡೂ ವಿದ್ಯೆಗಳನ್ನು ವಿಧಿಪೂರ್ವಕವಾಗಿ ಅವನಿಗಿತ್ತಳು. ಪ್ರದ್ಯುಮ್ನನು ಕೈಚಾಚಿ ಅವನ್ನು ಸ್ವೀಕರಿಸಿ ಸಂತೋಷಿಸಿದನು. ಅವನ್ನು ಕೊಂಡ ಮೇಲೆ ಆಕೆಗೆ "ಮೊದಲು ನೀವು ಅರಣ್ಯದಿಂದ ಎತ್ತಿ ತಂದು ನನ್ನನ್ನು ಕಾಪಾಡಿದಿರಿ, ಆದ್ದರಿಂದ ಪ್ರಾಣದಾನ ಮಾಡಿದಿರಿ ; ಈಗ ಇದೇ ತಾನೆ ವಿದ್ಯಾದಾನ ಮಾಡಿದಿರಿ. ಹೀಗೆ ಪ್ರಾಣದಾನ ವಿದ್ಯಾದಾನ ಮಾಡಿದ್ದರಿಂದ ನೀವು ನನಗೆ ಗುರು.''—ಹೀಗೆ ನುಡಿದು, ಆಕೆಗೆ ಪ್ರದಕ್ಷಿಣೆ ಬಂದು ಕೈಮುಗಿದು, ಎದುರಿಗೆ ನಿಂತು "ಪುತ್ರೋಚಿತವಾದ ಆದೇಶವೇನಿದ್ದರೂ ನನಗೆ ಅಪ್ಪಣೆಮಾಡಿ'' ಎಂದು ಪ್ರಾರ್ಥಿಸಿದನು. ಕನಕಮಾಲೆ ಸುಮ್ಮನಾದಳು. ಪ್ರದ್ಯುಮ್ನ ಕೆಲಹೊತ್ತು ಅಲ್ಲಿಯೇ ತಡೆದಿದ್ದು ಹೊರಟುಹೋದನು.

"ನಾನು ಈ ರೀತಿ ಈತನಿಂದ ವಂಚಿತಳಾದೆನಲ್ಲಾ" ಎಂದು ಕನಕಮಾಲೆ ಅತಿಕುಪಿತೆಯಾದಳು. ತನ್ನ ಕಕ್ಷ ವಕ್ಷ ಕುಚ ಸ್ಥಲಗಳಲ್ಲಿ ತಾನೇ ನಖಕ್ಷತಗಳನ್ನು ಮಾಡಿಕೊಂಡು ಪತಿಗೆ ತನ್ನ ದೇಹವನ್ನು ತೋರುತ್ತ "ಹೇ ನಾಥ. ಇಕೋ ಈ ಪ್ರದ್ಯುಮ್ನನ ವರ್ತನೆಯನ್ನು ನೋಡು'' ಎಂದು ದೂರಿಕೊಂಡಳು. ಸತಿಯ ಈ ಕಪಟವನ್ನು ಪತಿ ದಿಟವೆಂದೇ ನಂಬಿದನು. ಕಾಲಸಂವರನಿಗೆ ಇದರಿಂದ ತುಂಬ ರೇಗಿತು. ಅವನು ತನ್ನ ಐನೂರು ಸುತರನ್ನು ಕರಸಿಕೊಂಡು ರಹಸ್ಯವಾಗಿ ಅವರಿಗೆ, "ಇನ್ನೊಬ್ಬರಿಗೆ ಸುಳಿವು ಸಿಕ್ಕದ ಹಾಗೆ ಈ ಪ್ರದ್ಯುಮ್ನನನ್ನು ಕೊಂದು ಬಿಡಿ'' ಎಂದು ಅಪ್ಪಣೆ ಮಾಡಿದನು. ಆ ನೀಚರಾದ ಕುಮಾರರು ಹರ್ಷಿಸಿ ಅತ್ಯಾದರದಿಂದ ಪ್ರದ್ಯುಮ್ನನನ್ನು ಸಂಗಡ ಕರೆದುಕೊಂಡು ಕಾಲಾಂಬುವೆಂಬ ವಾಪಿಕೆಗೆ ಹೋದರು. ಒಟ್ಟಿಗೆ ಒಂದಾಗಿ ಅವರೆಲ್ಲ ಅವನ ಮೇಲೆ

ಹಾರಿಕೊಂಡನು ಅವನನ್ನು ಘಾತಿಸಬೇಕೆಂಬ ಇಚ್ಛೆಯಿಂದ "ಈ ವಾಪಿಯಲ್ಲಿ ಜಲಕ್ರೀಡೆಯಾಡೋಣ,ನಡೆ" ಎಂದು ಮೇಲಿಂದ ಮೇಲೆ ಅವನನ್ನು ಉಬ್ಬಿಸತೊಡಗಿದರು. ಆಗಲೇ ಪ್ರಜ್ಞಪ್ತಿವಿದ್ಯೆ ಪ್ರದ್ಯುಮ್ನನ ಕಿವಿಯಲ್ಲಿ ಎಲ್ಲಾ ಸಂಗತಿಯನ್ನೂ ಇದ್ದುದಿದ್ದಂತೆ ಹೇಳಿಬಿಟ್ಟಿತು. ಅದನ್ನು ಕೇಳುತ್ತಲೇ ಅವನಿಗೆ ಕೋಪ ಬಂತು. ಅದೇ ಕ್ಷಣ ಮಾಯೆಯಿಂದ ತನ್ನ ಮೂಲಶರೀರವನ್ನು ಎಲ್ಲಿಯೋ ಬಚ್ಚಿರಿಸಿ ಕೃತಕಶರೀರದಿಂದ ವಾಪಿಕೆಗೆ ಧುಮ್ಮಿಕ್ಕಿದನು. ಅವನನ್ನು ಕೊಲ್ಲುವ ಕಾಂಕ್ಷೆಯಿಂದ ಕೂಡಲೇ ಆ ನಿರ್ದಯಿ ಕುಮಾರರು ಒಟ್ಟಿಗೆ ಅವನ ಮೇಲೆ ತಾವು ಧುಮುಕಿದರು. ಆದರೆ ಪ್ರದ್ಯುಮ್ನನು ಒಬ್ಬ ಹೊರತಾಗಿ ಉಳಿದೆಲ್ಲ ಕುಮಾರರನ್ನೂ ಕಾಲು ಮೇಲೆ, ಮುಖ ಕೆಳಗೆ ಮಾಡಿ ಸ್ತಂಭಿಸಿಬಿಟ್ಟನು. ಆ ಒಬ್ಬನಿಗೆ ಪಂಚಜಡೆ ಹೆಣೆದು ಸುದ್ದಿಕೊಡಲು ಕಾಲಸಂವರನಲ್ಲಿಗೆ ಅಟ್ಟಿದನು.

ವಂಕ್ಕಳಿಗಾದ ಪಾಡು ಕೇಳಿ ಕಾಲಸಂವರನು ಮತ್ತೂ ಕ್ರೋಧಗೊಂಡು ಯುದ್ಧಸಿದ್ಧತೆ ಮಾಡಿಕೊಂಡು ಸರ್ವಸೇನೆಯೊಂದಿಗೆ ಅಲ್ಲಿಗೆ ತಲುಪಿದನು. ಅತ್ತ ಪ್ರದ್ಯುಮ್ನನೂ ವಿದ್ಯಾಬಲದಿಂದ ಒಂದು ಸೇನೆಯನ್ನು ನಿರ್ಮಿಸಿದನು. ಅದರೊಂದಿಗೆ ಬಲು ಹೊತ್ತು ಹೋರಾಡಿ ಕಾಲಸಂವರ ಸೋತನು. ಬದುಕುವ ಆಸೆ ಬಿಟ್ಟು ಹೋಗಿ ಕನಕಮಾಲೆಗೆ "ನೀನು ಬೇಗನೆ ನನಗೆ ಪ್ರಜ್ಞಪ್ತಿವಿದ್ಯೆಯನ್ನು ಕೊಡು" ಎಂದನು. ಅವಳು "ನಾನು ಬಾಲ್ಯಕಾಲದಲ್ಲೇ ಪ್ರದ್ಯುಮ್ನನಿಗೆ ಸ್ತನ್ಯದೊಂದಿಗೇ ಆ ವಿದ್ಯೆಯನ್ನೂ ಕೊಟ್ಟುಬಿಟ್ಟೆ" ಎಂದಳು. ಮಾನಿಷ್ಠನಾದ ಕಾಲಸಂವರನು ಪತ್ನಿಯ ಮಾಯಾಮಯ ದುಶ್ಚೇಷ್ಟಿತವನ್ನು ಅರಿತವನಾಗಿ, ಪುನಃ ರಣಭೂಮಿಗೆ ಮರಳಿ ಯುದ್ಧವನ್ನು ಮಾಡತೊಡಗಿದನು. ಪ್ರದ್ಯುಮ್ನನು ಅವನನ್ನು ಬಂಧಿಸಿ ಶಿಲಾತಲವೊಂದರ ಮೇಲೆ ಇರಿಸಿದನು. ಆ ವೇಳೆಗೆ ನಾರದನು ಅಲ್ಲಿಗೆ ಬಂದನು. ಪ್ರದ್ಯುಮ್ನನು ಸತ್ಕರಿಸಿದನು. ನಾರದನು ಅವನಿಗೆ ಎಲ್ಲಾ ಸಂಬಂಧಗಳನ್ನೂ ತಿಳಿಸಿದನು. ಪ್ರದ್ಯುಮ್ನನು ಕಾಲಸಂವರನನ್ನು ಬಂಧನದಿಂದ ಬಿಟ್ಟು ಕ್ಷಮೆ ಬೇಡಿದನು. ಹಾಗೆಯೇ "ತಾಯಿ ಕನಕಮಾಲೆ ಈ ಹಿಂದೆ ಏನು ಮಾಡಿದಳೋ ಅದನ್ನು ಪೂರ್ವಕರ್ಮವಶಳಾಗಿಯೇ ಮಾಡಿದ್ದಾಳೆ; ಆದ್ದರಿಂದ ಅವಳನ್ನು ಕ್ಷಮಿಸಿ" ಎಂದು ಕೋರಿದನು. ಹಾಗೆಯೇ ನಿರುಪಾಯ ನಿಸ್ಸಹಾಯಕ ಸ್ಥಿತಿಯಲ್ಲಿದ್ದ ಐನೂರು ಮಂದಿ ಕುಮಾರರನ್ನೂ ಬಿಡುಗಡೆಮಾಡಿ, ಭ್ರಾತೃಸ್ನೇಹವನ್ನು ಪ್ರಕಟಿಸುತ್ತ ಅವರಲ್ಲಿ ಬಾರಿಬಾರಿಗೆ ಕ್ಷಮೆಬೇಡಿದನು.

ಆಮೇಲೆ ಕೃಷ್ಣ ರುಕ್ಮಿಣಿಯರ ದರ್ಶನೋತ್ಸುಕತೆಯಿಂದ ಪ್ರದ್ಯುಮ್ನನು ಅಲ್ಲಿಂದ ಹೊರಡಲು ಕಾಲಸಂವರನ ಅಪ್ಪಣೆ ಬೇಡಿದನು. ಅವನು ಸಂತಸದಿಂದ ಬೀಳ್ಕೊಟ್ಟನು.

ಅಲ್ಲಿಂದ ಪ್ರದ್ಯುಮ್ನನು ನಾರದನ ಸಂಗಡ ವಿಮಾನಾರೂಢನಾಗಿ ದ್ವಾರಿಕೆಗೆ ತೆರಳಿದನು. ಹಲಬಗೆಯ ಕಥೆಗಳಿಂದ ಕಾಲಕ್ಷೇಪಮಾಡುತ್ತ ಆಕಾಶದಲ್ಲಿ ಬರುತ್ತಿರುವಾಗ ಹಸ್ತಿನಪುರವನ್ನು ದಾಟಿ ಸ್ವಲ್ಪ ಮುಂದೆ ಹೋಗುತ್ತಿರುವಷ್ಟರಲ್ಲಿ ಒಂದು ಸೈನ್ಯ ಅವರ ದೃಷ್ಟಿಪಥಕ್ಕೆ ಬಿತ್ತು. ಆ ಸೈನ್ಯವನ್ನು ಕಂಡು ಪ್ರದ್ಯುಮ್ನನು ನಾರದನೊಂದಿಗೆ "ಹೇ ಪೂಜ್ಯ, ಕೆಳಗಡೆ ಅರಣ್ಯದ ನಡುವೆ ಕಾಣಿಸುತ್ತಿರುವ ಈ ಮಹಾಸೈನ್ಯ ಯಾರದು ? ಇದು

ಪಶ್ಚಿಮದಿಕ್ಕಿನತ್ತ ಮುಖವಾಗಿದೆ. ಇದು ಇಷ್ಟು ವೇಗವಾಗಿ ಎಲ್ಲಿಗೆ ಏತಕ್ಕೆ ಹೊರಟಿದೆ?" ಎಂದು ಪ್ರಶ್ನಿಸಿದನು. ಆಗ ನಾರದನು "ಪ್ರದ್ಯುಮ್ನ, ಈಗ ನಾನು ನಿನಗೆ ಒಂದು ಕಥೆಯ ಸ್ವಲ್ಪ ಭಾಗ ಹೇಳುತ್ತೇನೆ. ಕೇಳು" ಎಂದು ತಿಳಿಸಿ ಅದನ್ನಿಂತು ಹೇಳಿದನು :

"ಕುರುವಂಶಕ್ಕೆ ಭೂಷಣಪ್ರಾಯನಾಗಿ ದುರ್ಯೋಧನನೆಂಬ ಅರಸುಂಟು. ಯುದ್ಧದಲ್ಲಿ ಅನ್ಯರಿಗೆ ಅವನು ದುರ್ಯೋಧನನೇ ಸರಿ. ಅವನಿರುವುದು ಹಸ್ತಿನಾಪುರದಲ್ಲಿ. ಒಮ್ಮೆ ಆತನು ಕೃಷ್ಣನೊಡನೆ ಒಂದು ಸಂಕಲ್ಪ ಮಾಡಿಕೊಂಡಿದ್ದನು. 'ನನಗೆ ಒಂದು ಪಕ್ಷ ಕನ್ಯೆಯಾದರೆ, ನಿನಗೆ ರುಕ್ಮಿಣಿಸತ್ಯಭಾಮೆಯರಲ್ಲಿ ಪುತ್ರನಾದರೆ ಮೊದಲು ಹುಟ್ಟುವ ಆ ನಿನ್ನ ಪುತ್ರನಿಗೆ ನಾನು ನನ್ನ ಕನ್ಯೆಯನ್ನು ಕೊಡುತ್ತೇನೆ' ಎಂಬುದೇ ಅದು. ಆಮೇಲೆ ರುಕ್ಮಿಣಿಗೆ ನೀನು, ಸತ್ಯಭಾಮೆಗೆ ಭಾನು ಜತೆಜತೆಗೆ ಹುಟ್ಟಿದಿರಿ. ಆದರೆ ರುಕ್ಮಿಣಿಯ ಸೇವಕರು ಕೃಷ್ಣನಿಗೆ ಮೊದಲು ನಿನ್ನ ಸುದ್ದಿಯಿತ್ತರು. ಇದರಿಂದ ನೀನು ಅಗ್ರಜನೆಂದು ಘೋಷಿಸಲ್ಪಟ್ಟೆ. ಸತ್ಯಭಾಮೆಯ ಸ್ವಜನರು ಆಮೇಲೆ ಭಾನುವಿನ ಸುದ್ದಿಯಿತ್ತರು. ಇದರಿಂದ ಅವನು ಅನುಜನೆಂದು ಘೋಷಿಸಲ್ಪಟ್ಟನು. ಇದಾದ ಮೇಲೆ ಅಕಸ್ಮಾತ್ತಾಗಿ ಎಲ್ಲಿಗೋ ಹೋಗುತ್ತಿದ್ದ ಧೂಮಕೇತುವೆಂಬಸುರನು ನಿನ್ನನ್ನು ಅಪಹರಿಸಿ ಒಯ್ದನು. ಇದರಿಂದ ನಿನ್ನ ತಾಯಿ ರುಕ್ಮಿಣಿಗೆ ದುಃಖವಾಯಿತು. ಸತ್ಯಭಾಮೆ ಸಂತೋಷಪಟ್ಟಳು. ನಿನ್ನದೇನೂ ಸಮಾಚಾರ ಸಿಕ್ಕದಾದಾಗ ದುರ್ಯೋಧನನು ತನ್ನ ಉದಧಿಕುಮಾರಿಯನ್ನು ಭಾನುವಿಗೆ ಕೊಡಲು ಕಳಿಸಿಕೊಟ್ಟನು. ಇಕೋ, ಅದೇ ಕನ್ಯೆಯೇ ಈ ಮಹಾಸೈನ್ಯದ ರಕ್ಷಣೆಯಲ್ಲಿ ದ್ವಾರಿಕೆಗೆ ಹೋಗುತ್ತಿದ್ದಾಳೆ; ಅವಳು ಸತ್ಯಭಾಮೆಯ ಸುತ ಭಾನುವಿನ ಸತಿಯಾಗಲಿದ್ದಾಳೆ."

ಇದನ್ನು ಕೇಳಿ ಪ್ರದ್ಯುಮ್ನನು ನಾರದನನ್ನು ಅಲ್ಲೇ, ನಭದಲ್ಲೇ ಕೆಲಹೊತ್ತು ನಿಲ್ಲ ಹೇಳಿ ತಾನು ಅದೇ ಕ್ಷಣ ಕೆಳಗಿಳಿದು ಬಂದು ಭಿಲ್ಲನ ವೇಷದಲ್ಲಿ ಸೇನೆಯೆದುರು ಹೋಗಿ ನಿಂತನು. ಅವನು "ಕೃಷ್ಣನು ನನಗೆ ಸಲ್ಲುವಂತೆ ನಿಶ್ಚಯಿಸಿರುವ ಸುಂಕವನ್ನು ಕೊಟ್ಟು ಮುಂದೆ ಹೋಗಿ" ಎಂದನು. ಅದಕ್ಕೆ ಕೆಲವರು "ಕೇಳು, ಏನು ಕೇಳುತ್ತೀಯೋ" ಎಂದರು. ಭಿಲ್ಲನು "ಈ ಸಮಸ್ತಸೇನೆಯಲ್ಲಿ ಯಾವುದು ಸಾರಭೂತ ವಸ್ತುವುಂಟೋ ಅದನ್ನೇ ಕೇಳುತ್ತೇನೆ" ಎಂದನು. ಜನರು ಕೆರಳಿ "ಈ ಸೇನೆಯಲ್ಲಿ ಸಾರಭೂತವಾದ್ದು ಕನ್ಯೆಯೇ" ಎಂದರು ಭಿಲ್ಲನು "ಹಾಗಿದ್ದ ಪಕ್ಷಕ್ಕೆ ಕನ್ಯೆಯೇ ನನಗೆ ಕೊಡಲ್ಪಡಲಿ" ಎಂದನು. ಜನರು "ನೀನು ಕೃಷ್ಣನಿಗೆ ಹುಟ್ಟಿದಾತನಲ್ಲವಲ್ಲಾ" ಎಂದರು. ಭಿಲ್ಲನು ಆಗ್ರಹಪೂರ್ವಕವಾಗಿ "ನಾನು ಕೃಷ್ಣನಿಗೆ ಹುಟ್ಟಿದವನೇ" ಎಂದನು. "ಈ ಅಸಂಬದ್ಧ ಪ್ರಲಾಪಿಯ ಧಾರ್ಷ್ಟ್ಯ ನೋಡಿ" ಎನ್ನುತ್ತ ಅವನನ್ನು ಬಿಲ್ಲ ಕೊಪ್ಪಿನಿಂದ ದೂರ ತಳ್ಳಿ ಮುನ್ನಡೆಯಲು ಅವರು ಉದ್ಯತರಾಗುತ್ತಿದ್ದಂತೆ, ಪ್ರದ್ಯುಮ್ನನೂ ವಿದ್ಯಾಬಲದಿಂದ ಭಿಲ್ಲಸೇನೆಯೊಂದನ್ನು ನಿರ್ಮಿಸಿ ದುರ್ಯೋಧನನ ಸೇನೆಯನ್ನು ಗೆದ್ದು, ಕನ್ಯೆಯನ್ನೆತ್ತಿಕೊಂಡು ಆಕಾಶಕ್ಕೆ ಹೋದನು. ತನ್ನ ವಿಮಾನಕ್ಕೆ ಬಂದು ಮೂಲರೂಪದಲ್ಲಿ ಕಾಣಿಸಿಕೊಂಡನು. ಆಗ ಆ ಕನ್ಯೆ ಆ ಸುಂದರನನ್ನು ನೋಡಿ ನಿರ್ಭೀತಳಾದಳು. ನಾರದನ

ಮೂಲಕ ಯಥಾರ್ಥಸಂಗತಿ ತಿಳಿದು ಹರ್ಷಿತೆಯಾದಳು.

ಪ್ರದ್ಯುಮ್ನನು ಉದಧಿಕುಮಾರಿ ನಾರದರೊಂದಿಗೆ ದ್ವಾರಿಕೆಗೆ ಸೇರಿದನು. ದೂರದಿಂದಲೇ ಸಾಗರಪರಿವೃತವೂ ಪ್ರಾಕಾರರಕ್ಷಿತವೂ ಆದ ನಗರವನ್ನು ನೋಡಿದನು. ಅದೇ ವೇಳೆಗೆ ಭಾನುಕುಮಾರನೂ ಅಶ್ವಾರೋಹ ವ್ಯಾಯಾಮದ ಸಲುವಾಗಿ ನಗರದ ಹೊರವಲಯಕ್ಕೆ ಬಂದಿರಲು, ಪ್ರದ್ಯುಮ್ನ ಅವನನ್ನು ನೋಡಿದನು. ತನ್ನ ವಿಮಾನವನ್ನು ನಭದಲ್ಲಿ ನಿಲ್ಲಿಸಿ ಬಿಟ್ಟು, ವೃದ್ಧವೇಷದಲ್ಲಿ ಒಂದು ದಿವ್ಯಾಶ್ವದೊಡನೆ ಭಾನುಕುಮಾರನಲ್ಲಿಗೆ ಬಂದನು. ''ನಾನು ಈ ಕುದುರೆಯನ್ನು ಭಾನುಕುಮಾರನಿಗಾಗಿ ತಂದಿದ್ದೇನೆ'' ಎಂದನು. ನೋಡುತ್ತಲೇ ಭಾನು ಆ ಸುಂದರ ಆಕೃತಿಯ ಅಶ್ವವನ್ನೇರಿದನು. ಇಚ್ಛಾರೂಪಿಯಾದ ಆ ಕುದುರೆ ಭಾನುವನ್ನು ಬಲುಹೊತ್ತು ಬಳಲಿಸಿ ಕೊನೆಗೆ ಸ್ವೇಚ್ಛೆಯಿಂದ ಅವನನ್ನು ವೃದ್ಧನಲ್ಲಿಗೆ ಹಿಂದಿರುಗಿಸಿ ತಂದಿತು. ಭಾನು ಕುದುರೆಯಿಂದಿಳಿದು ಬಂದನು. ಆಗ ವೃದ್ಧನು ಗಹಗಹಿಸುತ್ತ, ಕುದುರೆಯನ್ನು ಚಪ್ಪರಿಸುತ್ತ, ವ್ಯಂಗ್ಯೋಕ್ತಿಗಳಿಂದ ಅವನಿಗೆ ''ಆಹಾ, ಕುದುರೆಯ ಸವಾರಿಯಲ್ಲಿ ತಾವು ಎಂಥ ಕುಶಲಿಗಳು'' ಎಂದನು. ಅಲ್ಲದೆ "ನಾನಾದರೋ ಮುದುಕ; ನಾ ನಾಗಿ ಕುದುರೆಯ ಮೇಲೇರಿ ಕೂರುವುದು ನನ್ನಿಂದಾಗದು. ಯಾರಾದರೂ ನನ್ನನ್ನು ಕೂರಿಸಿದರೆ ನಾನು ನನ್ನ ಕೌಶಲವನ್ನು ತೋರುತ್ತೇನೆ'' ಎಂದನು. ಆಗಲೇ ಭಾನುವಿನ ಕಡೆಯ ಜನರು ಅವನನ್ನು ಅಶ್ವದ ಮೇಲೆ ಹತ್ತಿಸಲು ಉದ್ಯತರಾದರು. ಆದರೆ ಪ್ರದ್ಯುಮ್ನನು ತನ್ನ ಶರೀರವನ್ನು ಮಹಾಭಾರಗೊಳಿಸಿದ್ದರಿಂದ ಹಲವರು ಸೇರಿಯೂ ಅವನನ್ನು ಎತ್ತುವುದು ದುರ್ಭರವಾಯಿತು. ಹೀಗೆ ತನ್ನ ಮಾಯೆಯಿಂದ ಅವರನ್ನು ಬಳಲಿಸಿ, ವೃದ್ಧವೇಷದ ಪ್ರದ್ಯುಮ್ನನು ತಾನೇ ಕುದುರೆಯೇರಿ ತನ್ನ ಕೌಶಲವನ್ನು ತೋರುತ್ತ ಹೊರಟುಹೋದನು.

ಆಮೇಲೆ ಪ್ರದ್ಯುಮ್ನನು ಮಾಯಾಮರ್ಕಟದಿಂದ, ಮಾಯಾಶ್ವದಿಂದ, ಸತ್ಯಭಾಮೆಯ ಉಪವನವನ್ನು ಹಾಳುಗೆಡವಿದನು. ಮಾಯೆಯಿಂದ ಆಕೆಯ ಮಹಾವಾಪಿಯನ್ನು ಒಣಗಿಸಿದನು. ನಗರದ್ವಾರದ ಬಳಿ ಕೃಷ್ಣನು ಬರುತ್ತಿರುವುದು ನೋಡಿ ಅವನ ಮೇಲೆ ಮಕ್ಷಿಕಗಳನ್ನೂ ದಂಶಮಶಕಗಳನ್ನೂ ಮಾಯೆಯಿಂದ ಮಿಗಿಲಾಗಿ ಸೃಜಿಸಿ ಬಿಡಲು ಕೃಷ್ಣನಿಗೆ ಮುಂದುವರಿಯುವುದು ಕಷ್ಟವಾಗಿ ಕೈಬೀಸುತ್ತ ಬೀಸುತ್ತ ಅವನು ಹಿಂದು ಹಿಂದಕ್ಕೇ ಹೋದನು. ಆಮೇಲೆ ಪ್ರದ್ಯುಮ್ನನು ಖರಮೇಷ ರಥಾರೂಢನಾಗಿ ನಗರದಲ್ಲಿ ಬಲುಹೊತ್ತು ಕ್ರೀಡಾವಿಹಾರಮಾಡಿದನು. ಹೀಗೆ ಪೌರರನ್ನು ನಾನಾರೀತಿಯ ಕ್ರೀಡೆಗಳಿಂದ ಸಮ್ಮೋಹಿಸಿ, ವಿನೋದಕ್ಕೆ ತನ್ನ ಅಜ್ಜ ವಸುದೇವನೊಡನೆ ಮೇಷಯುದ್ಧಮಾಡಿದನು.

ಆಮೇಲೆ ಸತ್ಯಭಾಮೆಯ ಭವನಕ್ಕೆ ಬಂದನು. ಅಲ್ಲಿ ಬ್ರಾಹ್ಮಣಭೋಜನವಾಗುವುದಿತ್ತು. ಪ್ರದ್ಯುಮ್ನನು ತಾನೂ ವಿಪ್ರವೇಷಧಾರಿಯಾಗಿ ಎಲ್ಲರಿಗೂ ಮುಂದಿನ ಆಸನವೊಂದರಲ್ಲಿ ಹೋಗಿ ಕುಳಿತನು. ಒಬ್ಬ ಅಪರಿಚಿತ ಬ್ರಾಹ್ಮಣನು ಎಲ್ಲರಿಗೂ ಮುಂದೆ ಕುಳಿತದ್ದು ಕಂಡು ಉಳಿದ ವಿಪ್ರರೆಲ್ಲಾ ಕುಪಿತರಾದರು. ನೆಲಕ್ಕಂಟಿದ ಆಸನಗಳಿಂದ ಆ

ಬ್ರಾಹ್ಮಣರನ್ನು ಅವನು ಕಾಡಿ ಪೀಡಿಸಿದನು. ಆಮೇಲೆ ಆ ವಿಪ್ರಭೋಜನಕ್ಕೆ ಮಾಡಿದ ಅಡುಗೆಯನ್ನೆಲ್ಲ ತಾನೊಬ್ಬನೇ ತಿಂದುಹಾಕಿದನು. ಮತ್ತೇನೂ ಉಳಿಯದಾದಾಗ ಸತ್ಯಭಾಮೆಯನ್ನು ಕೃಪಣೆಯೆಂದಾಡಿ, ತಿಂದದ್ದನ್ನೆಲ್ಲಾ ಅಲ್ಲೇ ವಾಂತಿಮಾಡಿ ಅಲ್ಲಿಂದ ಹೊರಟುಹೋದನು.

ಈಗ ಕ್ಷುಲ್ಲಕನ ವೇಷದಲ್ಲಿ ರುಕ್ಮಿಣಿಯಲ್ಲಿಗೆ ಹೋಗಿ ಅಲ್ಲಿ ಆಕೆಯಿತ್ತ ಮೋದಕಗಳನ್ನು ತಿಂದನು. ಆ ವೇಳೆಗೆ ಸತ್ಯಭಾಮೆಯಿಂದ ಆಜ್ಞಪ್ತನಾದ ನಾಪಿತನು ತಲೆಗೂದಲು ಕೊಳ್ಳಲು ರುಕ್ಮಿಣಿಯಲ್ಲಿಗೆ ಬಂದನು. ಪ್ರದ್ಯುಮ್ನನು ವಿಷಯವೇನೆಂದು ಕೇಳಿ ತಿಳಿದು ಬಂದವರನ್ನು ಚೆನ್ನಾಗಿ ತಿರಸ್ಕರಿಸಿ ಕಳಿಸಿದನು. ಸತ್ಯಭಾಮೆಯ ದೂರು ಕೇಳಿ ಬಲದೇವನು ರುಕ್ಮಿಣಿಯ ಭವನಕ್ಕೆ ಬರಲು ಉದ್ಯತನಾದನು. ಆಗ ಪ್ರದ್ಯುಮ್ನ ಒಬ್ಬ ಬ್ರಾಹ್ಮಣನ ರೂಪದಲ್ಲಿ ಬಾಗಿಲ ಬಳಿ ಕಾಲು ಚಾಚಿಕೊಂಡು ಬಿದ್ದುಕೊಂಡನು. ಬಲದೇವನು ಅವನನ್ನು ದೂರ ಸರಿಯಲು ಹೇಳಿದನು. ಆದರೆ ಅವನು ಸ್ವಲ್ಪವೂ ಮಿಸುಕದೆ ''ನಾನಿಂದು ಸತ್ಯಭಾಮೆಯ ಮನೆಯಲ್ಲಿ ಚೆನ್ನಾಗಿ ಉಂಡುಬಂದಿದ್ದೇನೆ ; ನನ್ನಿಂದ ಏಳಲು ಆಗುತ್ತಿಲ್ಲ'' ಎಂದನು. ಕುಪಿತನಾದ ಬಲದೇವನು ಅವನ ಕಾಲು ಹಿಡಿದು ಎಳೆದು ಹಾಕಲು ನೋಡಿದನು. ಅವನು ವಿದ್ಯಾಬಲದಿಂದ ಕಾಲನ್ನು ಭಾರಗೊಳಿಸಿದ್ದರಿಂದ ಎಳೆದೂ ಎಳೆದೂ ಬಲದೇವನು ಸುಸ್ತಾದನು. ಹೀಗೆ ಆ ವಿದ್ಯಾಕುಶಲಿ ಲೋಕವಿಸ್ಮಯ ಉಂಟುಮಾಡುತ್ತ ಬಲುಹೊತ್ತು ಕ್ರೀಡಾವಿನೋದದಲ್ಲಿದ್ದನು.

ಅದೇ ಕಾಲಕ್ಕೆ ಪ್ರದ್ಯುಮ್ನನು ಆಗಮಿಸುವ ಸೂಚನೆಯಾಗಿ ತಲೆದೋರುವ ಚಿಹ್ನೆಗಳೆಂದು ನಾರದನು ಏನನ್ನು ಹೇಳಿದ್ದನೋ ಅವೆಲ್ಲ ರುಕ್ಮಿಣಿಗೆ ಕಾಣಿಸಿಕೊಂಡವು. ಅವಳ ಸ್ತನ್ಯವುಕ್ಕಿತು. ಆಕೆ ಅಚ್ಚರಿಗೊಂಡು ತನ್ನಲ್ಲಿಯೇ ''೧೬ ವರ್ಷ ಕಳೆದ ನಂತರದಲ್ಲಿ ಈಗ ನನ್ನ ಮಗನೇ ರೂಪವನ್ನು ಮರಸಿಕೊಂಡು ಬಂದಿರಲಾರನೇ'' ಎಂದು ಆಲೋಚಿಸಿದಳು. ಅದೇ ಕ್ಷಣದಲ್ಲಿ ಪ್ರದ್ಯುಮ್ನನು ತನ್ನ ಮೂಲಸ್ವರೂಪದಲ್ಲಿ ಪ್ರಕಟವಾಗಿ ಪುತ್ರಸ್ನೇಹದಿಂದ ಮಾತೆಗೆ ಮಣಿದನು. ರುಕ್ಮಿಣಿ ಆನಂದಭರಿತಳಾಗಿ ಆಕೆಗೆ ಅಶ್ರುಬಾಷ್ಪವುಕ್ಕಿತು. ಮಗನನ್ನು ತೆಗೆದಪ್ಪಿ ಹಲಗಾಲದ ದುಃಖವನ್ನು ಮರೆತಳು. ಅವಳಿಗೆ ರೋಮಾಂಚನವಾಯಿತು. ಪರಸ್ಪರರಲ್ಲಿ ಕುಶಲಸಮಾಚಾರವಾದ ಮೇಲೆ ಪ್ರದ್ಯುಮ್ನನಿಗೆ ''ಮಗೂ, ಆ ಕನಕಮಾಲೆ ಧನ್ಯೆ ; ನಿನ್ನ ಬಾಲ್ಯಕಾಲದ ಬಾಲಲೀಲೆಗಳನ್ನು ನೋಡುವುದರಿಂದ ಪುತ್ರಜನನದ ಸುಖಾನುಭವ ಮಾಡಿದಳು'' ಎಂದಳು. ತಾಯಿ ಹೀಗೆನ್ನಲು ಅವನು ''ತಾಯೇ, ಇಕೋ ನಾನು ಇಲ್ಲೇ ನನ್ನ ಬಾಲಲೀಲೆಗಳನ್ನು ತೋರುತ್ತೇನೆ, ನೋಡು'' ಎಂದನು. ಅದೇ ಕ್ಷಣದಲ್ಲಿ ಒಂದು ದಿನದ ಮಗುವಾದನು. ಅದು ನಯನೋತ್ಪಲಗಳನ್ನು ಅರಳಿಸಿಕೊಂಡು ಕರಾಂಗುಷ್ಠವನ್ನು ಚೀಪುತ್ತಿದ್ದಿತು. ಸ್ವಲ್ಪ ಹೊತ್ತಿನ ಮೇಲೆ ಸ್ತನ್ಯಪಾನ ಮಾಡತೊಡಗಿತು. ಅಂಗತ್ತನಾಗಿ ಮಲಗಿ ತಾಯಿಯ ಕೈಬೆರಳುಗಳಿಗೆ ಸೌಖ್ಯ ನೀಡುತ್ತಿತ್ತು. ಎದೆಯಲ್ಲಿ ಮಾಟತೊಡಗಿತು. ಏಳುವ ಬೀಳುವ ಸಾಹಸ ಮಾಡಿತು. ತಾಯಿಯ ಕೈಬೆರಳು ಹಿಡಿದು ರತ್ನದ ನೆಲಗಟ್ಟಿನ ಮೇಲೆ ಹೆಜ್ಜೆಹಾಕತೊಡಗಿತು. ಧೂಳಿಯಲ್ಲಿ ಆಡಿ

ಬಂದು ತಾಯಿಯ ಕೊರಳನ್ನಪ್ಪಿ ಸುಖ ನೀಡಿತು. ಅವಳ ಮೊಗದತ್ತ ಕಣ್ಣುನಟ್ಟು ನಗುವುದೂ ತೊದಲ್ನುಡಿವುದೂ ಮಾಡಿತು.

ಹೀಗೆ ಬಾಲಕ್ರೀಡೆಗಳಿಂದ ತಾಯಿಯ ಮನೋರಥವನ್ನು ಪೂರೈಸಿ ಪ್ರದ್ಯುಮ್ನನು ನಿಜರೂಪದಲ್ಲಿ ಮತ್ತೆ ಕಾಣಿಸಿಕೊಂಡು ವಂದಿಸಿ, "ನಾನು ನಿನ್ನನ್ನು ಆಕಾಶದಲ್ಲಿ ಕರೆದೊಯ್ಯುತ್ತೇನೆ" ಎಂದನು. ತನ್ನೆರಡೂ ಭುಜಗಳಿಂದ ರುಕ್ಮಿಣಿಯನ್ನು ಕೂಡಲೇ ಮೇಲಕ್ಕೆತ್ತಿ ಆಕಾಶದಲ್ಲಿ ನಿಂತುಕೊಂಡು, "ಸಮಸ್ತ ಯಾದವರೇ ಕೇಳಿ, ನೀವೆಲ್ಲ ನೋಡುತ್ತಿರುವಂತೆಯೇ ನಾನು ಲಕ್ಷ್ಮೀಸದೃಶಳಾದ ಕೃಷ್ಣಪತ್ನಿ ರುಕ್ಮಿಣಿಯನ್ನು ಅಪಹರಿಸಿಕೊಂಡು ಕರೆದೊಯ್ಯುತ್ತಿದ್ದೇನೆ. ಯಾದವರೇ, ಶಕ್ತಿಯಿದ್ದರೆ ಅವಳನ್ನು ರಕ್ಷಿಸಿಕೊಳ್ಳಿ" ಎಂದನು. ಹೀಗೆ ನುಡಿದು, ಶಂಖವನ್ನು ಪೂರೈಸಿ, ವಿಮಾನದಲ್ಲಿ ನಾರದ ಮತ್ತು ಉದಧಿ ಕುಮಾರಿಯರ ಬಳಿಯಲ್ಲಿ ರುಕ್ಮಿಣಿಯನ್ನು ಕುಳ್ಳಿರಿಸಿದನು. ತಾನು ಯುದ್ಧಕ್ಕಾಗಿ ಆಕಾಶದಲ್ಲಿ ಬಂದು ನಿಂತನು. ಯಾದವರು ಕೂಡಲೇ ಚತುರಂಗ ಬಲದೊಂದಿಗೆ ಯುದ್ಧಸನ್ನದ್ಧರಾಗಿ ನಗರದಿಂದ ಹೊರಬಿದ್ದರು. ಪ್ರದ್ಯುಮ್ನನು ವಿದ್ಯಾಬಲದಿಂದ ಯಾದವರ ಸರ್ವಸೇನೆಯನ್ನೂ ಸಮ್ಮೋಹಿಸಿ, ಆಕಾಶಸ್ಥಿತನಾಗಿ ಕೃಷ್ಣನೊಡನೆ ಬಲುಹೊತ್ತು ಕಾದಿದನು. ಕೊನೆಗೆ ಕೃಷ್ಣನ ಅಸ್ತ್ರಕೌಶಲವನ್ನು ಪ್ರದ್ಯುಮ್ನನು ನಿರರ್ಥಕಗೊಳಿಸಿದ ಮೇಲೆ ಇಬ್ಬರೂ ಬಾಹುಯುದ್ಧಕ್ಕೆ ಉದ್ಯತರಾದರು. ಆಗ ರುಕ್ಮಿಣಿಯ ಮೂಲಕ ಪ್ರೇರಿತನಾದ ನಾರದನು ಪ್ರದ್ಯುಮ್ನನೆಡೆಗೆ ಬಂದು, ಅವರ ನಡುವಿನ ತಂದೆ ಮಕ್ಕಳ ಸಂಬಂಧವನ್ನು ತಿಳಿಸಿ, ಯುದ್ಧವನ್ನು ತಡೆದನು. ಆಮೇಲೆ ತನಗೆ ಮಣಿದ ಮಗನನ್ನು ನೋಡಿ ಕೃಷ್ಣನು ಆನಂದಿಸಿ ಅಶ್ರುಬಾಷ್ಪ ಸೂಸಿ ಹರಸಿದನು. ಆಮೇಲೆ ಮಾಯೆಯಿಂದ ಸಮ್ಮೋಹಿಸಿದ ಸೇನೆಯನ್ನು ವಿದ್ಯಾಬಲದಿಂದ ಮೇಲೆತ್ತಿ ಸಬಾಂಧವನಾಗಿ ಪ್ರದ್ಯುಮ್ನನು ನಗರಪ್ರವೇಶ ಮಾಡಿದನು. ರುಕ್ಮಿಣಿಯೂ ಜಾಂಬವತಿಯೂ ನಲಿದು ಉತ್ಸವ ಮಾಡಿದರು. ಪ್ರದ್ಯುಮ್ನನು ಉತ್ತಮ ಕನ್ನೆಯರನ್ನು ವರಿಸಿದನು.

ಕನಕಮಾಲೆ ಕನತ್ಕನಕಮಾಲೆಯನ್ನು ತೆಗೆದುಕೊಂಡು ಪತಿ ಕಾಲಸಂವರನೊಂದಿಗೆ ವಿವಾಹಸಮಯಕ್ಕೆ ಬಂದಳು. ಜಿನಧರ್ಮ ಪ್ರಭಾವದಿಂದ ಮಹಾಸುಖ ಸಂಪ್ರಾಪ್ತಿಯುಂಟಾದ ಪ್ರದ್ಯುಮ್ನನು ಉದಧಿಕುಮಾರಿ ಮುಂತಾದ ಕನ್ಯೆಯರನ್ನು ಮದುವೆಯಾದನು."—ಹೀಗೆ ಗೌತಮಸ್ವಾಮಿ ಹೇಳುತ್ತಾನೆ.

೪೮. ಯದುಕುಲಕುಮಾರೋದ್ದೇಶ ವರ್ಣನ

ಗೌತಮ ಗಣಧರನು ಶ್ರೇಣಿಕ ರಾಜನಿಗೆ "ಅಯ್ಯಾ, ನಾನು ಈಗ ಯಥಾಕ್ರಮದಲ್ಲಿ ನಿನಗೆ ಶಂಬ ಮತ್ತು ಸುಭಾನು ಇವರ ಉತ್ಪತ್ತಿಕಥನವನ್ನು ಹೇಳುತ್ತೇನೆ, ಕೇಳು" ಎಂದು ಹೇಳಲುಪಕ್ರಮಿಸಿದನು. ಮಧುವಿನ ಸೋದರ ಕೈಟಭನು ಅಚ್ಯುತಸ್ವರ್ಗದಲ್ಲಿ ದೇವನಾಗಿದ್ದವನು, ಆಯುರಂತ್ಯವು ಸನ್ನಿಹಿತವಾಗುತ್ತಲೂ ತಾನು ಸತ್ಯಭಾಮೆಗೆ ಪುತ್ರನಾಗಲೆಂದು ಬಯಸಿ ಕೃಷ್ಣನಿಗೆ ಒಂದು ಸುಂದರವಾದ ಹಾರವನ್ನಿತ್ತು ಹೋದನು.

ಸಂಜೆ ಜಾಂಬವತಿ ಪ್ರದ್ಯುಮ್ನನ ಪ್ರಯೋಗದಿಂದ ಸತ್ಯಭಾಮೆಯಂತೆ ರೂಪಧರಿಸಿ ಕೃಷ್ಣನಲ್ಲಿಗೆ ಬಂದು ರಮಿಸಿ ಆ ಹಾರವನ್ನು ತಾನು ಪಡೆದುಕೊಂಡಳು. ಕೈಟಭನ ಜೀವ ಆಗ ಜಾಂಬವತಿಯ ಗರ್ಭದಲ್ಲಿ ನೆಲಸಿತು. ಅವಳು ತನ್ನ ಮನೆಗೆ ಬಂದುಬಿಟ್ಟಳು. ಆಮೇಲೆ ಸತ್ಯಭಾಮೆ ಕೃಷ್ಣನಲ್ಲಿಗೆ ಬಂದು ಅವನೊಡನೆ ರಮಿಸಿ, ಸ್ವರ್ಗಚ್ಯುತನಾದ ಮತ್ತಾವುದೋ ಜೀವವನ್ನು ಗರ್ಭದಲ್ಲಿ ಧರಿಸಿದಳು. ಇಬ್ಬರ ಗರ್ಭವೂ ಬೆಳೆಯತೊಡಗಿತು. ತಂದೆತಾಯಿಗಳಿಗೂ ಬಂಧುಗಳಿಗೂ ನಲಿವಾಯಿತು. ನವಮಾಸ ನೆರೆದು ಜಾಂಬವತಿಗೆ ಶಂಬನೂ ಸತ್ಯಭಾಮೆಗೆ ಸುಭಾನುವೂ ಜನಿಸಿದರು. ಇತ್ತ ಪ್ರದ್ಯುಮ್ನ ಶಂಬರ ಅಭ್ಯುದಯದಿಂದ ರುಕ್ಮಿಣಿ ಜಾಂಬವತಿಯರು ನಲಿದರೆ, ಅತ್ತ ಭಾನು ಸುಭಾನುಗಳ ಅಭ್ಯುದಯದಿಂದ ಸತ್ಯಭಾಮೆ ನಲಿದಳು. ಕೃಷ್ಣನ ಅನ್ಯಪತ್ನಿಯರಿಗೂ ಅನೇಕ ಪುತ್ರರಾದರು. ಕುಮಾರಶತಸೇವಿತನಾದ ಶಂಬನು ಎಲ್ಲಾ ರೀತಿಯ ಕ್ರೀಡೆಗಳಲ್ಲೂ ಸುಭಾನುವನ್ನು ಮೀರಿಗೆಲ್ಲುತ್ತ ಅತಿಶಯವಾಗಿ ಕ್ರೀಡಾಲೋಲನಾಗಿದ್ದನು.

ರುಕ್ಮಿಣಿಯ ಸೋದರ ರುಕ್ಮಿಗೆ ವೈದರ್ಭಿಯೆಂಬುವಳು ಪುತ್ರಿ. ರುಕ್ಮಿಣಿ ಆ ಕನ್ಯೆಯನ್ನು ಪ್ರದ್ಯುಮ್ನನಿಗಾಗಿ ಬೇಡಿದಳು. ಆದರೆ ರುಕ್ಮಿ ಪೂರ್ವವಿರೋಧದ ಕಾರಣವಾಗಿ ಅವನಿಗೆ ಕೊಡಲೊಪ್ಪಲಿಲ್ಲ. ಇದನ್ನು ಕೇಳಿ ಶಂಬಪ್ರದ್ಯುಮ್ನರು ಭಿಲ್ಲವೇಷದಲ್ಲಿ ಅಲ್ಲಿಗೆ ಹೋಗಿ ರುಕ್ಮಿಯನ್ನು ಸೋಲಿಸಿ ಒತ್ತಂಬದಿಂದ ಕನ್ಯೆಯನ್ನು ಅಪಹರಿಸಿ ತಂದರು. ಆ ಕನ್ಯೆಯನ್ನು ಪ್ರದ್ಯುಮ್ನನು ವರಿಸಿ ದ್ವಾರಕೆಯಲ್ಲಿ ಅವಳೊಂದಿಗೆ ಸುಖದಲ್ಲಿರತೊಡಗಿದನು.

ಶಂಬನು ದ್ಯೂತಕುಶಲಿ. ಒಂದು ದಿನ ಅವನು ಎಲ್ಲರೂ ನೋಡುತ್ತಿದ್ದಹಾಗೆಯೇ ದ್ಯೂತದಲ್ಲಿ ಸುಭಾನುವಿನ ಧನವನ್ನೆಲ್ಲ ಗೆದ್ದುಬಿಟ್ಟು ಎಲ್ಲರಿಗೂ ಹಂಚಿಬಿಟ್ಟನು. ಹಾಗೆಯೇ ಮಾತಾಳಿಗಳಾದ ಪಕ್ಷಿಕ್ರೀಡೆಯಲ್ಲಿಯೂ ಶಂಬನು ಸುಭಾನುವನ್ನು ಗೆದ್ದನು. ಒಮ್ಮೆ ಕೃಷ್ಣನ ಸಭೆಯಲ್ಲಿ ಈ ಕುಮಾರರಿಗೆ ಗಂಧಯುಕ್ತಿಪ್ರಯೋಗದಲ್ಲಿ ವಿಚಾರವಾಗಿ ಅಲ್ಲಿಯೂ ಸುಭಾನು ಸೋತನು. ಅಗ್ನಿಶೋಧ್ಯವಾದ ವಸ್ತ್ರಯುಗ್ಮ ಮತ್ತು ದಿವ್ಯಾಲಂಕಾರಗಳನ್ನು ಪ್ರಾಪ್ತಿಸಿಕೊಂಡು ಆಗಲೂ ಅವನನ್ನು ಶಂಬನು ಸೋಲಿಸಿದನು. ಒಮ್ಮೆ ಶಂಬನು ತನ್ನ ಬಲಪ್ರದರ್ಶನಮಾಡಿ ಸುಭಾನುವನ್ನು ಸೋಲಿಸಿದ ರೀತಿಯಿಂದ ಅವನು ಒಮ್ಮೆಗೇ ಕೃಷ್ಣನಿಗೆ ಮೆಚ್ಚಾದನು. ಕೃಷ್ಣನು ಅವನಿಗೆ ವರ ಬೇಡುವಂತೆ ಒತ್ತಾಯಿಸಿದ್ದಕ್ಕೆ, ಒಂದು ತಿಂಗಳ ಕಾಲ ರಾಜ್ಯವನ್ನು ಬೇಡಿ ಪಡೆದು, ಏನೇನೋ ಮಾಡಿಬಿಟ್ಟನು. ಇದರಿಂದ ಪ್ರಣಯಕೋಪಿ ಕೃಷ್ಣನು ಆ ಉದ್ವೃತ್ತನಾದ ಮಗನನ್ನು ಹಿಡಿದು ಹೊಡೆದನು. ಒಂದು ದಿನ ಶಂಬಕುಮಾರನು ಕನ್ಯಾರೂಪಿನಿಂದ ರಥಾರೂಢನಾಗಿ ಹೋಗಿ ಸತ್ಯಭಾಮೆಯ ಮಡಿಲಲ್ಲಿ ಬಂದು ಕೂತನು. ಆಕೆಯಾದರೋ ಈ ಕನ್ಯೆ ತನ್ನ ಪುತ್ರ ಸುಭಾನುವಿಗಾಗಿ ತರಲ್ಪಟ್ಟದ್ದು ಎಂಬ ಭ್ರಾಂತಿಯಿಂದ ಸುಭಾನುವಿಗೆ ಆ ಕನ್ಯೆಯೊಂದಿಗೆ ಮದುವೆ ಮಾಡಿಸಿದಳು. ಆದರೆ ವಿವಾಹಾನಂತರ, ಜನ ನೋಡುತ್ತಿದ್ದ ಹಾಗೆಯೇ ಶಂಬನು ತನ್ನ ನಿಜರೂಪದಲ್ಲಿ ಕಾಣಿಸಿಕೊಂಡನು! ಅವನು ಒಂದೇ ರಾತ್ರಿ ನೂರ್ವರು

ಕನ್ಯೆಯರೊಂದಿಗೆ ವಿವಾಹಮಂಗಲಸ್ನಾನ ಮಾಡಿ ತಾಯಿ ಜಾಂಬವತಿಯನ್ನು ಸಂತಸಪಡಿಸಿದನು. ಸತ್ಯಭಾಮಾದಿ ರಾಣಿಯರ ನೂರಾರು ಕುಮಾರರೂ ಅನೇಕ ಕನ್ಯೆಯರನ್ನು ವರಿಸಿ ಸುಖದಲ್ಲಿರತೊಡಗಿದರು.

ಒಂದು ದಿನ ಶಂಬನು ಅಜ್ಜ ವಸುದೇವನ ಮನೆಗೆ ಹೋಗಿ ವಂದಿಸಿ ವಿನೋದದಿಂದ "ಹೇ ಪೂಜ್ಯ, ನೀವಾದರೂ ಲೋಕದಲ್ಲಿ ಬಲುಗಾಲ ಕ್ಲೇಶಪಡುತ್ತ ಸುತ್ತಾಡುತ್ತಿದ್ದಿರಿ ; ಆಗ ಎಲ್ಲೋ ಹಲವರು ವಿದ್ಯಾಧರ ಕನ್ಯೆಯರನ್ನು ಪಡೆದಿರಿ ; ಆದರೆ ನಾನು ಮನೆಯಲ್ಲಿ ಕುಳಿತೇ ಸ್ವಲ್ಪವೂ ಕ್ಲೇಶವಿಲ್ಲದೆ ಒಂದೇ ರಾತ್ರಿ ನೂರ್ವರು ಕನ್ಯೆಯರನ್ನು ಮದುವೆಯಾದೆ ; ನಮ್ಮಿಬ್ಬರಿಗೂ ಇರುವ ವ್ಯತ್ಯಾಸ ನೋಡಿದಿರಾ !" ಎಂದನು. ವಸುದೇವನು "ವತ್ಸ, ನೀನು ಬಾಣದ ಹಾಗೆ ಅನ್ಯಪ್ರೇರಿತನಾಗಿ (ಪ್ರದ್ಯುಮ್ನನಿಂದ) ನಡೆಯುತ್ತೀಯೆ ; ನಿನ್ನದೇ ನಡೆಯೆಲ್ಲುಂಟು ? ನಿನ್ನದೆಲ್ಲ ಬರೀ ಮನೆಯಲ್ಲಿ ಅಷ್ಟೆ. ನಮ್ಮಿಬ್ಬರ ನಡುವೆ ಅಂತರವುಂಟು. ನಾನು ವಿದ್ಯಾಧರ ನಗರಾಂಬುಧಿಯ ಮಕರ ; ನೀನು ದ್ವಾರಿಕಾಕೂಪದ ಮಂಡೂಕ. ಹೇ ಪಂಡಿತಂಮನ್ಯ, ನಿನಗೆ ನೀನೇ ನಿನ್ನನ್ನು ನನ್ನ ಸಮಾನವಾಗಿ ಭಾವಿಸಿಕೊಳ್ಳುತ್ತೀಯೆ. ನಾನು ವಿದ್ಯಾಧರನಗರಗಳಲ್ಲಿ ಪಡೆದ ಅನುಭವಗಳು, ಕಂಡದ್ದು ಕೇಳಿದ್ದು, ಅವು ತುಂಬ ರಮ್ಯವಾದವು ; ಅವು ಅನ್ಯರಿಗೆ ಅತಿದುರ್ಲಭವಾದವು." ಎಂದನು. ಆಗ ಶಂಬನು "ಆರ್ಯ, ನಾನು ನಿನ್ನ ವೃತ್ತಾಂತವನ್ನು ತಿಳಿಯಬಯಸುತ್ತೇನೆ. ಹೇಳು" ಎಂದನು. ವಸುದೇವನು "ವತ್ಸ, ನೀನು ಆನಂದಭೇರಿಯನ್ನು ಹೊಯ್ಸಿ ಸಮಸ್ತ ಯಾದವರಿಗೂ ಇದರ ಸೂಚನೆಯನ್ನು ಕೊಡು. ಎಲ್ಲರಿಗೂ ಒಟ್ಟಿಗೆ ನಾನು ಅದನ್ನು ತಿಳಿಸುತ್ತೇನೆ" ಎಂದನು. ಹಾಗೆಯೇ ಶಂಬನು ಮಾಡಲಾಗಿ, ಪತ್ನೀಪುತ್ರಸಮೇತರಾಗಿ ಸಮಸ್ತ ಯಾದವರೂ ಒಟ್ಟಾಗಿ ಬಂದು ಸೇರಿದರು. ವಸುದೇವನು ಸವಿಸ್ತರವಾಗಿ ಅವರಿಗೆ ತನ್ನ ವೃತ್ತಾಂತವನ್ನು ನಿರೂಪಿಸಿದನು. ಲೋಕಾಲೋಕವಿಭಾಗೋಕ್ತಿ, ಹರಿವಂಶಾನುಕೀರ್ತನೆ, ಸ್ವಕ್ರೀಡೆ, ಸೌರ್ಯಲೋಕೋಕ್ತಿ (ಸೂರ್ಯಪುರದ ಜನ ತನ್ನ ಮೇಲೆ ಸಮುದ್ರವಿಜಯನಲ್ಲಿಗೆ ತಂದ ಲೋಕಾಪವಾದ), ನಿರ್ಗಮನ—ಇತ್ಯಾದಿಗಳನ್ನು ನಿರೂಪಿಸಿದನು. ಹೀಗೆಯೇ ಪ್ರದ್ಯುಮ್ನ ಶಂಬರ ಉತ್ಪತ್ತಿ, ಅವರ ಪೂರ್ವದ ದಿವ್ಯ ಮಾನುಷ ಜನ್ಮಗಳು, ಮಾನವ ವಿದ್ಯಾಧರ ಸಂಬಂಧಗಳು ಇವನ್ನೂ ಹೇಳಿದನು. ವಸುದೇವನ ಅಂತಃಪುರದಲ್ಲಿದ್ದ ವಿದ್ಯಾಧರಪತ್ನಿಯರು ವಸುದೇವನ ಈ ಚರಿತೆಯನ್ನು ಕೇಳಿ ಪೂರ್ವವೃತ್ತಾಂತವನ್ನು ಸ್ಮರಿಸಿ ಸಂತೋಷಿಸಿದರು. ಸಭಾಸದರು, ವೃದ್ಧರು, ಪಾಂಡವರು ಈ ಮೊದಲಾಗಿ ಎಲ್ಲರೂ ಪರಮಾಶ್ಚರ್ಯಗೊಂಡರು. ಶಿವಾದೇವಿ ಮುಂತಾದವರು ಈ ಕಥಾರಸಪಾನದಿಂದ ಸಂಶಯರಹಿತರಾಗಿ ವಸುದೇವನನ್ನು ಪ್ರಶಂಸಿಸಿದರು. ಅರಸರೂ ಅಂತಃಪುರದವರೂ ಯಥಾಸ್ಥಾನಗಳಿಗೆ ಹೋದರು. ಅನೇಕಾಶ್ಚರ್ಯಗಳಿಂದ ಕೂಡಿದ ವಸುದೇವನ ಕಥೆ ಮತ್ತೆ ನವ್ಯವಾಯಿತು. ಮನೆಮನೆಯಲ್ಲೂ ದಿನದಿನದ ಮಾತಾಯಿತು.

ಆಮೇಲೆ ಶ್ರೇಣಿಕಮಹಾರಾಜನಿಗಾಗಿ ಗೌತಮಗಣಧರನು ಕೆಲವು ಕುಮಾರರ ವರ್ಣನೆಯನ್ನು ಹೀಗೆ ಮಾಡತೊಡಗಿದನು :

ಧರ, ಗುಣಧರ, ಯುಕ್ತಿಕ, ದುರ್ಧರ, ಸಾಗರ ಮತ್ತು ಚಂದ್ರ ಇವರು ಉಗ್ರಸೇನ ರಾಜನ ಪುತ್ರರು. ಮಹಾಸೇನ, ಶಿವಿ, ಸ್ವಸ್ಥ, ವಿಷದ ಮತ್ತು ಅನಂತಮಿತ್ರ ಇವರು ಉಗ್ರಸೇನನ ಚಿಕ್ಕಪ್ಪನಾದ ಶಾಂತನನ ಪುತ್ರರು. ಇವರಲ್ಲಿ ಮಹಾಸೇನನಿಗೆ ಸುಷೇಣ, ವಿಷಮಿತ್ರನಿಗೆ ಹೃದಿಕ, ಶಿವಿಗೆ ಸತ್ಯಕ, ಹೃದಿಕನಿಗೆ ಕೃತಿಧರ್ಮಾ ಮತ್ತು ದೃಢಧರ್ಮಾ, ಸತ್ಯಕನಿಗೆ ವಜ್ರಧರ್ಮಾ ಮತ್ತು ವಜ್ರಧರ್ಮನಿಗೆ ಅಸಂಗ ಎಂಬವರು ಪುತ್ರರು. ಸಮುದ್ರವಿಜಯ ರಾಜನಿಗೆ ಮಹಾನೇಮಿ, ಸತ್ಯನೇಮಿ, ದೃಢನೇಮಿ, ಭಗವಾನ್ ಅರಿಷ್ಟನೇಮಿ, ಸುನೇಮಿ, ಜಯಸೇನ, ಮಹೀಜಯ, ಸುಫಲ್ಗು, ತೇಜಃಸೇನ, ಮಯ, ಮೇಘ, ಶಿವನಂದ, ಚಿತ್ರಕ ಮತ್ತು ಗೌತಮ ಮೊದಲಾಗಿ ಹಲವರು ಪುತ್ರರಾದರು. ಅಕ್ಷೋಭ್ಯನಿಗೆ ಉದ್ಧವ, ಅಂಭೋಧಿ, ಜಲಧಿ, ವಾಮದೇವ, ಮತ್ತು ದೃಢವ್ರತ ಎಂಬೈವರು ಪುತ್ರರು ಪ್ರಸಿದ್ಧರು. ಸ್ತಿಮಿತನಾಗರನಿಂದ ಊರ್ಮಿಮಾನ್, ವಸುಮಾನ್, ವೀರ ಮತ್ತು ಪಾತಾಲಸ್ಥಿರ ಎಂಬ ನಾಲ್ವರು ಗಂಡುಮಕ್ಕಳು ಜನಿಸಿದರು. ವಿದ್ಯುತ್ಪ್ರಭ, ಮಾಲ್ಯವಾನ್ ಮತ್ತು ಗಂಧಮಾದನ ಎಂಬ ಮೂವರು ಹಿಮವಂತನ ಪುತ್ರರು. ನಿಷ್ಕಂಪ, ಅಕಂಪನ, ವಲಿ, ಯುಗಂತ, ಕೇಶರಿನ್, ಅಲಂಬುಷ ಇವರಾರು ಮಂದಿ ವಿಜಯನ ಮಕ್ಕಳಾಗಿ ಪ್ರಸಿದ್ಧರು. ಮಹೇಂದ್ರ, ಮಲಯ, ಸಹ್ಯ, ಗಿರಿ, ಶೈಲ, ನಗ ಮತ್ತು ಅಚಲ ಇವರು ಸಾರ್ಥಕರಾದ ಅಚಲನ ಪುತ್ರರು. ವಾಸುಕಿ, ಧನಂಜಯ, ಕರ್ಕೋಟಕ, ಶತಮುಖ ಮತ್ತು ವಿಶ್ವರೂಪ ಇವರೈವರು ಧರಣನ ಪುತ್ರರು. ದುಷ್ಪೂರ, ದುರ್ಮುಖ, ದುರ್ದರ್ಶ, ದುರ್ಧರ ಈ ನಾಲ್ವರು ಚತುರಕ್ರಿಯರಾದ ಪೂರಣಪುತ್ರರು. ಚಂದ್ರ, ಶಶಾಂಕ, ಚಂದ್ರಾಭ, ಶಶಿ, ಸೋಮ, ಅಮೃತಪ್ರಭ ಈ ಚಂದ್ರನಿರ್ಮಲಕೀರ್ತಿಯ ಆರು ಮಂದಿ ಪುತ್ರರು ಅಭಿಚಂದ್ರನಿಗೆ ಜನಿಸಿದವರು.

ಹಾಗೆಯೇ ವಸುದೇವನಿಗೆ ಅನೇಕ ಪುತ್ರರಾದರು. ಅವರಲ್ಲಿ ಕೆಲವರ ಹೆಸರನ್ನು ಇಲ್ಲಿ ಹೇಳುತ್ತೇನೆ, ಕೇಳು : ವಸುದೇವನಿಗೆ ವಿಜಯಸೇನೆಯಿಂದ ಅಕ್ರೂರ, ಕ್ರೂರ ; ಶ್ಯಾಮೆಯಿಂದ ಜ್ವಲನ, ಅಗ್ನಿವೇಗ ; ಗಂಧರ್ವಸೇನೆಯಿಂದ ವಾಯುವೇಗ, ಅಮಿತಗತಿ, ಮಹೇಂದ್ರಗಿರಿ ; ಮಂತ್ರಿಪುತ್ರಿ ಪದ್ಮಾವತಿಯಿಂದ ದಾರು, ವೃದ್ಧಾರ್ಥ, ದಾರುಕ ; ನೀಲಯಶೆಯಿಂದ ಸಿಂಹ, ಮತಂಗಜ ; ಸೋಮಶ್ರೀಯಿಂದ ನಾರದ, ಮರುದೇವ ; ಮಿತ್ರಶ್ರೀಯಿಂದ ಸುಮಿತ್ರ ; ಕಪಿಲೆಯಿಂದ ಕಪಿಲ, ಪದ್ಮಾವತಿಯಿಂದ ಪದ್ಮ, ಪದ್ಮಕ; ಅಶ್ವಸೇನೆಯಿಂದ ಅಶ್ವಸೇನ ; ಪೌಂಡ್ರೆಯಿಂದ ಪೌಂಡ್ರ ; ರತ್ನವತಿಯಿಂದ ರತ್ನಗರ್ಭ, ಸುಗರ್ಭ ; ಸೋಮದತ್ತಪುತ್ರಿಯಿಂದ ಚಂದ್ರಕಾಂತ, ಶಶಿಪ್ರಭ ; ವೇಗವತಿಯಿಂದ ವೇಗವಾನ್, ವಾಯುವೇಗ ; ಮದನವೇಗೆಯಿಂದ ದೃಢಮುಷ್ಟಿ, ಅನಾವೃಷ್ಟಿ, ಹಿಮಮುಷ್ಟಿ ; ಬಂಧುಮತಿಯಿಂದ ಬಂಧುಷೇಣ, ಸಿಂಹಸೇನ ; ಪ್ರಿಯಂಗುಸುಂದರಿಯಿಂದ ಶೀಲಾಯುಧ; ಪ್ರಭಾವತಿಯಿಂದ ಗಂಧಾರ, ಪಿಂಗಲ; ಜರೆಯಿಂದ ಜರತ್ಕುಮಾರ, ಬಾಹ್ಲೀಕ ; ಅವಂತಿಯಿಂದ ಸುಮುಖ, ದುರ್ಮುಖ, ಮಹಾರಥ; ರೋಹಿಣಿಯಿಂದ ಬಲದೇವ, ಸಾರಣ, ವಿದೂರಥ; ಬಾಲಚಂದ್ರೆಯಿಂದ ವಜ್ರದಂಷ್ಟ್ರ, ಅಮಿತಪ್ರಭ,

ದೇವಕಿಯಿಂದ ಕೃಷ್ಣ-ಈ ಪ್ರಕಾರವಾಗಿ ವಸುದೇವನ ಪುತ್ರರ ವರ್ಣನೆ ಮಾಡಲ್ಪಟ್ಟಿದೆ.

ಬಲದೇವನಿಗೆ ಉನ್ಮುಂಡ, ನಿಷಧ, ಪ್ರಕೃತಿದ್ಯುತಿ, ಚಾರುದತ್ತ, ಧ್ರುವ, ಪೀಠ, ಶಕ್ರುಂದಮನ, ಶ್ರೀಧ್ವಜ, ನಂದನ, ಧೀಮಾನ್, ದಶರಥ, ದೇವನಂದ, ವಿದ್ರುಮ, ಶಂತನು, ಪೃಥು, ಶತಧನು, ನರದೇವ, ಮಹಾಧನು ಮತ್ತು ರೋಮಶೈತ್ಯ ಮುಂತಾಗಿ ಅನೇಕರು ಪುತ್ರರು. ಕೃಷ್ಣನಿಗೆ ಭಾನು, ಸುಭಾನು, ಭೀಮ, ಮಹಾಭಾನು, ಸುಭಾನುಕ, ಬೃಹದ್ರಥ, ಅಗ್ನಿಶಿಖ, ವಿಷ್ಣುಸಂಜಯ, ಅಕಂಪನ, ಮಹಾಸೇನ, ಧೀರ, ಗಂಭೀರ, ಉದಧಿ, ಗೌತಮ, ವಸುಧರ್ಮಾ, ಪ್ರಸೇನಜಿತ್, ಸೂರ್ಯ, ಚಂದ್ರವರ್ಮಾ, ಚಾರುಕೃಷ್ಣ ಸುಚಾರು, ದೇವದತ್ತ, ಭರತ, ಶಂಖ, ಪ್ರದ್ಯುಮ್ನ ಮತ್ತು ಶಂಬ ಮುಂತಾದವರು ಪುತ್ರರು. ಇವರೆಲ್ಲಾ ಶಸ್ತ್ರಾಸ್ತ್ರಗಳಲ್ಲಿಯೂ ಶಾಸ್ತ್ರದಲ್ಲಿಯೂ ನಿಪುಣರಾಗಿದ್ದರು. ಯಾದವರ ಪುತ್ರರೂ ಪೌತ್ರರೂ ಸೋದರಳಿಯಂದಿರೂ ಹೀಗೆಯೇ ಸಹಸ್ರಶಃ ಇದ್ದರು. ಇವರ ಒಟ್ಟು ಸಂಖ್ಯೆ ಮೂರೂವರೆಕೋಟಿ. ಈ ಕುಮಾರರೆಲ್ಲ ಕ್ರೀಡಾವಿನೋದಿಗಳು. ಇವರು ನಿರಂತರವೂ ರಥಹಸ್ತ್ಯಾರೂಢರಾಗಿ ನಾನಾವೇಷಧರರಾಗಿ ಪ್ರಚಂಡಚರಿತರಾಗಿ ಪೌರಪ್ರಜಾಹ್ಲಾದಿಗಳಾಗಿ ದ್ವಾರವತಿಯಲ್ಲಿರುತ್ತಿರಲು ಆ ನಗರವು ಭವನವಾಸಿದೇವರಿಂದ ಯುಕ್ತವಾದ ಪಾತಾಲಪುರಿಯಂತಿತ್ತು. ಸ್ವರ್ಗಚ್ಯುತರಾಗಿ ಬಂದವರೂ ಜಿನಪಥಚರಿತರೂ ಉದಾರಪುಣ್ಯೋದಯರೂ ಆದ ಈ ಪ್ರಶಂಸನೀಯ ಯದುಕುಮಾರರ ಚರಿತೆಯನ್ನು ಶ್ರದ್ಧೆಯಿಂದ ಕೇಳಿದರೆ ಸಮಸ್ತರೋಗವಿರಹಿತರೂ ಕೌಮಾರಯೌವನಸುಖೋಪಭೋಗಿಗಳೂ ಆಗುತ್ತಾರೆ.

೪೯. ದುರ್ಗೋತ್ಪತ್ತಿ ವರ್ಣನ

ಜಗತ್ತಿನಲ್ಲಿ ಉತ್ತಮೆಯೂ ಶಶಿವಿಶುದ್ಧಯಶೋಧರೆಯೂ ಮನೋಹರಗುಣಭೂಷಿತಭೂಷಿತೆಯೂ ಯಶೋದೆಯ ಪುತ್ರಿಯೂ ಆದ ಕೃಷ್ಣನ ತಂಗಿ ನವಯೌವನವನ್ನು ತಳೆದಳು. ಆಕೆ ಪಿತಾಪುತ್ರರಾದಿಯಾದ ಸಮಸ್ತಯಾದವರಿಂದ ಗೌರವಾದರಗಳನ್ನು ಗಳಿಸಿದಳು. ಸಮಸ್ತ ಕಲಾಗುಣಗಳಿಗೆ ಆವಾಸಸ್ಥಾನವಾಗಿದ್ದಳು. ಕುಟುಂಬ ವರ್ಗದವರ ನಡುವೆ ಸಾಕ್ಷಾತ್ ಸರಸ್ವತಿಯೆಂಬಂತೆ ತೋರುತ್ತಿದ್ದಳು. ಹೀಗೆ ಸಮಯ ಸಲ್ಲುತ್ತಿರಲು, ಅಕಸ್ಮಾತ್ತಾಗಿ ಒಮ್ಮೆ ಬಲದೇವನ ಪುತ್ರರು ಬಂದು ಅವಳಿಗೆ ನಮಸ್ಕರಿಸಿದರು. ಆದರೆ ಅಲ್ಲಿಂದ ಹಿಂದಿರುಗಿ ಹೋಗುವಾಗ ಪರಿಹಾಸಬುದ್ಧಿಯಿಂದ ಅವಳನ್ನು 'ಚಪ್ಪಟೆಮೂಗಿನವಳು' ಎಂದಾಡಿ ಕೀಟಲೆಮಾಡಿ ಹೋದರು. ಅವಳು ಏಕಾಂತದಲ್ಲಿ ಕನ್ನಡಿಯಲ್ಲಿ ಚಪ್ಪಟೆಮೂಗಿನ ತನ್ನ ಮುಖವನ್ನು ನೋಡಿಕೊಂಡಳು. ಇದರಿಂದ ನಾಚಿಕೆಯುಂಟಾಗಿ ತನ್ನ ಆ ಜನ್ಮದ ಬಗೆಗೆ ವೈರಾಗ್ಯಗೊಂಡಳು. ಅವಳು ನಗರದಲ್ಲಿದ್ದ ಆರ್ಯಿಕೆಯ ತಂಡದ ಮುಖ್ಯಳಾದ ಸುವ್ರತಾ ಎಂಬ ಗಣಿನಿಯ ಚರಣಗಳಿಗೆ ಶರಣಾಗಿ, ಅವಳನ್ನು ಒಡಗೊಂಡು ವ್ರತಧರರೆಂಬ ಮುನಿಗಳಲ್ಲಿಗೆ ಹೋದಳು. ಅವರಿಗೆ ನಮಸ್ಕರಿಸಿ "ಸ್ವಾಮಿ, ನನಗೆ ಈ ರೀತಿ ಕುರೂಪವುಂಟಾಗಿದೆಯಲ್ಲಾ, ನಾನು ಪೂರ್ವಭವದಲ್ಲಿ ಏನು ಪಾಪ

ಮಾಡಿದೆ?'' ಎಂದು ಪ್ರಶ್ನಿಸಿದಳು. ಅವಧಿಜ್ಞಾನಿಗಳಾದ ಆ ಮುನಿಗಳು ಹೀಗೆ ಹೇಳತೊಡಗಿದರು :

''ಮಗಳೇ, ಪೂರ್ವಭವದಲ್ಲಿ ನಿನ್ನ ಜೀವ ಸುರಾಷ್ಟ್ರದೇಶದಲ್ಲಿ ಒಳ್ಳೆಯ ರೂಪಿನ ಪುರುಷನಾಗಿತ್ತು. ಅಲ್ಲಿ ವಿಷಯೇಂದ್ರಿಯ ಜನ್ಯವಾದ ಸುಖಗಳಿಂದ ಮೂಢಬುದ್ಧಿಯಾಗಿ ನಡೆದುಕೊಂಡುದರಿಂದ, ವಿಷಯಗಳ ಬಗೆಗೆ ಸ್ವಚ್ಛಂದವಾದ ನಿನ್ನ ಕಣ್ಮನಗಳನ್ನು ನೀನು ಹದ್ದಿನಲ್ಲಿಟ್ಟುಕೊಳ್ಳದೆ ಹೋದೆ. ಒಮ್ಮೆ ಒಬ್ಬ ಮುನಿ ಮೃತಶಯ್ಯೆಯಲ್ಲಿದ್ದು ಅತ್ಯಂತ ಉಗ್ರವಾದ ತಪಸ್ಸನ್ನು ನಡೆಸುತ್ತಿದ್ದರೆ, ನೀನು ಅವನ ಮೇಲೆ ಗಾಡಿಯನ್ನು ನಡೆಸಿಬಿಟ್ಟೆ; ಅದರಿಂದಾಗಿ ಅವನ ಮೂಗು ಜಜ್ಜಿಹೋಯಿತು. ಮುನಿಯು ತುಂಬಾ ಮನೋನಿಗ್ರಹವುಳ್ಳವನಾಗಿದ್ದುದರಿಂದ ಆ ಘಟನೆಯಿಂದ ಅವನ ಮನಸ್ಸು ಸಂಕ್ಷೋಭಗೊಳ್ಳಲಿಲ್ಲ. ಅವನಿಗೆ ಜೀವಘಾತವಾಗಲಿಲ್ಲವಾದ್ದರಿಂದ ನಿನಗೂ ನರಕವಾಸ ತಪ್ಪಿತು. ಆದರೂ ಶರೀರದಲ್ಲಿ ಸ್ವಲ್ಪ ಪೆಟ್ಟಾದುದರಿಂದ ಈ ಜನ್ಮದಲ್ಲಿ ನಿನ್ನ ಮುಖ ಮೂಗಿಲ್ಲದೆ ವಿಕೃತವಾಗಿದೆ. ಸಂಸಾರದಲ್ಲಿ ಯಾರೇ ಆಗಲಿ ಕರ್ಮಕ್ಕೆ ತಕ್ಕ ಫಲ ಪಡೆಯುತ್ತಾನೆ. ಜಿನನ ಮಾತೆಂದರೆ, ಯಾವಾತನು ಸಂಸಾರದಲ್ಲಿ ಒಮ್ಮೆಯಾದರೂ ಯಾವುದೇ ಜೀವದ ಘಾತ ಮಾಡಿದರೆ ಅನ್ಯಭವದಲ್ಲಿ ಅನ್ಯರಿಂದ ತನಗೆ ಘಾತವಾಗಿ ದುಃಖಾನುಭವ ಮಾಡಬೇಕು. ಯಾರ ಅವಯವವನ್ನು ಒಮ್ಮೆ ಘಾತಿಸಿದರೂ ಸಾಕು, ತನ್ನ ಪಾಪಕ್ಕೆ ಅನುಸಾರವಾಗಿ ಅನೇಕ ಬಾರಿ ತನ್ನ ಅವಯವದ ಘಾತವನ್ನು ಅನುಭವಿಸುತ್ತಾನೆ.

ಈ ಪ್ರಕಾರವಾದ ಗುರುವಚನವನ್ನು ಕೇಳಿ ಆ ಕನ್ಯೆ ಸುವ್ರತಾಗಣಿನಿಯ ಜತೆಗೆ ಹೊರಟುಬಂದು, ಸಮಸ್ತ ಬಂಧುಗಳನ್ನೂ ತೊರೆದು, ಆರ್ಯಿಕೆಯಾದಳು. ಭೂಷಣಗಳನ್ನೂ ಮಾಲೆಗಳನ್ನೂ ಕಳಚಿ ಎಸೆದುಬಿಟ್ಟಳು. ಕುಟುಂಬವರ್ಗದವರು ಅವಳ ದೀಕ್ಷಾಕಾಲದ ಪೂಜೆ ಮಾಡಿದರು. ಆಕೆಯನ್ನು ನೋಡಿದವರು ಈ ಧೀರೆ ಸರಸ್ವತಿಯೋ ಇಲ್ಲ ತಪಸ್ಸಿನಲ್ಲಿರುವ ರತಿಯೋ ಎನ್ನುತ್ತಿದ್ದರು. ವ್ರತ ಗುಣ ಸಂಯಮ ಉಪವಾಸ ಮೊದಲಾದವನ್ನು ನಿಷ್ಠೆಯಿಂದಾಚರಿಸುತ್ತ, ಅನ್ಯ ಆರ್ಯಿಕೆಯರೊಡಗೂಡಿ ಆಕೆ ತಪಸ್ಯೆಯಲ್ಲಿರುತ್ತಿದ್ದಳು. ಹಲವು ವರ್ಷ ಕಳೆಯುತ್ತಲೂ ಅವಳು ಜಿನೇಂದ್ರನ ಜನ್ಮ ದೀಕ್ಷಾ ನಿರ್ವಾಣ ಭೂಮಿಗಳನ್ನು ವಿಹಾರಿಸುತ್ತ, ಒಮ್ಮೆ ಮಹಾಸಂಘದ ಪ್ರೇರಣೆಯಿಂದ ತನ್ನ ಸಧರ್ಮಿಯರೊಡನೆ ವಿಂಧ್ಯಾಚಲದ ವಿಶಾಲವನಕ್ಕೆ ಬಂದಳು. ಅಲ್ಲಿ ರಾತ್ರಿಯ ವೇಳೆ ಯಾವುದೋ ಮಾರ್ಗದೆದುರು ಪ್ರತಿಮಾಯೋಗದಲ್ಲಿ ನಿಂತುಬಿಟ್ಟಳು. ಆವೇಳೆಗೆ ಒಂದು ಧನವಂತ ಗುಂಪಿನ ಮೇಲೆ ಹಲ್ಲೆಮಾಡಲು ಬಯಸಿ ಬೇಡರ ತಂಡವೊಂದು ಶೀಘ್ರವಾಗಿ ಆಯೆಡೆಗೆ ಬಂತು. ಅಲ್ಲಿ ಪ್ರತಿಮಾಯೋಗದಲ್ಲಿದ್ದ ಆರ್ಯಿಕೆಯನ್ನು ನೋಡಿದರು. ''ಇಲ್ಲಿ ವನದೇವತೆ ವಿರಾಜಮಾನಳಾಗಿದ್ದಾಳೆ" ಎಂದು ಭಾವಿಸಿ ಆ ನೂರಾರು ಭಿಲ್ಲರು ಅವಳಿಗೆ ವಂದಿಸಿ, ಅವಳನ್ನು ''ಹೇ ಭಗವತಿ, ನಿನ್ನ ಅನುಗ್ರಹದಿಂದ ನಿರುಪದ್ರವರಾಗಿ ನಾವು ಧನವನ್ನು ಪಡೆದೆವರಾದರೆ ನಿನಗೆ ಮೊದಲ ದಾಸರಾಗುತ್ತೇವೆ" ಎಂದು ವರ ಬೇಡಿದರು. ಹೀಗೆ ಸಂಕಲ್ಪಿಸಿ ಹೋಗಿ ಉದ್ದೇಶಿಸಿದಂತೆ ನಾಲ್ಕೂ ದಿಕ್ಕುಗಳಿಂದ ಬಿರುಸಾಗಿ ಯಾತ್ರಿ

ಕರ ತಂಡದ ಮೇಲೆ ಹಲ್ಲೆ ಮಾಡಿದರು. ಅವರನ್ನು ಕೊಂದಿಕ್ಕಿ ಕೊಳ್ಳೆಹೊಡೆದು ಕೃತಕೃತ್ಯರಾಗಿ ಮರಳಿದಾಗ ಆರ್ಯಿಕೆಯಿದ್ದೆಡೆಯಲ್ಲಿ ಅವರು ಕಂಡದ್ದು ಬೇರೆಯೇ. ಅದೇನೆಂದರೆ ಆ ಭಿಲ್ಲರು ಮೊದಲು ಅವಳನ್ನು ದರ್ಶನಮಾಡಿ ಹೋದಮೇಲೆ ಅಲ್ಲಿಗೆ ಒಂದು ಸಿಂಹ ಬಂದು ಅವಳ ಮೇಲೆ ಘೋರವಾದ ಉಪಸರ್ಗವುಂಟುಮಾಡಿತ್ತು. ಅದನ್ನು ಆರ್ಯಿಕೆ ಶಾಂತಿಯಿಂದ ಸಹಿಸಿ ಸಮಾಧಿಧಾರಣೆಮಾಡಿ ಅನಶನಪೂರ್ವಕ ಇದ್ದುಬಿಟ್ಟಳು. ಹಾಗೆಯೇ ಪ್ರತಿಮಾಯೋಗದಲ್ಲಿ ತೀರಿಕೊಂಡು ಸ್ವರ್ಗಕ್ಕೆ ಸಂದಳು. ಅವಳ ಶರೀರ ಸಿಂಹದ ನಖ ಮುಖ ದಂಷ್ಟ್ರಗಳ ಘಾತಕ್ಕೆ ವಿದೀರ್ಣವಾಗಿ ಮುಕ್ತವಾಗಿ ಹೋಗಿದ್ದರೂ ಆಕೆಯ ಮೂರು ಕೈಬೆರಳು ಅಲ್ಲೇ ಉಳಿದಿತ್ತು ಅದಷ್ಟು ಮಾತ್ರ ಅಲ್ಲಿ ಭಿಲ್ಲರಿಗೆ ಕಾಣಿಸಿತು. ರಕ್ತಾದ್ರ್ರವಾಗಿ ಹೋಗಿದ್ದ ಆ ಮಾರ್ಗದಲ್ಲಿಯೇ ವ್ಯಾಕುಲಗೊಂಡು ಸುತ್ತಮುತ್ತ ಅಲ್ಲಿ ಇಲ್ಲಿ ನೋಡಿದರೂ ಆರ್ಯಿಕೆ ಕಾಣಿಸಲಿಲ್ಲ. ಕೊನೆಗೆ ವರಪ್ರದೆಯಾದ ದೇವಿ ಈ ರುಧಿರದಲ್ಲಿಯೇ ಸಂತಸಪಡುತ್ತಾಳೆ ಎಂದುಕೊಂಡು ಆ ಕರಾಂಗುಲಿತ್ರಿಕವನ್ನೇ ಆ ದೇವತಾರೂಪದಲ್ಲಿ ವಿರಾಜಮಾನ ಮಾಡಿ ಕಾಡುಕೋಣಗಳನ್ನು ಕೊಂದು ರಕ್ತಮಾಂಸಗಳ ಬಲಿ ಅರ್ಪಿಸಲು ತೊಡಗಿದರು. ಇಂಥ ಬಲಿದಾನದಿಂದ ಅಲ್ಲಿ ನೊಣಗಳು ಸೊಳ್ಳೆಗಳು ಅತಿಯಾಗಿ ಆ ಸ್ಥಳ ಕಣ್ಣಿಗೆ ವಿಷಪ್ರಾಯವಾಯಿತು. ದಿಕ್ಕುಗಳು ದುರ್ಗಂಧಿತವಾದವು. ಆ ಆರ್ಯಿಕೆ ದಯಾಳುವೂ ಪಾಪರಹಿತೆಯೂ ತಪಃಪ್ರಭಾವದಿಂದ ಸದ್ಗತಿಗೆ ಸಂದವಳೂ ಆಗಿದ್ದರೂ ಲೋಕದಲ್ಲಿ ಮಾಂಸಲೋಭಿಗಳಾದ ಮೂರ್ಖರು ಭಿಲ್ಲರು ತೋರಿದ ಈ ಮಾರ್ಗದಿಂದಲೇ ನಡೆದು ಪ್ರಾಣಿವಧೆಗೆ ತೊಡಗಿದರು. ಉತ್ತಮ ದೇವಗತಿಯಿರಲಿ ನಿಕೃಷ್ಟದೇವಗತಿಯಲ್ಲೂ ಯಾವ ದೇವನಾದರೂ ಕೋಣದ ರಕ್ತ ಕುಡಿಯುವುದಿಲ್ಲ, ಕೈಗಳಲ್ಲಿ ತ್ರಿಶೂಲ ಧರಿಸುವುದಿಲ್ಲ, ಅವರಲ್ಲಿ ಪರಸ್ಪರರನ್ನು ವಧಿಸುವುದಿಲ್ಲ. ಹೀಗಿದ್ದೂ ಕವಿಗಳು ಸ್ಫುಟಚಿತ್ರಕಾರರಂತೆ ಸ್ವಲ್ಪಭಿತ್ತಿಯ ಆಧಾರದಿಂದಲೇ ಸತ್ಪುರಂಪದೂಪ್ಯವಾದ ಕವಿತೆಯನ್ನು ಬರೆದುಹಾಕುತ್ತಾರೆ.

ಭಾಗ್ಯವಶದಿಂದ ಕಾರ್ಯಸಿದ್ಧಿ ಪಡೆದಾಗ 'ಇದು ಪ್ರತಿನಿಧಿದೇವತಾಕೃತವಾದ್ದು' ಎಂದು ಭಾವಿಸಿ ಶಸ್ತ್ರಗಳಿಂದ ತಮ್ಮ ದೇಹವನ್ನೇ ಕತ್ತರಿಸಿ ರಕ್ತಬಲಿ ನೀಡುವವರಿಗೆ ಅನ್ಯಶರೀರಚ್ಛೇದದಲ್ಲಿ ದಯೆ ಎಲ್ಲಿಂದ ಬರಬೇಕು ? ಲೋಕದಲ್ಲಿ ಭಕ್ತಜನರು ದ್ರವ್ಯ ಭಾವ ಪೂಜೆಗಳಿಂದ ಪೂಜಿಸುವ ಜಿನಪ್ರತಿಮೆ ತಂತಮ್ಮ ವಿಶಿಷ್ಟ ಪರಿಣಾಮಾನುಸಾರ ಅನ್ಯಭವದಲ್ಲಿ ಕಲ್ಪವೃಕ್ಷದ ಹಾಗೆ ಮನೋರಥ ಫಲಪ್ರದವಾಗುವಂತೆ ಮಾಡುತ್ತದೆ. ಮೂಢತ್ರಯಗಳಿಂದಾದ ಅಂಧಕಾರ ಜಗಜ್ಜೀವರ ಪವಿತ್ರನೇತ್ರಗಳನ್ನು ಸಹ ಕವಿದಿರುತ್ತದೆ. ಪೃಥಿವಿಯು ಅಗ್ನಿ ವಾಯು ಜಲ ಭೂಮಿ ಲತೆ ಮತ್ತು ವೃಕ್ಷಗಳಿಂದಲೂ ಮಂದಿರಗಳ ಕಲ್ಪಿತ ಅಚೇತನ ದೇವರಿಂದಲೂ, ಹಾಗೆಯೇ ಆಕಾಶ ಸೂರ್ಯ ಚಂದ್ರ ತಾರಾ ಗ್ರಹಗಳಿಂದಲೂ ವ್ಯಾಪ್ತವಾಗಿರುವುದರಿಂದ ಯಾರಿಗೆ ತಾನೆ ಮೂಢತೆ ಕವಿಯದು ? ಆದುದರಿಂದ ಜಿನಗುಣಗ್ರಹಣಾಭಿರತರಿಗೆ ವ್ರತಗುಣಶೀಲಾದಿಗಳು ಜನನಜರಾಮೃತಿಕ್ಷಯಕರವಾದುದು.

೫೦. ಚಕ್ರಗರುಡವ್ಯೂಹ ವರ್ಣನ

ಇತ್ತ ಯಾವನೋ ಒಬ್ಬ ವ್ಯಾಪಾರಿ ತಾನು ಕೊಂಡ ಸರಕನ್ನು ಮಾರಲೆಂದು ಅನರ್ಘ್ಯರತ್ನಗಳು ಹಲವನ್ನು ತೆಗೆದುಕೊಂಡು ಜರಾಸಂಧನನ್ನು ಕಂಡನು. ಅವನ್ನು ಕಂಡು ಜರಾಸಂಧನು "ಇವನ್ನು ನೀನು ಎಲ್ಲಿಂದ ತಂದಿದ್ದೀಯೆ ?" ಎಂದನು. ವ್ಯಾಪಾರಿ "ಸ್ವಾಮಿ, ಈ ರತ್ನಗಳು ದ್ವಾರವತಿಯಿಂದ ತಂದವು ; ಅಲ್ಲಿ ಬಲಶಾಲಿ ಕೃಷ್ಣನು ಇರುತ್ತಿದ್ದಾನೆ. ಯಾದವೇಂದ್ರನಾದ ಸಮುದ್ರವಿಜಯನಿಗೂ ಅವನ ಪತ್ನಿ ಶಿವಾದೇವಿಗೂ ನೇಮಿತೀರ್ಥಂಕರನು ಹುಟ್ಟಿದಾಗ ೧೫ ತಿಂಗಳ ಕಾಲ ದೇವತೆಗಳು ರತ್ನವೃಷ್ಟಿ ಮಾಡಿದ್ದರು. ಅವುಗಳಿಂದಲೇ ನಾನು ಇವನ್ನು ತಂದಿದ್ದೇನೆ" ಎಂದನು. ಹೀಗೆ ಆ ವ್ಯಾಪಾರಿಯಿಂದಲೂ ಮಂತ್ರಿಗಳಿಂದಲೂ ಯಾದವರ ಮಹಾತ್ಮ್ಯವನ್ನು ಕೇಳುತ್ತಲೂ ಜರಾಸಂಧನು ಕ್ರುದ್ಧನಾದನು.

ನಡುವೆ ಶ್ರೇಣಿಕನು ಗೌತಮನನ್ನು "ಭಗವಾನ್, ಈ ಕೃಷ್ಣನ ಹೆಸರು ಕೇಳುತ್ತಲೇ ಜರಾಸಂಧನು ಏನು ಮಾಡಿದನು, ನನಗೆ ಹೇಳಬೇಕು" ಎಂದನು. ಗೌತಮನು ಅವನ ಔತ್ಸುಕ್ಯವನ್ನು ಕಂಡು ಜರಾಸಂಧ ಕೃಷ್ಣರ ಚರಿತೆಯನ್ನು ನಿರೂಪಿಸಿದನು:

ಯಾದವರ ಸುದ್ದಿ ತಿಳಿಯುತ್ತಲೂ ಜರಾಸಂಧನು ಸಂಧಿವಿಮುಖನಾಗಿ ಮುಖ್ಯ ಮಂತ್ರಿಗಳೊಂದಿಗೆ ಹೀಗೆ ಮಂತಣ ನಡಸಿದನು : "ಮಂತ್ರಿಗಳೇ, ಸಮುದ್ರದಲ್ಲಿ ಏಳುವ ತರಂಗಗಳಂತೆ ಭಂಗುರಯೋಗ್ಯರಾದ ಶತ್ರುಗಳು ಈವರೆಗೆ ಉಪೇಕ್ಷಿಸಲ್ಪಟ್ಟದ್ದೇಕೆ ? ಮಂತ್ರಿಗಳೇ ದೊರೆಯ ಕಣ್ಣುಗಳು; ಸ್ವಾಮಿಗಾಗಲಿ ತಮಗಾಗಲಿ ಅವರು ಏಕೆ ತಾನೆ ವಂಚಿಸುತ್ತಾರೆ ? ನಾನು ಮಹದೈಶ್ವರ್ಯಮತ್ತನಾಗಿದ್ದು ಶತ್ರುಗಳನ್ನು ಗಮನಿಸದೇ ಹೋಗಿರಬಹುದಾದರೂ ಅವರು ನಿಮ್ಮ ದೃಷ್ಟಿಗೆ ಬೀಳದಾದ್ದು ಹೇಗೆ ? ನೀವೇಕೆ ನೋಡಲಿಲ್ಲ? ಶತ್ರು ಉತ್ಪನ್ನನಾದಾಗಲೇ ಅವನನ್ನು ಯತ್ನಪೂರ್ವಕವಾಗಿ ನಷ್ಟಗೊಳಿಸದಿದ್ದರೆ ಪ್ರಕೋಪಿಸುವ ರೋಗಗಳಂತೆ ತ್ರಾಸದಾಯಕರಾಗುತ್ತಾರೆ ; ಪರಿಣಾಮವು ಒಳ್ಳೆಯದಾಗುವುದಿಲ್ಲ. ಈ ದುಷ್ಟ ಯಾದವರು ನನ್ನ ಅಳಿಯ ಕಂಸನನ್ನೂ ನನ್ನ ಸೋದರ ಅಪರಾಜಿತನನ್ನೂ ಕೊಂದು, ಸಮುದ್ರಕ್ಕೆ ಶರಣಾಗಿ ಹೋಗಿ ಅಲ್ಲಿ ಸೇರಿಕೊಂಡಿದ್ದಾರೆ. ಅವರಾದರೋ ಅನವಗಾಹ್ಯವಾದ ಸಮುದ್ರಮಧ್ಯೆ ಇದ್ದಾರೆ. ಆದರೂ ಉಪಾಯಾಂತರದಿಂದ ಅವರನ್ನು ಹೊರಗೆಳೆದು ಮೀನುಗಳಂತೆ ಅವರನ್ನು ಕೊಂದುಹಾಕಬೇಕು. ದ್ವಾರಿಕೆಯಲ್ಲಿದ್ದು ನಿರ್ಭಯವಾಗಿ ಹೇಗೆ ತಾನೆ ಇರುತ್ತಿದ್ದಾರೆ? ನನ್ನ ಕೋಪಾಗ್ನಿ ಉರಿದೇಳುವವರೆಗೆ ಅವರು ಹಾಗೆಯೇ ಅಲ್ಲಿ ನಿರ್ಭಯವಾಗಿ ಇರುವರೆಂದು ತೋರುತ್ತದೆ. ಇಲ್ಲಿಯವರೆಗೆ ನನಗೆ ಇದರ ಸುಳಿವು ಹತ್ತಿರಲಿಲ್ಲ. ಆದರಿಂದಲೇ ಅವರು ಅಲ್ಲಿ ಸಪರಿವಾರವಾಗಿ ಸುಖದಲ್ಲಿರುತ್ತಿದ್ದರು. ಈಗ ನನಗೆ ಇದರ ಪತ್ತೆ ಆಯಿತು. ಇನ್ನು ಅವರು ಸುಖದಲ್ಲಿ ಹೇಗೆ ತಾನೆ ಇದ್ದಾರು ? ಮಹಾಪರಾಧಿಗಳಾದ್ದರಿಂದ ಅವರು ಸಾಮದಾನೋಪಾಯಗಳಿಂದ ಹೊರಗು ; ಅವರ ಬಗೆಗೆ ನೀವು ಭೇದದಂಡೋಪಾಯಗಳಿಂದ ನಡೆಯಬೇಕು."

ಮಂತ್ರಿಗಳು ದಂಡೋಪಾಯದತ್ತಲೇ ದೃಢವಾಗಿದ್ದ ಜರಾಸಂಧನನ್ನು ಸಮಾ

ಧಾನಪಡಿಸುತ್ತ ಹೀಗೆಂದರು : ''ಸ್ವಾಮಿ, ದ್ವಾರವತಿಯಲ್ಲಿ ಶತ್ರುಗಳು ವರ್ಧಿಸುತ್ತಿರುವುದು ತಿಳಿದೂ ನಾವೇಕೆ ಕಾಲಹಾಕುತ್ತ ಸುಮ್ಮನಿದ್ದೇವು ಎಂಬುದನ್ನು ಕೇಳಿ. ಯದುವಂಶೋತ್ಪನ್ನರಾದ ನೇಮಿನಾಥ ವಾಸುದೇವ ಬಲದೇವ ಈ ಮೂವರು, ಮನುಷ್ಯರ ಮಾತು ಹಾಗಿರಲಿ, ದೇವತೆಗಳಿಂದಲೂ ದುರ್ಜಯರು. ಸ್ವರ್ಗಾವತರಣಕಾಲಕ್ಕೆ ಯಾರು ಸುರರ ರತ್ನವೃಷ್ಟಿಯಿಂದ ಪೂಜೆಗೊಂಡನೋ, ಯಾರ ಜನ್ಮಸಮಯದಲ್ಲಿ ಇಂದ್ರನು ಮೇರುಗಿರಿಯಲ್ಲಿ ಅಭಿಷೇಕ ಮಾಡಿದನೋ, ಯಾರ ರಕ್ಷಣೆಯಲ್ಲಿ ಸರ್ವದಾ ದೇವರುಗಳಿರುತ್ತಾರೋ, ಅಂಥ ನೇಮಿಜಿನೇಂದ್ರನು ನಿಮ್ಮಿಂದ ಯುದ್ಧದಲ್ಲಿ ಜಯಿಸಲ್ಪಡುವುದಾದೀತೇ ? ಅಥವಾ ಲೋಕದ ಸಮಸ್ತ ಅರಸರೂ ಒಂದೆಡೆ ಸೇರಿಯೂ ಅವನನ್ನು ಗೆಲ್ಲುವುದಾದೀತೇ ?

ಶಿಶುಪಾಲವಧೆ ಮೊದಲ್ಗೊಂಡು ನಡೆದಂಥ ಅನೇಕ ಯುದ್ಧಗಳಲ್ಲಿ ನೀವು ಬಲದೇವ ಕೃಷ್ಣರ ಆ ಲೋಕೋತ್ತರ ಸಾಮರ್ಥ್ಯವನ್ನು ಕೇಳಲಿಲ್ಲವೆ? ಮಹಾತೇಜಸ್ವಿಗಳಾದ ಪಾಂಡವರೂ ವಿವಾಹಸಂಬಂಧಗಳಿಂದ ಅನುಕೂಲರಾದ ವಿದ್ಯಾಧರರೂ ಈಗ ಅವರ ಪಕ್ಷದಲ್ಲಿದ್ದಾರೆ. ಅವರ ಮೂರೂವರೆಕೋಟಿ ಕುಮಾರರೂ ರಣವಿದ್ಯಾಕುಶಲಿಗಳು. ಇಂಥ ಯಾದವರನ್ನು ಹೇಗೆ ತಾನೆ ಗೆಲ್ಲಲಾದೀತು ? ಆ ಯದುಗಳು ಯಾವಾಗಲೋ ಯಾತಕ್ಕೋ ಸಮುದ್ರ ಮಧ್ಯೆ ಹೋಗಿ ನೆಲಸಿದ್ದಾರೆ. ಅವರು 'ನಮಗೆ ಹೆದರಿದ್ದಾರೆ' ಎಂದು ತಿಳಿಯಬೇಡಿ. ಆದ್ದರಿಂದ ದೈವಕಾಲಬಲಸಂಪನ್ನರಾದ, ದೇವರ ರಕ್ಷಣೆಯಿರುವ ಶೂರ ಯಾದವರು ಅಲ್ಲಿ ದ್ವಾರಾವತಿಯಲ್ಲಿ ತಮ್ಮ ಪಾಡಿಗೆ ತಾವು ಇದ್ದುಕೊಳ್ಳಲಿ, ಇಲ್ಲಿ ನಾವು ನಮ್ಮ ಪಾಡಿಗೆ ಇದ್ದುಕೊಳ್ಳೋಣ. ಅದೇ ಲೇಸು. ನೀವು ಹೀಗಿದ್ದುಕೊಂಡೂ ಅವರೇನಾದರೂ ಕ್ರುದ್ಧರಾಗಿ ವರ್ತಿಸಿದರೆ ಆಗ ಪ್ರತೀಕಾರಕ್ಕೆ ಮನಸ್ಸುಮಾಡಿ.'' ಹೀಗೆ ಸತ್ಯವೂ ಹಿತವೂ ಆದ ಮಾತನ್ನು ಅವರು ನಿವೇದಿಸಲು ಜರಾಸಂಧನು ಅದನ್ನು ಒಪ್ಪಿಕೊಳ್ಳಲು ಇಷ್ಟಪಡಲಿಲ್ಲ. ವಿನಾಶಕಾಲದಲ್ಲಿ ಹಠಮಾರಿಯು ತನ್ನ ಹಠವನ್ನು ಬಿಡುವುದಿಲ್ಲವಷ್ಟೆ.

ಜರಾಸಂಧನು ಶತ್ರುಗಳನ್ನು ಕೆರಳಿಸಲೆಂದು ಅಜಿತಸೇನನೆಂಬ ಒಬ್ಬ ದೂತನನ್ನು ದ್ವಾರಾವತಿಗೆ ಕಳಿಸಿದನು. ಇತ್ತ ತಾನು ಚತುರ್ದಿಕ್ಕುಗಳು ಪರ್ವತಪ್ರದೇಶ ಮಧ್ಯದೇಶ ಇವುಗಳಿಂದೆಲ್ಲ ಸಸೈನ್ಯರಾಗಿ ಬರುವಂತೆ ಅರಸರಿಗೆ ದೂತರ ಮೂಲಕ ಆದೇಶ ಕಳಿಸಿದನು. ದೂತರನ್ನು ಕಾಣುತ್ತಲೇ ಸತ್ಯಪ್ರತಿಜ್ಞರೂ ಹಿತಾಕಾಂಕ್ಷಿಗಳೂ ಆದ ಕರ್ಣ ದುರ್ಯೋಧನ ಮುಂತಾದ ಅರಸರು ಜರಾಸಂಧನಲ್ಲಿಗೆ ಹೊರಟುಬಂದರು. ಅರಸರೂ ಅರಸುಮಕ್ಕಳೂ ಜರಾಸಂಧನನ್ನು ಹಿಂಬಾಲಿಸಿ ಹೊರಟರು. ದುರ್ನಿಮಿತ್ತಗಳು ಕಾಣಿಸಿದರೂ ಲಕ್ಷಿಸದೆ ಜರಾಸಂಧನು ಶತ್ರುಜಯಾಕಾಂಕ್ಷೆಯಿಂದ ಹೊರಟೇ ಹೊರಟನು.

ಇತ್ತ ಅಜಿತಸೇನದೂತನು ದ್ವಾರಾವತಿಗೆ ಬಂದು ಯಾದವರೂ ಭೋಜರೂ ಪಾಂಡವರೂ ಕೂಡಿದ್ದ ಕೃಷ್ಣಸಭೆಗೆ ಬಂದನು. ವಂದಿಸಿ ಕುಳಿತಮೇಲೆ ತನ್ನ ಸ್ವಾಮಿಯ ಬಲದ ಬೆಂಬಲದಿಂದ ದರ್ಪಿಷ್ಠನಾಗಿ ಹೀಗೆ ನುಡಿದನು : ''ರಾಜಾಧಿರಾಜ ಜರಾಸಂಧನು

ಕೊಡುವ ಆಜ್ಞೆಯನ್ನು ಯಾದವರೆಲ್ಲ ಮನಸ್ಸಿಟ್ಟು ಕೇಳಿ. ಇದು ಅವನ ಮಾತು: ''ನೀವೇ ಸ್ಪಷ್ಟವಾಗಿ ಹೇಳಿ. ನಾನು ನಿಮಗೆ ಏನು ಅನಿಷ್ಟವಾದ್ದು ಮಾಡಿದ್ದೇನೆ, ನೀವು ಹೀಗೆ ಭೀತಿಗೊಂಡು ಸಮುದ್ರಮಧ್ಯದಲ್ಲಿ ವಾಸಿಸುತ್ತಿದ್ದೀರಲ್ಲ ? ನೀವು ಅಪರಾಧಿಗಳಾದ ಕಾರಣ ಹೀಗೆ ಹೆದರಿ ದುರ್ಗವನ್ನಾಶ್ರಯಿಸಿದಿರಿ. ಆದರೆ ನಿಮಗೆ ನನ್ನಿಂದ ಭಯಬೇಡ. ನೀವು ನನ್ನಲ್ಲಿಗೆ ಬಂದು ನಮಸ್ಕರಿಸಿರಿ. ಹಾಗೆ ಮಣಿಯದೆ ಈ ದುರ್ಗದ ಆಶ್ರಯವನ್ನು ನೆಮ್ಮಿ ಇಲ್ಲೇ ಇರುತಿದ್ದರೆ ನಾನು ಸಮುದ್ರವನ್ನೇ ಕುಡಿದು ಬಂದು ಸೇನೆಗಳ ಮೂಲಕ ನಿಮ್ಮನ್ನು ದುರ್ದೆಸೆಗೆ ದೂಡುತ್ತೇನೆ. ನೀವು ಇಲ್ಲಿರುವುದು ನನಗೆ ತಿಳಿಯದೆ ನಿಮಗೆ ದೇಶಕಾಲ ಬಲವೇ ಬಲವಾಯಿತು. ಈಗಿನ್ನು ತಿಳಿದ ಮೇಲೆ ಅದು ನಿಲ್ಲುವಂತಿಲ್ಲ.'' ಈ ದೂತವಚನವನ್ನು ಕೇಳಿ ಕೃಷ್ಣಾದ್ಯರಸರೆಲ್ಲ ಕ್ರುದ್ಧರಾದರು. ಬದ್ಧಭ್ರುಕುಟಿಗಳಾಗಿ ನುಡಿದರು: "ಮೃತ್ಯುಸನ್ನಿಹಿತವಾಗಿರುವ ನಿಮ್ಮರಸು ಸಕಲಸೇನೆಯೊಂದಿಗೆ ಬರುತ್ತಿದ್ದಾನೆ ; ಅಂದಮೇಲೆ ನಾವು ಯುದ್ಧದ ಮೂಲಕವೇ ಆತನನ್ನು ಸತ್ಕರಿಸುತ್ತೇವೆ. ನಾವು ಕೂಡ ಯುದ್ಧಕಾತರರಾಗಿಯೇ ಇದ್ದೇವೆ." ಹೀಗೆಂದು ಹೇಳಿ ಯಾದವರು ಅವನನ್ನು ಹಿಂದೆ ಕಳಿಸಿದರು. ಅವನು ಜರಾಸಂಧನಲ್ಲಿಗೆ ಹೋಗಿ ನಡೆದುದನ್ನು ಯಥಾರೀತಿ ತಿಳಿಸಿಬಿಟ್ಟನು.

ಇತ್ತ ಸಮುದ್ರವಿಜಯನ ಮಂತ್ರಿಗಳು ವಿಮಲ, ಅಮಲ, ಶಾರ್ದೂಲ ಎಂಬವರು ತಮ್ಮರಸನಿಗೆ ಇಂತೆಂದರು: ''ರಾಜಾ, ಸ್ವಪರಪಕ್ಷಗಳಲ್ಲಿ ಸಾಮವೇ ಶಾಂತಿಹೇತು. ನಾವೂ ಜರಾಸಂಧನೊಂದಿಗೆ ಅದನ್ನೇ ಪ್ರಯೋಗಿಸೋಣ.ಈ ಕುಮಾರರೆಲ್ಲ ಸ್ವಜನರು. ಅಪಾಯಬಹುಳವಾದ ಯುದ್ಧದಲ್ಲಿ ಈಯೆಲ್ಲರ ಕ್ಷೇಮವಿಚಾರ ಸಂದಿಗ್ಧವಾದ್ದು. ನಮ್ಮಲ್ಲಿ ಹೇಗೋ ಹಾಗೆ ಜರಾಸಂಧನಲ್ಲಿಯೂ ಸಮರ್ಥಯೋಧರಿದ್ದಾರೆ. ಯುದ್ಧದ ಮುಂಚೂಣಿಯಲ್ಲಿ ನಮ್ಮ ಕಡೆಯ ಒಬ್ಬ ಸ್ವಜನನನ್ನು ಕಳೆದುಕೊಂಡರೆ ನಮಗೆ ಅದು ದುಃಖಕರ. ಎಲ್ಲರ ಒಳಿತಿಗೆ ಸಾಮವೇ ಯೋಗ್ಯವಾದುದು. ಆದ್ದರಿಂದ ಶಾಂತಿಸಂಧಾನಕ್ಕಾಗಿ ಆತನಲ್ಲಿಗೆ ಒಬ್ಬ ದೂತನನ್ನು ಕಳಿಸಿ. ನಮ್ಮ ಸಾಮೋಪಾಯಕ್ಕೆ ಅವನು ಮಣಿಯದಿದ್ದರೆ ಆಮೇಲೆ ತಕ್ಕದ್ದನ್ನು ಮಾಡುವುದಿದೆ. ಆದ್ದರಿಂದ ಸಾಮವನ್ನು ಹಿಡಿಯುವುದರಲ್ಲಿ ದೋಷವೇನು ?'' ಹೀಗೆನ್ನಲು ಅರಸನು "ಹೌದು, ಅದರಲ್ಲಿ ತಪ್ಪೇನು ? ದೂತನನ್ನು ಕಳಿಸಿಕೊಡೋಣ'' ಎಂದನು. ಹಾಗೆಯೇ ಲೋಹಜಂಘನೆಂಬವನನ್ನು ಕಳಿಸಲಾಯಿತು. ಇವನು ಚತುರ, ಶೂರ, ನೀತಿಜ್ಞ. ಇವನು ತನ್ನ ಸೇನೆಯೊಡಗೂಡಿ ಜರಾಸಂಧನಲ್ಲಿಗೆ ಸಂಧಿಗೆ ಹೋದನು. ಪೂರ್ವಮಾಲವ ದೇಶದಲ್ಲಿಯ ವನದಲ್ಲಿ ಅವನ ಸೇನೆ ಬೀಡುಬಿಟ್ಟಾಗ, ಅಲ್ಲಿಗೆ ಜೊತೆಯಾಗಿ ವಿಹರಿಸುವ ತಿಲಕಾನಂದ, ನಂದನ ಎಂಬ ಇಬ್ಬರು ಮುನಿಗಳು ಬಂದರು. ಅವರು ಮಾಸೋಪವಾಸಿಗಳು. ಅವರು ಕಾಂತಾರಭೈಕ್ಷ್ಯದ ನಿಯಮಗೊಂಡು ವನದಲ್ಲಿ ವಿಹರಿಸುತ್ತಿದ್ದರು. ಲೋಹಜಂಘನು ಅವರಿಗೆ ಆಹಾರದಾನಮಾಡಿದನು. ಆಗ ಪಂಚಾಶ್ಚರ್ಯಗಳಾದವು. ಅಂದಿನಿಂದ ಆ ಸ್ಥಾನವು ದೇವಾವತಾರವೆಂಬ ತೀರ್ಥಸ್ಥಾನವೆನಿಸಿತು. ಜರಾಸಂಧನು ಸಂಧಿಗೆ ಸಿದ್ಧನಿಲ್ಲದಿದ್ದರೂ ರಹಸ್ಯದಲ್ಲಿ ಚತುರನಾದ ಲೋಹಜಂಘನು ಅವನಿಗೆ ತಕ್ಕಂತೆ ತಿಳಿಯಹೇಳಿದನು. ಪ್ರಸನ್ನನಾದ ಜರಾಸಂಧನು

೬ ತಿಂಗಳವರೆಗೆ ಸಂಧಿಯನ್ನೊಪ್ಪಿಕೊಂಡನು. ಲೋಹಜಂಘನು ಹಿಂದಿರುಗಿ ಬಂದು ಸಮುದ್ರವಿಜಯನಿಗೆ ಸುದ್ದಿಯಿತ್ತನು. ಯುದ್ಧಸಿದ್ಧತೆಯಲ್ಲಿ ಗಮನವಿತ್ತು ಯಾದವರು ಒಂದು ವರ್ಷ ನೆಮ್ಮದಿಯಿಂದ ಕಳೆದರು. ಒಂದು ವರ್ಷ ತೀರುತ್ತಲೂ ತನ್ನ ಮಹಾ ಪ್ರತಿಜ್ಞೆಯನ್ನು ಪೂರೈಸಲೆಂದು ಜರಾಸಂಧನು ಮಹಾಸಾಮಂತರೊಂದಿಗೆ, ಮಹಾಸೇನೆಯೊಂದಿಗೆ ಬಂದು ಕುರುಕ್ಷೇತ್ರದ ಬಯಲಲ್ಲಿ ಬೀಡುಬಿಟ್ಟನು. ಹಾಗೆಯೇ ಕೃಷ್ಣನಿಗೆ ಸಂಬಂಧಿಸಿದ ದಕ್ಷಿಣೋತ್ತರಗಳ ಹಾಗೂ ಪಶ್ಚಿಮದ ಅರಸರೆಲ್ಲ ತಂತಮ್ಮ ಸೇನೆಗಳೊಂದಿಗೆ ಬಂದು ಕೃಷ್ಣನನ್ನು ಸೇರಿದರು. ದಶಾರ್ಹರು ಭೋಜರು ಪಾಂಡವರು ಮುಂತಾದ ಬಂಧುಜನರೂ ಅನ್ಯರಾಜರೂ ಸೇರಿದರು. ಸಮುದ್ರವಿಜಯ, ಉಗ್ರಸೇನ, ಇಕ್ಷ್ವಾಕು ವಂಶದ ಮೇರು ಇವರು ಏಕಾಕ್ಷೌಹಿಣಿಯ ಒಡೆಯರು ; ರಾಷ್ಟ್ರವರ್ಧನ ದೇಶದರಸು, ಸಿಂಹಳದರಸು, ಪದ್ಮರಥ—ಇವರು ಅರ್ಧಾಕ್ಷೌಹಿಣಿಗೆ ಒಡೆಯರು. ಶಕುನಿಯ ಸೋದರ ಚಾರುದತ್ತ ಕಾಲುಭಾಗ ಅಕ್ಷೌಹಿಣಿಗೆ ಒಡೆಯ. ಬರ್ಬರ,ಯಮನ, ಆಭೀರ, ಕಾಂಭೋಜ ಮತ್ತು ದ್ರವಿಡ ದೇಶದ ಅರಸರೂ ಕೃಷ್ಣಪಕ್ಷಕ್ಕೆ ಬಂದು ಕಲೆತರು.

ಅತ್ತ ಚಕ್ರರತ್ನದ ಪ್ರಭಾವವನ್ನುಳ್ಳ ಜರಾಸಂಧನಿಗೂ ಅನೇಕ ಅಕ್ಷೌಹಿಣಿಗಳು ಜತೆಯಾಗಿದ್ದುವು.

ಯಾದವರಲ್ಲಿ ನೇಮಿ ಬಲದೇವ ಕೃಷ್ಣ ಇವರು ಅತಿರಥರು. ಭರತವರ್ಷದಲ್ಲೇ ಸರ್ವಶ್ರೇಷ್ಠ ಅತಿರಥರು. ಸಮುದ್ರವಿಜಯ, ವಸುದೇವ, ಯುಧಿಷ್ಠಿರ, ಭೀಮ, ಕರ್ಣ, ಅರ್ಜುನ, ರುಕ್ಮಿ, ಪ್ರದ್ಯುಮ್ನ, ಸತ್ಯಕ, ಧೃಷ್ಟದ್ಯುಮ್ನ, ಅನಾವೃಷ್ಟಿ, ಶಲ್ಯ, ಭೂರಿಶ್ರವಸ್ಸು, ಹಿರಣ್ಯನಾಭ, ಸಹದೇವ ಮತ್ತು ಸಾರಣ ಇವರೆಲ್ಲ ಮಹಾರಥರು. ವಸುದೇವ ಹೊರತಾದ ಅಕ್ಷೋಭ್ಯಾದಿಗಳು, ಶಂಬ, ಭೋಜ, ವಿದೂರಥ, ದ್ರುಪದ, ಸಿಂಹರಾಜ, ಶಲ್ಯ, ವಜ್ರ, ಸುಯೋಧನ, ಪೌಂಡ್ರ, ಪದ್ಮರಥ, ಕಪಿಲ,ಭಗದತ್ತ ಮತ್ತು ಕ್ಷೇಮಧೂರ್ತ ಇವರು ಸಮರಥರು. ಮಹಾನೇಮಿ, ಧರ, ಅಕ್ರೂರ, ನಿಷಧ, ಉಲ್ಮುಕ, ದುರ್ಮುಖ, ಕೃತವರ್ಮ, ವರಾಟ, ಚಾರುಕೃಷ್ಣ, ಶಕುನಿ, ಯವನ, ಭಾನು, ದುಃಶಾಸನ, ಶಿಖಂಡಿ, ವಾಹ್ಲೀಕ,ಸೋಮದತ್ತ, ದೇವಶರ್ಮ, ವಕ, ವೇಣುದಾರೀ ಮತ್ತು ವಿಕ್ರಾಂತ ಇವರು ಅರ್ಧರಥರು. ಇನ್ನುಳಿದ ಶ್ರೇಷ್ಠರು ರಥಿಗಳು. ಇಂಥ ರಥಿಗಳು ಎರಡೂ ಸೇನೆಗಳಲ್ಲಿದ್ದರು.

ಸಮುದ್ರೋಪಮವಾಗಿ ಉಭಯಸೇನೆಗಳೂ ಹತ್ತಿರಹತ್ತಿರಕ್ಕೆ ಬರಲು ಕುಂತಿಗೆ ಗಾಬರಿಯಾಯಿತು. ಅವಳು ಕೂಡಲೇ ಕರ್ಣನಲ್ಲಿಗೆ ಬಂದಳು. ಅಲ್ಲಿಗೆ ಹೋಗಲು ಅವಳಿಗೆ ಯುಧಿಷ್ಠಿರಾದಿ ಪುತ್ರರು ಅನುಮತಿ ಕೊಟ್ಟಿದ್ದರು. ಆಗ ತನಗೆ ಕನ್ಯಾವಸ್ಥೆಯಲ್ಲಿ ಜನಿಸಿದ್ದ ಪುತ್ರನಾದ ಕರ್ಣನ ಮೇಲೆ ಅಪಾರಪ್ರೇಮವಿದ್ದುದರಿಂದ ಅವಳ ಶರೀರ ವಿವಶಗೊಳ್ಳುತ್ತಿತ್ತು. ಅವಳು ಕರ್ಣನ ಕೊರಳಪ್ಪಿಕೊಂಡು ಅಳುತ್ತಳುತ್ತ ತಮ್ಮಿಬ್ಬರ ಮಾತಾಪುತ್ರಸಂಬಂಧವನ್ನೂ ಆದಿಮಧ್ಯಾಂತದಲ್ಲಿ ನಡೆದುದೆಲ್ಲವನ್ನೂ ಅವನಿಗೆ ಹೇಳಿದಳು. ಅದರಲ್ಲಿ ಕರ್ಣನಿಗೆ ಕಂಬಲವೃತ್ತಾಂತವೂ (ತನ್ನನ್ನು ವಸ್ತ್ರದಲ್ಲಿ ಸುತ್ತಿ ನೀರಲ್ಲಿ

ತ್ಯಜಿಸಿದ್ದು) ತಾನು ಕುರುವಂಶಜನೆಂಬುದೂ ತಿಳಿದಿತ್ತು. ಈಗ ಕುಂತಿಯ ಕಥನದಿಂದಾಗಿ ತಾನು ಕುಂತಿ ಪಾಂಡುಗಳಿಗೆ ಪುತ್ರನೆಂಬುದು ನಿಶ್ಚಯವಾಯಿತು. ತನ್ನ ಬಂಧುಜನಗಳನ್ನು ಹೀಗೆ ನಿರ್ಣಯಿಸಿಕೊಂಡು, ಕರ್ಣನು ತನ್ನ ಅಂತಃಪುರದೊಡಗೂಡಿ ಕುಂತಿಯನ್ನು ಪೂಜಿಸಿದನು. ಆಮೇಲೆ ಆದರದಿಂದ ಕುಂತಿ ತನ್ನ ಅಗ್ರಾತ್ಮಜನಿಗೆ "ಹೇ ಪುತ್ರ, ಏಳು, ಎಲ್ಲಿ ನಿನ್ನೆಲ್ಲ ಸೋದರರೂ ಕೃಷ್ಣಾದಿ ಪ್ರಮುಖರಾದ ಅನ್ಯ ಆತ್ಮೀಯರೂ ನಿನಗಾಗಿ ಉತ್ಕಂಠಿತರಾಗುತ್ತಿರುವರೋ ಅಲ್ಲಿಗೆ ನಡೆ. ಮಗೂ, ಈಗ ಭೂಮಿಯಲ್ಲಿ ನೀನೇ ಕುರುಗಳ ಸ್ವಾಮಿ ; ಕೃಷ್ಣಬಲದೇವಾದಿಗಳಿಗೆ ಪ್ರಾಣವಲ್ಲಭನಾಗಿದ್ದೀಯೆ. ನೀನು ರಾಜ ; ನಿನ್ನ ತಮ್ಮ ಯುಧಿಷ್ಠಿರನು ನಿನಗೆ ಛತ್ರಧಾರಿ ; ಭೀಮನು ಚಾಮರಧಾರಿ; ಧನಂಜಯನು ಮಂತ್ರಿಮುಖ್ಯನು ; ನಕುಲ ಸಹದೇವರು ಪ್ರತೀಹಾರರು ; ಇನ್ನು ತಾಯಿಯಾದ ನಾನು ನಿತ್ಯವೂ ನಿನ್ನ ಹಿತೋದ್ಯತೆಯಾಗಿರುವವಳು"—ಎಂದು ವಿವರಿಸಿದಳು.

ಈ ಪ್ರಕಾರವಾಗಿ ನುಡಿದ ತಾಯಿಯ ಮಾತು ಕೇಳಿ ಕರ್ಣನು ಭ್ರಾತೃಸ್ನೇಹದಿಂದ ವಿವಶನಾದರೂ ಜರಾಸಂಧನು ತನಗೆ ಮಾಡಿರುವ ಉಪಕಾರಗಳನ್ನು ನೆನೆದು ಸ್ವಾಮಿಕಾರ್ಯನಿಷ್ಠೆಯನ್ನು ಆಲೋಚಿಸುತ್ತ ತಾಯಿಗೆ "ಲೋಕದಲ್ಲಿ ತಾಯಿತಂದೆಗಳು, ಅಣ್ಣತಮ್ಮಂದಿರು, ಬಂಧುಬಾಂಧವರು ದುರ್ಲಭರೇ ನಿಜ ; ಇದು ಹೀಗಿದ್ದು ಕೂಡ, ಈ ಪ್ರಸ್ತಾವದಲ್ಲಿ ಇಲ್ಲಿ ಉಪಸ್ಥಿತನಾಗಿದ್ದುಕೊಂಡು ಸ್ವಾಮಿಕಾರ್ಯವನ್ನು ತ್ಯಜಿಸಿ ಬಂಧುಕಾರ್ಯವನ್ನು ಹಿಡಿಯುವುದು ಅನುಚಿತವಾದ್ದು, ಅಪ್ರಶಸ್ತವಾದ್ದು ; ಯುದ್ಧಮುಖದಲ್ಲಿ ಅದು ಹಾಸ್ಯಾಸ್ಪದವೂ ಹೌದು. ಈ ಸಮಯದಲ್ಲಿ ಸ್ವಾಮಿಕಾರ್ಯವನ್ನು ನಡಸುತ್ತ ನಾನು ಇಷ್ಟನ್ನು ಮಾತ್ರ ಮಾಡಬಲ್ಲೆ. ಯುದ್ಧದಲ್ಲಿ ಸೋದರರನ್ನು ಬಿಟ್ಟು ಅನ್ಯಯೋಧರೊಡನೆ ಯುದ್ಧಮಾಡುತ್ತೇನೆ. ಯುದ್ಧಸಮಾಪ್ತಿಯಾದ ಮೇಲೆ ನಾವು ದೈವವಶಾತ್ ಜೀವಿಸಿದ್ದುದಾದರೆ. ತಾಯಿ, ನಮಗೆ ಭ್ರಾತೃಸಮಾಗಮವು ತಪ್ಪದೆ ಆಗುತ್ತದೆ. ಈಗ ನೀನು ಹೋಗು ; ಭ್ರಾತೃಗಳಿಗೂ ಬಂಧುಗಳಿಗೂ ಇಷ್ಟನ್ನು ನಿವೇದಿಸು"—ಎಂದು ನುಡಿದು ಕರ್ಣನು ಕುಂತಿಯನ್ನು ಪೂಜಿಸಿ ಕಳಿಸಿಕೊಟ್ಟನು. ಕುಂತಿ ಅಲ್ಲಿಂದ ತೆರಳಿ ಅವನ ಮಾತಿನಂತೆಯೇ ಎಲ್ಲಾ ಕೆಲಸಗಳನ್ನೂ ಮಾಡಿದಳು.

ಅತ್ತ ಜರಾಸಂಧನ ಸೇನೆಯಲ್ಲಿ ಚತುರರಾದ ಅರಸರು ಶತ್ರುಜಯಕ್ಕಾಗಿ ಚಕ್ರವ್ಯೂಹ ರಚಿಸಿದರು. ಆ ವ್ಯೂಹದ ಚಕ್ರಕ್ಕೆ ಒಂದುಸಾವಿರ ಅರಗಳು, ಒಂದೊಂದಕ್ಕೆ ಒಬ್ಬ ಅರಸು ; ಅವನಿಗೆ ೧ ನೂರು-೧ ನೂರು ಆನೆ, ೨-೨ಸಾವಿರ ರಥ, ೫-೫ ಸಾವಿರ ಕುದುರೆ, ೧೬-೧೬ ಸಾವಿರ ಕಾಲಾಳು. ಚಕ್ರಧಾರೆಯ ಬಳಿ ೬ ಸಾವಿರ ಅರಸರು. ಇವರಿಗೆ ಬೆಂಬಲವಾಗಿ ಪೂರ್ವೋಕ್ತ ಸಂಖ್ಯಾಬಲದಲ್ಲಿ ಕಾಲುಭಾಗ ಚತುರಂಗ. ಚಕ್ರದ ಮಧ್ಯದಲ್ಲಿ ಕರ್ಣಾದಿಗಳಾದ ೫ ಸಹಸ್ರ ಅರಸರೊಡಗೂಡಿ ಸ್ವಯಂ ಜರಾಸಂಧನಿದ್ದನು. ಗಾಂಧಾರ ಸಿಂಧುದೇಶಗಳ ಸೇನೆಯೂ ದುರ್ಯೋಧನಾದಿಗಳಾದ ನೂರ್ವರು ಕೌರವರೂ ಮಧ್ಯದೇಶದ ಅರಸರೂ ಅದೇ ಚಕ್ರದ ಮಧ್ಯಭಾಗದಲ್ಲಿದ್ದರು. ಹಾಗೆಯೇ ಚಕ್ರ

ಧಾರೆಯ ಸಂಧಿಗಳಲ್ಲಿಯೂ ಅರಗಳ ನಡುವೆಯೂ ಅರಸರೂ ಸೇನೆಯೂ ಇದ್ದವು. ಇದಲ್ಲದೆ ವ್ಯೂಹದ ಹೊರಗೆ ಕೂಡ ಅನೇಕ ಅರಸರು ನಾನಾ ವ್ಯೂಹಗಳನ್ನು ರಚಿಸಿಕೊಂಡು ನಿಂತಿದ್ದರು.

ಇತ್ತ ಚತುರ ವಸುದೇವನಿಗೆ ಇದು ತಿಳಿಯುತ್ತಲೂ ಆ ಚಕ್ರವ್ಯೂಹ ಭೇದನಕ್ಕೆ ತಾನು ಗರುಡವ್ಯೂಹ ರಚಿಸಿದನು. ೫೦ ಲಕ್ಷ ಯಾದವಕುಮಾರರು ಮುಖಭಾಗದಲ್ಲಿ, ಬಲದೇವಕೃಷ್ಣರು ಮಸ್ತಕದಲ್ಲಿ ನಿಂತರು.ಅಕ್ರೂರ,ಕುಮುದ, ವೀರ, ಸಾರಣ, ವಿಜಯ, ಜಯ, ಪದ್ಮ, ಜರತ್ಕುಮಾರ, ಸುಮುಖ, ದುರ್ಮುಖ, ಮದನವೇಗೆಯ ಪುತ್ರನಾದ ಮಹಾರಥನಾದ ದೃಢಮುಷ್ಟಿ, ವಿದೂರಥ ಮತ್ತು ಅನಾವೃಷ್ಟಿ ಈ ವಸುದೇವಪುತ್ರರು ಬಲದೇವ ಕೃಷ್ಣರ ರಥದ ರಕ್ಷಣೆಗೆಂದು ಅವರ ಬೆಂಗಡೆಗೆ ನಿಂತರು.೧ಕೋಟಿ ರಥದೊಂದಿಗೆ ಭೋಜನು ಗರುಡನ ಪೃಷ್ಠಭಾಗದಲ್ಲಿ ನಿಂತನು. ಅವನ ಬೆಂಗಡೆಗೆ ಧಾರಣ, ಸಾಗರ ಮುಂತಾದವರು ನಿಂತರು. ಸಮುದ್ರವಿಜಯನು ಅವನ ಪುತ್ರರನ್ನೂ ಮಹಾಸೇನೆಯನ್ನೂ ಸೇರಿಸಿಕೊಂಡು ಗರುಡನ ಬಲರೆಕ್ಕೆಯ ಬಳಿ ನಿಂತನು. ಅಕ್ಕಪಕ್ಕದ ರಕ್ಷಣೆಗೆ ಸತ್ಯನೇಮಿ, ಮಹಾನೇಮಿ, ದೃಢನೇಮಿ, ಮಹಾರಥಿ ನಮಿ, ಜಯಸೇನ, ಮಹೀಜಯ, ತೇಜಸೇನ, ಜಯ, ಸೇನ, ನಯ, ಮೇಘ, ಮಹಾದ್ಯುತಿ ಮುಂತಾದ ಯಾದವರೂ ಇತರ ನೂರಾರು ಅರಸರೂ ೨೫ ಲಕ್ಷ ರಥದೊಂದಿಗೆ ಸ್ಥಿತರಾದರು. ಬಲದೇವ ಪುತ್ರರೂ ಪಾಂಡವರೂ ಗರುಡನ ಎಡರೆಕ್ಕೆಯ ಬಳಿ ನಿಂತರು. ಇವರ ಬಳಿಯೇ ಉಲ್ಮುಕ, ನಿಷಧ, ಪ್ರಕೃತಿದ್ಯುತಿ, ಸತ್ಯಕ, ಶತ್ರುದಮನ, ಶ್ರೀಧ್ವಜ, ಧ್ರುವ, ದಶರಥ, ದೇವಾನಂದ, ಶಂತನು, ಆನಂದ, ಮಹಾನಂದ, ಚಂದ್ರಾನಂದ, ಮಹಾಬಲ, ಪೃಥು, ಶತಧನು, ವಿಪೃಥು, ಯಶೋಧನ, ದೃಢಬಂಧ ಮತ್ತು ಅನುವೀರ್ಯ ಇವರು ನಿಂತರು; ಇವರೆಲ್ಲ ಅನೇಕ ಲಕ್ಷ ರಥಸಮೇತರು, ಶಸ್ತ್ರಾಸ್ತ್ರಪರಿಶ್ರಮಿಗಳು, ಯುದ್ಧದಲ್ಲಿ ಧಾರ್ತರಾಷ್ಟ್ರರ ವಧೆಯನ್ನು ನಿಶ್ಚಯಿಸಿಕೊಂಡಿದ್ದವರು. ಇವರ ಹಿಂದೆ ಚಂದ್ರಯಶ, ಸಿಂಹಲ, ವರ್ವರ, ಕಂಬೋಜ, ಕೇರಲ, ಕುಶಲ ಮತ್ತು ದ್ರಮಿಲ ದೇಶದ ಅರಸರೂ ಶಾಂತನನೂ ೬೦-೬೦ ಸಾವಿರ ರಥದೊಂದಿಗೆ ನಿಂತಿದ್ದರು. ಇವರಲ್ಲದೆ ಅಶಿತ, ಭಾನು, ತೋಮರ, ಸಂಜಯ, ಅಕಲ್ಪಿತ, ಭಾನು, ವಿಷ್ಣು, ಬೃಹಧ್ವಜ, ಶತ್ರುಂಜಯ, ಮಹಾಸೇನ, ಗಂಭೀರ, ಗೌತಮ, ವಸುಧರ್ಮಾದಿ, ಕೃತವರ್ಮಾ, ಪ್ರಸೇನಜಿತ್, ದೃಢವರ್ಮಾ, ವಿಕ್ರಾಂತ ಮತ್ತು ಚಂದ್ರವರ್ಮ ಮುಂತಾದ ಅರಸರು ಸೇನೆಯೊಂದಿಗೆ ಕೃಷ್ಣನ ಕುಲರಕ್ಷಣೆಗೆ ನಿಂತಿದ್ದರು. ಹೀಗೆ ಚಕ್ರವ್ಯೂಹಭೇದನಕ್ಕೆ ಈ ಪಡೆ ಉತ್ಸುಕವಾಗಿತ್ತು.

ಹೀಗೆ ಯುದ್ಧಸನ್ನದ್ಧವಾದ ಎರಡೂ ಪಡೆಗಳಲ್ಲಿ ಜಿನಮಾರ್ಗದಲ್ಲಿ ನಡೆದು ಪುಣ್ಯಾರ್ಜನೆ ಮಾಡಿದ ಒಬ್ಬ ನಾಯಕನಿಗೇ ಗೆಲವೆಂದು ಗೌತಮಸ್ವಾಮಿಗಳು ತಾವು ಭಾವಿಸುವುದಾಗಿ ಹೇಳುತ್ತಾರೆ.

೫೧. ಹಿರಣ್ಯನಾಭವಧ ವರ್ಣನ

ಈ ನಡುವೆ ವಸುದೇವಹಿತಾಕಾಂಕ್ಷಿಗಳಾದ ವಿದ್ಯಾಧರರೆಲ್ಲ ಒಂದಾಗಿ ಸಮುದ್ರವಿಜಯನಲ್ಲಿಗೆ ಬಂದರು. ವಸುದೇವನ ಮಾವ ಅಶನಿವೇಗ, ಹರಿಗ್ರೀವ, ವರಾಹಕ, ಸಿಂಹದಂಷ್ಟ್ರ, ವಿದ್ಯುದ್ವೇಗ, ಮಾನಸವೇಗ, ವಿದ್ಯುದ್ದಂಷ್ಟ್ರ, ಪಿಂಗಲ ಗಾಂಧಾರ ಮತ್ತು ನಾರಸಿಂಹ ಇವರು ಮೊದಲುಗೊಂಡು ಆರ್ಯ ಮತ್ತು ಮಾತಂಗ ಜಾತಿಯ ಅನೇಕ ವಿದ್ಯಾಧರರು ಕೃಷ್ಣನ ಒಳಿತಿಗೆಂದು ಬಂದರು. ವಸುದೇವನನ್ನು ಮುಂದೆಮಾಡಿಕೊಂಡು ಸಮುದ್ರವಿಜಯನನ್ನು ಕಂಡರು. ಅವನು ಅವರನ್ನು ಸನ್ಮಾನಿಸಿ ಸಂತೋಷಿಸಿದನು. ಬಂದಂಥ ವಿದ್ಯಾಧರರು "ಈ ಯುದ್ಧದಿಂದಾಗಿ ವಸುದೇವನ ವಿರೋಧಿವಿದ್ಯಾಧರರಲ್ಲಿ ಮಹಾಕ್ಷೋಭವುಂಟಾಗುತ್ತಿದೆ; ಅವರು ಜರಾಸಂಧನ ಕಾರ್ಯಸಿದ್ಧಿಗಾಗಿ ಬರುವವರಿದ್ದಾರೆ" ಎಂದು ತಿಳಿಸಿದರು. ಈ ಮಾತು ಕೇಳಿ ಯಾದವರು ಸಲಹೆಮಾಡಿ ಆ ವಿದ್ಯಾಧರರನ್ನು ಶಾಂತಪಡಿಸಲು ಈ ವಿದ್ಯಾಧರರೊಂದಿಗೆ ಪ್ರದ್ಯುಮ್ನ, ಶಂಬ ಮತ್ತು ಇತರ ಪುತ್ರರೊಂದಿಗೆ ವಸುದೇವನನ್ನು ವಿಜಯಾರ್ಧಕ್ಕೆ ಕಳಿಸಿಕೊಟ್ಟರು. ವಸುದೇವನು ನೇಮಿ ಬಲ ಕೃಷ್ಣರನ್ನು ಅಪ್ಪಿ ಬೀಳ್ಕೊಂಡು ಕೆಲವರು ಪುತ್ರ ಪೌತ್ರರು ಮತ್ತು ವಿದ್ಯಾಧರರೊಂದಿಗೆ ಕೂಡಲೇ ಅಲ್ಲಿಗೆ ತೆರಳಿದನು.

ಬಲದೇವನು ಕುಬೇರದತ್ತವಾದ ದಿವ್ಯಾಸ್ತ್ರಪೂರ್ಣವಾದ ಸಿಂಹವಿದ್ಯೆಯ ರಥವೇರಿದನು. ಕೃಷ್ಣನು ಗರುಡವಿದ್ಯೆಯ ರಥವೇರಿದನು. ನೇಮಿನಾಥನು ಮಾತಲ್ಯಧಿಷ್ಠಿತವಾದ, ಇಂದ್ರಪ್ರೇಷಿತವಾದ ರಥವೇರಿದನು. ಸಮುದ್ರವಿಜಯಾದಿಗಳು ಕಪಿಧ್ವಜಾಂಕಿತ ರಥದ ವಸುದೇವಪುತ್ರ ಅನಾವೃಷ್ಟಿಗೆ ಸೇನಾಧಿಪತ್ಯವನ್ನಿತ್ತರು. ಅತ್ತ ಜರಾಸಂಧನು ಹಿರಣ್ಯನಾಭನಿಗೆ ಸೇನಾಧಿಪತ್ಯವಿತ್ತನು.

ಯುದ್ಧತೂರ್ಯಗಳಾದುವು. ಸೇನೆಗಳು ಸಮೀಪಿಸಿ ಬಂದುವು. ಇಕ್ಕೆಲದ ಅರಸರೂ ಕೆರಳಿ ಯುದ್ಧಕ್ಕೆ ತೊಡಗಿದರು. ಚತುರಂಗವು ಚತುರಂಗದೊಡನೆ ಸೆಣಸಿತು; ಮಹಾ ಕೋಲಾಹಲವಾಯಿತು. ಪರಬಲದಿಂದ ಸ್ವಬಲವು ನಷ್ಟವಾಗುತ್ತಿರುವುದು ಕಂಡು ವೃಷ-ಹಸ್ತಿ-ಕಪಿಧ್ವಜರಾದ ನೇಮಿ-ಅರ್ಜುನ-ಅನಾವೃಷ್ಟಿಗಳು ಗರುಡಧ್ವಜನ ಮನೋಗತವನ್ನು ತಿಳಿದು ತಾವೇ ಕಾದಲು ಚಕ್ರವ್ಯೂಹವನ್ನು ಭೇದಿಸಲು ಉದ್ಯತರಾದರು. ನೇಮಿಯು ಶಾಕ್ರವೆಂಬ ಶಂಖವನ್ನೂ ಅರ್ಜುನನು ದೇವದತ್ತವನ್ನೂ ಅನಾವೃಷ್ಟಿಯು ಬಲಾಹಕವನ್ನೂ ಪೂರೈಸಿದರು. ಸ್ವಬಲವು ಸಂತೋಷಿಸಿತು; ಪರಬಲದಲ್ಲಿ ಭಯ ಹಬ್ಬಿತು. ಅನಾವೃಷ್ಟಿಯು ವ್ಯೂಹದ ಮಧ್ಯಭಾಗವನ್ನೂ ನೇಮಿಯು ದಕ್ಷಿಣ ಭಾಗವನ್ನೂ ಅರ್ಜುನನು ಪಶ್ಚಿಮೋತ್ತರ ಭಾಗವನ್ನೂ ಕ್ಷಣಮಾತ್ರದಲ್ಲಿ ಭೇದಿಸಿಬಿಟ್ಟರು. ಅನಾವೃಷ್ಟಿ ಹಿರಣ್ಯನಾಭನನ್ನೂ ನೇಮಿಯು ರುಕ್ಮಿಯನ್ನೂ ದುರ್ಯೋಧನನು ಅರ್ಜುನನ್ನೂ ಇದಿರಿಸಿದರು. ಘೋರ ಯುದ್ಧವಾಯಿತು. ಆಗಸದಲ್ಲಿ ಕಲಹಪ್ರಿಯನಾದ ನಾರದನು ಪುಷ್ಪವೃಷ್ಟಿಮಾಡುತ್ತ ನರ್ತಿಸಿದನು. ನೇಮಿಯು ಬಲುಹೊತ್ತು ಕಾದುತ್ತಿದ್ದ ರುಕ್ಮಿಯನ್ನು ಬಾಣವರ್ಷದಿಂದ ಕೆಳಗುರುಳಿಸಿದನು; ಸಹಸ್ರಾರು ಶತ್ರುರಾಜರನ್ನು ಪಡ

ಲ್ಪಡಿಸಿದನು. ಹೀಗೆಯೇ ಸಮುದ್ರವಿಜಯನೂ ಅವನ ಸೋದರರೂ ಶತ್ರುಗಳನ್ನು ಮೃತ್ಯುಮುಖಕ್ಕೆ ಅಟ್ಟಿದರು. ಬಲದೇವ ಕೃಷ್ಣರ ಪುತ್ರರೂ ಬಾಣವರ್ಷವನ್ನು ಸುರಿಸಿ ಶತ್ರುಗಳ ನಡುವೆ ಯುದ್ಧಕ್ರೀಡೆಯಾಡಿದರು.

ಪುತ್ರಸಹಿತರಾಗಿ ಪಾಂಡವರು ಧೃತರಾಷ್ಟ್ರಸುತರೊಂದಿಗೆ ನಡೆಸಿದ ಯುದ್ಧವನ್ನು ಬಣ್ಣಿಸಲು ಸಮರ್ಥರಾರು ? ಯುಧಿಷ್ಠಿರನು ಶಲ್ಯನೊಡನೆ, ಭೀಮನು ದುಶ್ಶಾಸನನೊಡನೆ, ಸಹದೇವನು ಶಕುನಿಯೊಡನೆ, ಉಲೂಕನು ನಕುಲನೊಡನೆ ಕಾದಿದರು. ಶರಸಂಧಾನದಕ್ಷರಾದ ದುರ್ಯೋಧನ ಅರ್ಜುನರ ನಡುವೆ ಉಗ್ರಯುದ್ಧವಾಯಿತು. ಪಾಂಡವರು ಯುದ್ಧದಲ್ಲಿ ಎಷ್ಟೋಮಂದಿ ಧೃತರಾಷ್ಟ್ರಸುತರನ್ನು ಕೊಂದಿಕ್ಕಿದರು ; ದುರ್ಯೋಧನಾದಿಗಳಾದ ಎಷ್ಟೋ ಮಂದಿಯನ್ನು ಮೃತಪ್ರಾಯ ಮಾಡಿದರು. ಕರ್ಣನು ಕೃಷ್ಣನ ಕಡೆಯ ಅನೇಕ ಯೋಧರನ್ನು ಬಾಣಾಘಾತದಿಂದ ನಾಶಮಾಡಿದನು.

ಇತ್ತ ಸೇನಾಪತಿಗಳಿಬ್ಬರಿಗೆ ಯುದ್ಧ ಭಯಂಕರವಾಗಿ ಘಟಿಸಿತು. ಹಿರಣ್ಯನಾಭ ಅನಾವೃಷ್ಟಿಗಳು ಪರಸ್ಪರರನ್ನು ನೂರಾರು ಬಾರಿ ಬಾಣಾಘಾತಗಳಿಂದ ಗಾಯಪಡಿಸಿದರು. ರುಧಿರಪುತ್ರನಾದ ಹಿರಣ್ಯನಾಭನು ಅನಾವೃಷ್ಟಿಯ ರಥದ ಧ್ವಜವನ್ನು ಕತ್ತರಿಸಲು, ಅನಾವೃಷ್ಟಿಯು ಅವನ ಧನುಸ್ಸು ಛತ್ರ ಸಾರಥಿಗಳನ್ನು ಭೇದಿಸಿದನು. ಇಬ್ಬರಿಗೂ ಮತ್ತೆ ಖಡ್ಗಯುದ್ಧವಾಯಿತು. ಅನಾವೃಷ್ಟಿಯು ಹಿರಣ್ಯನಾಭನ ತೋಳುಗಳನ್ನು ಕಡಿದುಹಾಕಲು, ಅವನು ತೋಳ್ಗಡಿದು ಎದೆಯೊಡೆದು ಕೆಳಗೆ ಬಿದ್ದನು. ಸೇನಾನಿ ಮಡಿಯಲು ಆ ಸೇನೆ ಓಡಿಹೋಗಿ ಜರಾಸಂಧನ ಮರೆಹೊಕ್ಕಿತು. ಅನಾವೃಷ್ಟಿ ವಿಜೇತನಾಗಿ ಕೃಷ್ಣಬಲದೇವರಲ್ಲಿಗೆ ಬಂದನು. ಕೃಷ್ಣ ಬಲದೇವರು ಚಕ್ರವ್ಯೂಹವನ್ನು ಭೇದಿಸಿದ ನೇಮಿಯನ್ನೂ ಅರ್ಜುನನನ್ನೂ ಅನಾವೃಷ್ಟಿಯನ್ನೂ ಆಲಿಂಗಿಸಿದರು. ಸೂರ್ಯಾಸ್ತವಾಗಿ ಜರಾಸಂಧನ ಪಡೆ ದುಃಖದಿಂದ ಬೀಡಿಗೆ ಮರಳಿತು ; ಯಾದವರ ಪಡೆ ಆನಂದದಿಂದ ಬೀಡಿಗೆ ಮರಳಿತು.

೫೨. ಜರಾಸಂಧವಧ ವರ್ಣನ

ಮರುದಿನ ಸೂರ್ಯೋದಯವಾಗುತ್ತಲೂ ಜರಾಸಂಧ ಕೃಷ್ಣರು ಯುದ್ಧಸನ್ನದ್ಧರಾಗಿ ತಂತಮ್ಮ ಸೇನೆಗಳೊಂದಿಗೆ ಹೊರಬಂದರು. ಮುನ್ನಿನಂತೆಯೇ ವ್ಯೂಹಗಳನ್ನು ರಚಿಸಿಕೊಂಡ ಮೇಲೆ, ಅರಸರು ಯಥಾಸ್ಥಾನಗಳಲ್ಲಿದ್ದುಕೊಂಡು ಶತ್ರುಘಾತಕ್ಕೆ ಸಿದ್ಧವಾದರು. ರಣಾಂಗಣಕ್ಕೆ ಬಂದು ರಥದಲ್ಲಿದ್ದ ಜರಾಸಂಧನು ಯಾದವರನ್ನು ಕಂಡು ತನ್ನ ಬಳಿಯ ಹಂಸಕನೆಂಬ ಮಂತ್ರಿಯನ್ನು ಕುರಿತು "ಎಲೈ ಹಂಸಕನೇ, ಯಾದವರಲ್ಲಿ ಒಬ್ಬೊಬ್ಬರದೂ ಹೆಸರು ಗುರುತುಗಳನ್ನು ತಿಳಿಸು. ಇದರಿಂದ ಅವರನ್ನೇ ನಾನು ಲಕ್ಷಿಸುವುದಾಗುತ್ತದೆ ; ಹಾಗಲ್ಲದೆ ಇತರರನ್ನು ಕೊಲ್ಲುವುದರಿಂದೇನು ಲಾಭ ?" ಎಂದನು. ಹಂಸಕನು ನಿರೂಪಿಸತೊಡಗಿದನು :

"ಸ್ವಾಮಿ, ಗರುಡಧ್ವಜವು ಹಾರುತ್ತಿರುವ ಈ ಬೆಳ್ಗುದುರೆಗಳ ರಥದಲ್ಲಿರುವವನು

ಕೃಷ್ಣನು. ವೃಷಧ್ವಜವು ಹಾರುತ್ತಿರುವ ಗಿಳಿಯ ಬಣ್ಣದ ಕುದುರೆಗಳ ರಥದಲ್ಲಿರುವವನು ಅರಿಷ್ಟನೇಮಿ. ಕೃಷ್ಣನ ಬಲಗಡೆ ಅರಿಷ್ಟವರ್ಣದ ಕುದುರೆಗಳು ಹೂಡಿರುವ ತಾಲಧ್ವಜ ಕಟ್ಟಿರುವ ರಥದಲ್ಲಿರುವವನು ಬಲದೇವನು ; ಕೃಷ್ಣವರ್ಣದ ಕುದುರೆಗಳ ಕಪಿಧ್ವಜದ ರಥವು ಸೇನಾಪತಿ ಅನಾವೃಷ್ಟಿಯದು. ನೀಲಕೇಸರವಾಲಾಗ್ರಗಳಾದ ಕುದುರೆಗಳ ರಥವು ಯುಧಿಷ್ಠಿರನದು. ಶಶಾಂಕವಿಶದಧವಲಾಶ್ವಗಳು ಹೂಡಿರುವ ಹಸ್ತಿಧ್ವಜದ ರಥದಲ್ಲಿರುವಾತನು ಅರ್ಜುನನು. ನೀಲೋತ್ಪಲ ನಿಭಾಶ್ವಗಳನ್ನು ಕಟ್ಟಿದ ರಥದಲ್ಲಿ ಭೀಮಸೇನನು. ಯಾದವ ಸೈನ್ಯದ ನಡುವೆ ಶೋಣವರ್ಣದ ಕುದುರೆಗಳನ್ನು ಹೂಡಿರುವ ಸಿಂಹಧ್ವಜದ ರಥದಲ್ಲಿರುವವನು ಸಮುದ್ರವಿಜಯ. ಕದಲೀಧ್ವಜದ ರಥದಲ್ಲಿರುವವನು ಅಕ್ರೂರಕುಮಾರನು. ತಿತ್ತಿರಕಲ್ಮಷಗಳಾದ ಅಶ್ವಗಳ ರಥದಲ್ಲಿ ಸತ್ಯಕನಿದ್ದಾನೆ. ಕುಮುದವರ್ಣದ ಅಶ್ವಗಳ ರಥದಲ್ಲಿರುವಾತ ಮಹಾನೇಮಿಕುಮಾರನು. ಚಾಮೀಕರ ಬೃಹದ್ದಂಡಪತಾಕಾಭೂಷಿತವಾದಂಥ ಶುಕತುಂಡನಿಭಾಶ್ವಗಳನ್ನು ಹೂಡಿದ ರಥದಲ್ಲಿ ಭೋಜನಿದ್ದಾನೆ. ಮೃಗಕೇತುವಿರಾಜಿತವಾದ ರಥದಲ್ಲಿರುವವನು, ಜರತ್ಕುಮಾರ. ಕಾಂಭೋಜ ವಾಜಿಗಳನ್ನು ಕಟ್ಟಿದ ದಿವ್ಯೋಜ್ವಲವಾದ ರಥದಲ್ಲಿರುವವನು, ಸೋಮನ ಪುತ್ರನಾದ ಸಿಂಹಲನು. ನಸುಗೆಂಪುಬಣ್ಣದ ಕುದುರೆಗಳ ಮತ್ಸ್ಯಧ್ವಜದ ರಥದಲ್ಲಿರುವವನು ಮರುರಾಜ; ಪದ್ಮಸನ್ನಿಭವರ್ಣದ ಕುದುರೆಗಳ ರಥದಲ್ಲಿ ಕುಳಿತು ಸೇನಾಗ್ರದಲ್ಲಿರುವವನು ಪದ್ಮರಥನು. ಪಾರಿವಾಳದ ಬಣ್ಣದ ಕುದುರೆಗಳು ಕಟ್ಟಿದ, ಪುಷ್ಕರಧ್ವಜವೇರಿಸಿದ ರಥದಲ್ಲಿರುವವನು ಸಾರಣಕ. ಬಿಳಿಗೆಂಪು ಬಣ್ಣಗಳ ಕುದುರೆಗಳ ರಥದಲ್ಲಿರುವವನು, ನಾಗ್ನಜಿತ್ತನ ಮಗನಾದ ಮೇರುದತ್ತ. ಪಂಚವರ್ಣದ ಕುದುರೆಗಳು ಕಟ್ಟಿದ, ಕಲಶಧ್ವಜವು ಹಾರುತ್ತಿರುವ ರಥವು ವಿದೂರಥನದು."

"ಹೀಗೆ ಬಲಶಾಲಿಗಳಾದ ಯಾದವರ ರಥಗಳು ಎಲ್ಲ ಬಣ್ಣಗಳ ಕುದುರೆಗಳಿಂದ ಕೂಡಿದವು; ನೂರಾರು ಸಾವಿರಾರು ಸಂಖ್ಯೆಯಲ್ಲಿರುವಂಥವು. ಅವುಗಳ ಸಮಗ್ರ ವರ್ಣನೆ ಶಕ್ಯವಿಲ್ಲ. ಇನ್ನು ಸ್ವಪಕ್ಷದ ಅರಸರು ಅರಸುಕುಮಾರರ ನಾನಾಚಿಹ್ನೆಗಳ ರಥಗಳನ್ನು ನೀವು ತಕ್ಕಮಟ್ಟಿಗೆ ತಿಳಿದೇ ಇದ್ದೀರಿ. ನಮ್ಮ ಪಕ್ಷದ ವ್ಯೂಹವು ಶತ್ರುಸೇನೆಗೆ ಭಯೋತ್ಪಾದಕವಾಗಿಯೇ ಇದೆ." ಇದನ್ನು ಕೇಳಿದ ಮೇಲೆ, ಜರಾಸಂಧನು ತನ್ನ ಸಾರಥಿಗೆ ರಥವನ್ನು ಯಾದವರ ಕಡೆಗೆ ಕೂಡಲೇ ಒಯ್ಯುವಂತೆ ತಿಳಿಸಿದನು. ಹಾಗೆಯೇ ಸಾರಥಿ ರಥವನ್ನು ಕೂಡಲೇ ಮುಂದಕ್ಕೆ ಒಯ್ದನು. ಜರಾಸಂಧನು ಒಂದೇ ಸಮನೆ ಕರೆದ ಬಾಣವರ್ಷದಿಂದ ಯಾದವರನ್ನು ಮುಚ್ಚಿಬಿಟ್ಟನು. ರಥಾದಿ ವಾಹನಗಳಲ್ಲಿ ಕುಳಿತ ಅವನ ಪುತ್ರರೂ ಕ್ರುದ್ಧರಾಗಿ ಯಾದವರ ಸೇನೆಯಲ್ಲಿ ರಣಕ್ರೀಡೆಯಾಡಿದರು. ಹಿರಿಯ ಮಗನಾದ ಕಾಲಯವನನು ಸಾಕ್ಷಾತ್ ಯಮನಂತೆ ಕಾಣಿಸಿಕೊಂಡು ಮಲಯವೆಂಬ ಆನೆಯನ್ನೇರಿ ಉಗ್ರವಾಗಿ ಕಾದಿದನು. ಇವನಲ್ಲದೆ ಸಹದೇವ ದ್ರುಮಸೇನ ಜರಾಸಂಧಪುತ್ರರೂ ಶತ್ರುಪ್ರಹಾರ ನಡೆಸಿದರು. ಕಾಲಯವನನನ್ನು ವಸುದೇವಪುತ್ರರು ಮುತ್ತಿಕೊಂಡರು. ಅವರ ನಡುವೆ ಉಗ್ರಕದನವಾಯಿತು. ಕಾಲಯವನ ಚಕ್ರ ನಾರಾಚ ಮುಂತಾದ ಶಸ್ತ್ರ

ಗಳಿಂದ ಎಷ್ಟೋ ಮಂದಿ ಕುಮಾರರ ತಲೆಗಳನ್ನು ಕಡಿದಿಕ್ಕಿ ನೆತ್ತರ ಹೊಳೆ ಹರಿಸಿದನು. ಇದನ್ನು ಕಂಡು ಸಾರಣನು ಕ್ರುದ್ಧನಾದನು. ಕೂಡಲೇ ಬಂದು ಒಂದೇ ಖಡ್ಗಪ್ರಹಾರದಿಂದ ಕಾಲಯವನನನ್ನು ಯಮನಲ್ಲಿಗೆ ಅಟ್ಟಿದನು. ಜರಾಸಂಧನ ಅಳಿದುಳಿದ ಪುತ್ರರೆಲ್ಲ ಯುದ್ಧಕ್ಕಿದಿರಿಸಿ ಬಂದಾಗ ಅರ್ಧಚಂದ್ರಾಸ್ತ್ರಗಳ ಪ್ರಯೋಗದಿಂದ ಕೃಷ್ಣನು ಅವರ ತಲೆಗಡಿದು ಮೃತ್ಯುಮುಖಕ್ಕೆ ಕಳಿಸಿದನು.

ಆಮೇಲೆ ಜರಾಸಂಧನು ತಾನೇ ಕ್ರುದ್ಧನಾಗಿ ಧನುಷ್ಟಂಕಾರ ಮಾಡಿ ರಥಾರೂಢನಾಗಿ ಕೃಷ್ಣನತ್ತ ನುಗ್ಗಿದನು. ಆಯಿಬ್ಬರೂ ಪರಸ್ಪರರನ್ನು ಮೂದಲಿಸುತ್ತ ದಿವ್ಯಶಸ್ತ್ರಾಸ್ತ್ರಗಳನ್ನು ಪ್ರಯೋಗಮಾಡಿ ಭಯಂಕರವಾಗಿ ಕಾದಿದರು. ಜರಾಸಂಧನು ಕೃಷ್ಣನನ್ನು ಕೊಲ್ಲಲೆಳಸಿ ನಾಗಾಸ್ತ್ರವನ್ನು ಬಿಟ್ಟನು. ಕೃಷ್ಣನು ಗರುಡಾಸ್ತ್ರದಿಂದ ಅದನ್ನು ನಾಶಮಾಡಿದನು. ಜರಾಸಂಧನು ಸಂವರ್ತಕಾಸ್ತ್ರವನ್ನು ಬಿಡಲು ಕೃಷ್ಣನು ಮಹಾಶ್ವಸನವೆಂಬ ಅಸ್ತ್ರದಿಂದ ಅದನ್ನು ಪರಿಹರಿಸಿದನು. ಹೀಗೆಯೇ ಜರಾಸಂಧನು ಪ್ರಯೋಗಿಸಿದ ವಾಯವ್ಯಾಸ್ತ್ರವನ್ನು ಅಂತರಿಕ್ಷಾಸ್ತ್ರದಿಂದಲೂ, ಆಗ್ನೇಯಾಸ್ತ್ರವನ್ನು ವಾರುಣಾಸ್ತ್ರದಿಂದಲೂ, ವೈರೋಚನಾಸ್ತ್ರವನ್ನು ಮಾಹೇಂದ್ರಾಸ್ತ್ರದಿಂದಲೂ, ರಾಕ್ಷಸಾಸ್ತ್ರವನ್ನು ನಾರಾಯಣಾಸ್ತ್ರದಿಂದಲೂ ತಾಮಸಾಸ್ತ್ರವನ್ನು ಭಾಸ್ಕರಾಸ್ತ್ರದಿಂದಲೂ, ಅಶ್ವಗ್ರೀವಾಸ್ತ್ರವನ್ನು ಬ್ರಹ್ಮಶಿರೋಸ್ತ್ರದಿಂದಲೂ ಕೃಷ್ಣನು ನಿವಾರಿಸಿದನು. ಇವಲ್ಲದೆ ಶತ್ರುವು ಇನ್ನೂ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು ; ಆದರೆ ಕೃಷ್ಣನು ಅವನ್ನೆಲ್ಲ ನಿಷ್ಪ್ರಯೋಜನಗೊಳಿಸಿ ಮುನ್ನಿನಂತೆ ಸ್ಥಿರವಾಗಿ ನಿಂತಿದ್ದನು. ಅವನ ಕೂದಲು ಕೂಡ ಕೊಂಕಲಿಲ್ಲ. ಹೀಗೆ ಜರಾಸಂಧನ ಸರ್ವಪ್ರಯತ್ನವೂ ನಿಷ್ಫಲವಾದ ಮೇಲೆ ಬಿಲ್ಲನ್ನು ನೆಲದ ಮೇಲೆಸೆದು ಬಿಟ್ಟು, ಸಹಸ್ರಯಕ್ಷರಿಂದ ರಕ್ಷಿತವಾದ ಚಕ್ರರತ್ನವನ್ನು ನೆನೆದನು. ನೆನೆಯುತ್ತಲೇ ಸೂರ್ಯಸಮಪ್ರಭವೂ ದಿಕ್ಚಕ್ರವಿದ್ಯೋತಿಯೂ ಆದ ಚಕ್ರವು ಅವನ ಕೈಗೆ ಬಂತು. ಹಲವಾರು ಅಸ್ತ್ರಗಳು ವ್ಯರ್ಥಗೊಂಡಿದ್ದರಿಂದ ಕ್ರೋಧವು ಮಿತಿಮೀರಿದ್ದ ಜರಾಸಂಧನು ತಡವಿಲ್ಲದೆ ಆ ಚಕ್ರರತ್ನವನ್ನು ಕೃಷ್ಣನತ್ತ ಎಸೆದನು. ಅದು ಆಕಾಶದಲ್ಲಿ ಮಹೋಜ್ವಲವಾಗಿ ಬೆಳಗುತ್ತ ಬರುತ್ತಿರಬೇಕಾದರೆ ಅದನ್ನು ನಷ್ಟಗೊಳಿಸಲು ಕೃಷ್ಣಪಕ್ಷದ ಸಮಸ್ತರಾಜರೂ ಯಥೋಚಿತವಾದ ಚಕ್ರಗಳನ್ನು ಅದರತ್ತ ಎಸೆದರು. ಕೃಷ್ಣನು ಶಕ್ತಿ ಗದೆಗಳನ್ನೂ, ಬಲದೇವನು ಹಲಮುಸಲಗಳನ್ನೂ ಭೀಮನು ಗದೆಯನ್ನೂ ಅರ್ಜುನನು ನಾನಾಸ್ತ್ರಗಳನ್ನೂ ಅನಾವೃಷ್ಟಿಯು ಪರಿಘವನ್ನೂ, ಯುಧಿಷ್ಠಿರನು ಶಕ್ತಿಯನ್ನೂ ಎತ್ತಿಕೊಂಡು ಎದುರಿಸಲು ಮುಂದೆ ಬಂದರು. ಸಮುದ್ರವಿಜಯ ಅಕ್ಷೋಭ್ಯಾದಿಗಳೂ ಸಮುಚಿತ್ತರಾಗಿ ಮಹಾಸ್ತ್ರಗಳನ್ನು ಅದರ ಮೇಲೆ ಪ್ರಯೋಗಿಸತೊಡಗಿದರು. ಆದರೆ ಭಗವಾನ್ ನೇಮಿನಾಥನು ಅವಧಿಜ್ಞಾನದ ಮೂಲಕವಾಗಿ ಮುನ್ನಡೆಯುವುದರ ಗತಿವಿಧಿಗಳನ್ನು ಚೆನ್ನಾಗಿ ತಿಳಿದಿದ್ದುದರಿಂದ ಕೃಷ್ಣನ ಸಂಗಡವೇ ಚಕ್ರರತ್ನದ ಮುಂದೆಯೇ ನಿಂತುಬಿಟ್ಟನು. ಆ ಚಕ್ರವು ಬರುಬರುತ್ತ, ಮಿತ್ರನೆಂಬಂತೆ ಮೆಲ್ಲಮೆಲ್ಲಗೆ ಹತ್ತಿರವಾಗಿ, ನೇಮಿಸಹಿತನಾದ ಕೃಷ್ಣನನ್ನು ಪ್ರದಕ್ಷಿಣೆಮಾಡಿ ಶಂಖ ಚಕ್ರಾಂಕುಶ ಚಿಹ್ನೆಯ ಕೃಷ್ಣನ ಬಲಗೈಯಲ್ಲಿ ಸ್ಥಿತ

ವಾಯಿತು, ಆಕಾಶದಲ್ಲಿ ದುಂದುಭಿಧ್ವನಿಗಳಾದುವು, ಪುಷ್ಪವೃಷ್ಟಿಯಾಗತೊಡಗಿತು. ''ಇಕೋ ೯ನೆಯ ನಾರಾಯಣನು ಪ್ರಕಟವಾಗಿದ್ದಾನೆ'' ಎಂದು ದೇವರು ಹೇಳತೊಡಗಿದರು. ಅನುಕೂಲವೂ ಸುಗಂಧಿತವೂ ಆದ ಅನಿಲವು ಬೀಸಿತು. ಯಾದವರ ಅಸ್ತ್ರಗಳೂ ಹೃದಯಗಳೂ ಒಟ್ಟಿಗೆ ನೆಮ್ಮದಿಯ ನಿಟ್ಟುಸಿರು ಬಿಟ್ಟುವು.

ಯುದ್ಧದಲ್ಲಿ ಕೃಷ್ಣನ ಕೈಯಲ್ಲಿ ಚಕ್ರವು ಬಂದದ್ದು ನೋಡಿ ಜರಾಸಂಧನು ಹೀಗೆ ಆಲೋಚಿಸಿದನು : ''ಅಯ್ಯೋ, ಈ ಚಕ್ರಪ್ರಯೋಗವೂ ನಿರರ್ಥಕವಾಯಿತಲ್ಲ. ಚಕ್ರರತ್ನದ ಒಡೆಯನೂ ತ್ರಿಖಂಡಾಧಿಪತಿಯೂ ಮಹಾಶೂರನೂ ಆದ ನನ್ನಂಥವನ ಪೌರುಷವೂ ಭಂಗವಾಯಿತಲ್ಲ. 'ದೈವಬಲವು ಎಲ್ಲಿಯವರೆಗೆ ಪ್ರಬಲವಾಗಿರುತ್ತದೋ ಅಲ್ಲಿಯವರೆಗೆ ಸೈನ್ಯವೂ ಸಕಲವೂ ಅನುಕೂಲವಾಗಿರುತ್ತವೆ ; ಅದೇ ದೈವಬಲವು ದುರ್ಬಲವಾದಾಗ ಕಾಲವೂ ಪುರುಷಾರ್ಥವೂ ಎಲ್ಲವೂ ನಿರರ್ಥಕವಾಗುತ್ತವೆ' ಎನ್ನುವ ಬಲ್ಲಿದರ ಮಾತು ಸತ್ಯ ; ಅದರಲ್ಲಿ ತಿಲಾಂಶವೂ ಅನ್ಯಥಾ ಅಲ್ಲ. ನಾನು ಗರ್ವೇಶ್ವರನೂ ಅನ್ಯರಿಗೆ ಅಲಂಘ್ಯನೂ ಆದವನು. ಹೀಗಿದ್ದೂ ಗರ್ಭಾದಿ ಕಾಲದಿಂದ ಕ್ಲೇಶಪಟ್ಟವನೂ ಅಲ್ಪನೂ ಆದ ಒಬ್ಬಾತನಿಂದ ಏಕೆ ಹೀಗೆ ನಾನು ಸೋಲನ್ನು ಅನುಭವಿಸುತ್ತಿದ್ದೇನೆ ? ಇಂಥ ಒಬ್ಬ ಸಾಧಾರಣನೂ ವಿಧಿಬಲದಿಂದ ನನ್ನನ್ನು ಗೆದ್ದನು ; ಆದರೆ ಇವನಿಗೆ ಕೂಡ ಬಾಲ್ಯಕಾಲದಿಂದ ಗೋಕುಲದಲ್ಲಿ ನಾನಾಕ್ಲೇಶಗಳನ್ನು ಅನುಭವಿಸಬೇಕಾಯಿತು. ಈ ವಿಧಿವಿಲಾಸಕ್ಕೆ ಧಿಕ್ಕಾರ ! ಲೋಕವನ್ನು ಕುರುಡುಮಾಡುವ ಚತುರೆಯೂ, ಧೀರರ ಧೈರ್ಯವನ್ನು ಕಳೆಯುವವಳೂ ವೇಶ್ಯೆಯಂತೆ ಪರಪುರುಷಾಕಾಂಕ್ಷಿಯೂ ಆದ ಈ (ರಾಜ್ಯ)ಲಕ್ಷ್ಮಿಗೆ ಧಿಕ್ಕಾರ !''

ಹೀಗೆ ಆಲೋಚಿಸುತ್ತಿರುವಾಗ ತನ್ನ ಮರಣಕಾಲವು ಸನ್ನಿಹಿತವೆಂಬುದು ಜರಾಸಂಧನಿಗೆ ಖಚಿತವಾಯಿತು. ಆದರೆ ಸ್ವಭಾವತಃ ನಿರ್ಭಯನಾದ ಕಾರಣ ಕೃಷ್ಣನನ್ನು ಕುರಿತು ''ಎಲವೋ ಗೋಪ, ನೀನು ಚಕ್ರವನ್ನು ಪ್ರಯೋಗಿಸು. ಬರಿದೇ ಏಕೆ ಹೊತ್ತು ಕಳೆಯುತ್ತಿರುವೆ ? ಮೂಢ, ಸಮಯದ ಉಪೇಕ್ಷೆ ಮಾಡುವ ಅಲಸಿಯು ಹಾಳಾಗುವುದು ಖಂಡಿತ'' ಎಂದನು. ಪ್ರಕೃತಿಯಿಂದ ವಿನಯಪರನಾದ ಕೃಷ್ಣನು ಅವನಿಗೆ "ನಾನು ಚಕ್ರವರ್ತಿಯಾಗಿ ಹುಟ್ಟಿ ಆಗಿದೆ ; ಆದ್ದರಿಂದ ಇಂದಿನಿಂದ ನೀನು ನನ್ನ ಅಪ್ಪಣೆಯಲ್ಲಿರಬೇಕು. ನೀನು ನಮಗೆ ಅಪಕಾರಮಾಡಲು ತೊಡಗಿದ್ದು ಸ್ಪಷ್ಟವೇ ಇದ್ದರೂ ನಾವು ನಮಸ್ಕಾರಮಾತ್ರದಿಂದ ಪ್ರಸನ್ನರಾಗಿ ನಿನ್ನ ಅಪಕಾರವನ್ನು ಕ್ಷಮಿಸಿಬಿಡುತ್ತೇವೆ'' ಎಂದನು. ಆಗ ಗರ್ವನಿರ್ಭರನಾದ ಜರಾಸಂಧನು ''ಎಲವೋ ! ಈ ಚಕ್ರವಾದರೋ ನನಗೆ ಅಲಾತಚಕ್ರಕ್ಕೆ ಸಮ. ನೀನು ಇಷ್ಟರಿಂದಲೇ ಏತಕ್ಕೆ ಗರ್ವಪಡುತ್ತೀಯೆ. ಅಥವಾ ಯಾವಾತ ಒಳ್ಳೆಯದನ್ನೇ ಎಂದೂ ಕಂಡಿಲ್ಲವೋ ಅಂಥ ಕ್ಷುದ್ರಮನುಷ್ಯ ಸ್ವಲ್ಪ ವೈಭವದಿಂದಲೇ ಮದಿಸಿ ಹೋಗುತ್ತಾನೆ ; ಒಳ್ಳೆಯದು ಕಂಡವನಾದರೋ ಮಹತ್ತಾದ ವೈಭವ ದೊರೆತರೂ ಗರ್ವಿಸದ ಮಹಾಪುರುಷನಾಗಿರುತ್ತಾನೆ. ನಾನು ಈ ಯಾದವರು, ಈ ಚಕ್ರ, ನಿನ್ನ ಬೆಂಬಲಿಗರಾದರಸರು ಈಯೆಲ್ಲರೊಡನೆ ನಿನ್ನನ್ನು ಶೀಘ್ರದಲ್ಲಿಯೇ ಸಮುದ್ರಕ್ಕೆಸೆಯುತ್ತೇನೆ"-ಎಂದನು.

ಜರಾಸಂಧನು ಹೀಗೆನ್ನಲು ಕ್ರುದ್ಧನಾದ ಕೃಷ್ಣನು ಚಕ್ರರತ್ನವನ್ನು ಅವನ ಮೇಲೆ ಪ್ರಯೋಗಿಸಿದನು. ಅದು ಕೂಡಲೇ ಹೋಗಿ ಜರಾಸಂಧನ ವಕ್ಷಃಸ್ಥಲದ ಭಿತ್ತಿಯನ್ನು ಭೇದಿಸಿತು. ಆಪ್ಟುಮಾಡಿ ಕ್ಷಣಮಾತ್ರದಲ್ಲಿ ಅದು ಮರಳಿ ಕೃಷ್ಣನ ಕೈಗೆ ಬಂತು. ಕೃಷ್ಣನು ಪಾಂಚಜನ್ಯವನ್ನು ಊದಿದನು. ನೇಮಿನಾಥ ಅರ್ಜುನ ಅನಾವೃಷ್ಟಿಗಳೂ ತಂತಮ್ಮ ಶಂಖಗಳನ್ನು ಪೂರೈಸಿದರು. ನಾಲ್ದೆಸೆಗೂ ಅಭಯಘೋಷಣೆಯನ್ನು ಮಾಡಿಸಲಾಯಿತು. ಇದರಿಂದ ಸ್ವಸೇನೆ ಪರಸೇನೆಗಳು ಮರುಮಾತಿಲ್ಲದೆ, ಭಯಭೀತಿಯಿಲ್ಲದೆ. ಬಂದು ಕೃಷ್ಣನ ಆಜ್ಞಾಕಾರಿಗಳಾದುವು. ದುರ್ಯೋಧನ ದ್ರೋಣ ದುಃಶಾಸನ ಮುಂತಾದವರು ಸಂಸಾರದಲ್ಲಿ ವೈರಾಗ್ಯಗೊಂಡವರಾಗಿ ಮುನಿಯಾದ ವಿದುರನ ಬಳಿಯಲ್ಲಿ ಜಿನದೀಕ್ಷೆಯನ್ನು ಪರಿಗ್ರಹಿಸಿದರು. ಅರಸನಾದ ಕರ್ಣನೂ ರಣದೀಕ್ಷೆಯ ನಂತರ ಸುದರ್ಶನೋದ್ಯಾನದಲ್ಲಿ ದಮವರರೆಂಬ ಮುನಿಯ ಬಳಿಯಲ್ಲಿ ನಿರ್ವಾಣಫಲವನ್ನೀವ ದೀಕ್ಷೆಯನ್ನು ಗ್ರಹಿಸಿದನು. ಅರಸನಾದ ಕರ್ಣನು ಯಾವ ಸ್ಥಳದಲ್ಲಿ ಸುವರ್ಣಾಕ್ಷರಭೂಷಿತವಾದ ಕರ್ಣಕುಂಡಲಗಳನ್ನು ಬಿಟ್ಟಿದ್ದನೋ ಆ ಸ್ಥಾನವನ್ನು ಜನರು ಕರ್ಣಸುವರ್ಣವೆಂದು ಕರೆಯತೊಡಗಿದರು. "ನಾನು ನನ್ನ ಸ್ವಾಮಿಯ ಸೇವೆಗೆ ತೆರಳಲೇ ?'' ಎಂದು ಬೇಡಿ ಮಾತಲಿಯು ಇಂದ್ರನಲ್ಲಿಗೆ ಹಿಂದಿರುಗಿದನು. ಯಾದವರೂ ಅನ್ಯರಾಜರೊಡನೆ ತಂತಮ್ಮ ಶಿಬಿರಗಳಿಗೆ ಮರಳಿದರು.

ಸೂರ್ಯಾಸ್ತವಾಯಿತು. ಸಂಜೆಗೆಂಪು ಹತ್ತೂ ದಿಕ್ಕುಗಳಲ್ಲಿ ಹರಡಿತು. ಅದನ್ನು ನೋಡಿದರೆ ಶ್ರೀಕೃಷ್ಣನಿಂದ ಹತನಾದ ಜರಾಸಂಧನ ಪಾಡು ಕಂಡು ಸಹೃದಯನಾದ ಸೂರ್ಯನು ಮೊದಲು ಶೋಕಕಾರಣವಾಗಿ ಅತ್ತದ್ದರಿಂದ ಅವನ ಮುಖ ಜಪಾಕುಸುಮದಂತೆ ಕೆಂಪಾಗಿದ್ದಿತು. ಆಮೇಲೆ ಜಲಾಂಜಲಿಯನ್ನು ಕೊಡಲೆಂದು ಸಮುದ್ರದಲ್ಲಿ ಮುಳುಗಿದನು. ಗೌತಮಸ್ವಾಮಿ ಹೇಳುತ್ತಾರೆ : ''ಶುಭಕರ್ಮದ ಉದಯದಿಂದ ಜೀವನು ಅಧಿಕಾಧಿಕವ್ಯಕ್ತಿಗಳ ಮೇಲೆಯೂ ಆಕ್ರಮಣಮಾಡುವ ಸಾಮರ್ಥ್ಯವನ್ನು ಪಡೆಯುತ್ತಾನೆ. ಆ ಶುಭಕರ್ಮದ ಉದಯವು ನಷ್ಟವಾಗುವುದರಿಂದ ವಿಪತ್ತುಗಳನ್ನು ಅನುಭವಿಸುತ್ತಾನೆ, ಆದ್ದರಿಂದ ಜಿನಮತದಲ್ಲಿ ಸ್ಥಿರಬುದ್ಧಿಯಿಟ್ಟು ನಿರ್ಮಲತಪವನ್ನು ಆಚರಿಸಬೇಕು.

೫೩. ಕೃಷ್ಣವಿಜಯ ವರ್ಣನ

ಮಾರನೆಯ ದಿನ ಪರಾಲಂಘ್ಯಮಹಾತೇಜನಾದ ಕೃಷ್ಣನಂತೆ ದಿಕ್ಕುಗಳನ್ನು ಬೆಳಗುತ್ತ ಸೂರ್ಯನು ಉದಯಿಸಲು, ಇತ್ತ ಯಾದವರ ಸೇನೆಯಲ್ಲಿ ಯೋಧರ ಗಾಯಗಳು ಚಿಕಿತ್ಸೆಯಿಂದ ವಾಸಿಯಾಯಿತು ; ಅತ್ತ ಜರಾಸಂಧಾದಿ ರಾಜರಿಗೆ ಅಂತಿಮ ಸಂಸ್ಕಾರವು ಕ್ರಮವಾಗಿ ನಡೆಯಿತು. ಒಂದು ದಿನ ಸಮುದ್ರವಿಜಯಾದಿಗಳು ಸಭಾಮಂಟಪದಲ್ಲಿ ಕೃಷ್ಣನೊಡನೆ ಕುಳಿತು ವಸುದೇವನ ಆಗಮನದ ಪ್ರತೀಕ್ಷೆ ಮಾಡುತ್ತಿದ್ದರು. ''ಪುತ್ರರನ್ನೂ ಪೌತ್ರರನ್ನೂ ಒಡಗೊಂಡು ವಿಜಯಾರ್ಧಗಿರಿಗೆ ವಸುದೇವನು ಹೋಗಿ ಬಹುಕಾಲವಾಯಿತು. ಈವರೆಗೆ ಅವರ ಕ್ಷೇಮವಾರ್ತೆ ಏತಕ್ಕೆ ನಮಗೆ ಬಂದಿಲ್ಲ ?" ಎಂದು

ಅವರು ತಮ್ಮ ತಮ್ಮಲ್ಲಿ ಚರ್ಚಿಸುತ್ತಿದ್ದರು. ಹೀಗೆ ಚರ್ಚಿಸುತ್ತಿರುವಾಗ ಆಕಾಶದಲ್ಲಿ ಮಿಂಚಿನಂತೆ ಬೆಳಗುತ್ತ ವಿದ್ಯಾಧರಿಯರ ಗುಂಪೊಂದು ವೇಗವತಿ ಮತ್ತು ನಾಗಕುಮಾರಿಯರೊಂದಿಗೆ ಅಲ್ಲಿಗೆ ಬಂದು ಕಾಣಿಸಿಕೊಂಡಿತು. "ನಿಮಗೆ ಗುರುಜನರೆಲ್ಲ ಹರಸಿದ್ದು ಇಂದು ಸಫಲವಾಯಿತು'' ಎಂದು ನುಡಿದು, ''ಇಲ್ಲಿ ಮಗನು ಜರಾಸಂಧನನ್ನು ನಾಶಮಾಡಿದನು ; ಅಲ್ಲಿ ತಂದೆ ವಿದ್ಯಾಧರರನ್ನು ನಾಶಪಡಿಸಿದ್ದಾನೆ ; ಪುತ್ರರು ಪೌತ್ರರನ್ನೊಡಗೊಂಡು ವಸುದೇವನು ಕ್ಷೇಮದಿಂದಿದ್ದಾನೆ. ಅಲ್ಲದೆ ತನಗೆ ಹಿರಿಯರಾದವರಿಗೆ ನಮಸ್ಕಾರಗಳ ಹಾಗೂ ತನ್ನ ಪುತ್ರರಿಗೆ ಅಪ್ಪುಗೆಯ ಸಂದೇಶವನ್ನು ಹೇಳಿಕಳಿಸಿದ್ದಾನೆ''—ಎಂದು ತಿಳಿಸಿದರು.

ವಿದ್ಯಾಧರಿಯರಿಂದ ಈ ಸುದ್ದಿ ಕೇಳಿ ಹರ್ಷಿಸಿದ ಅರಸರೆಲ್ಲ ಅವರನ್ನು ಕುರಿತು ''ವಸುದೇವನು ವಿದ್ಯಾಧರರನ್ನು ಹೇಗೆ ಗೆದ್ದನು'' ಎಂದು ಪ್ರಶ್ನಿಸಿದರು. ಆಗ ವೇಗವತಿಯಾದ ನಾಗಕುಮಾರಿ (ವನವತೀದೇವಿ) ಹೀಗೆ ನಿವೇದಿಸಿದಳು: "ವಸುದೇವನು ರಣದಲ್ಲಿ ತೋರಿದ ಸಾಮರ್ಥ್ಯವನ್ನು ಗಮನವಿಟ್ಟು ಕೇಳಿ. ಯುದ್ಧಚತುರನಾದ ವಸುದೇವನು ವಿಜಯಾರ್ಧದ ಮೇಲೆ ಹೋಗಿ ತನ್ನ ಮಾವಂದಿರು ಭಾವಂದಿರು ಮುಂತಾದವರೊಡನೆ ಕೂಡಿಕೊಂಡು ಇಲ್ಲಿಗೆ ಬರಲಿದ್ದಂಥ ವಿದ್ಯಾಧರರನ್ನು ತಡೆದನು. ಸಮಗ್ರಸೇನೆಯೊಡನೆ ಆ ವಿದ್ಯಾಧರರನ್ನು ವಸುದೇವನು ಇದಿರಿಸಿದಾಗ ಜರಾಸಂಧನ ನೆರವಿಗೆ ಬರುವುದು ಬಿಟ್ಟು ಅವರು ವಸುದೇವನೊಡನೆ ಕಾದಿದರು.

ಇಕ್ಕೆಲದ ಸೇನೆಗಳಿಗೂ ಘೋರಯುದ್ಧವು ಆರಂಭವಾಗಿ ಜನಕ್ಕೆ ಪ್ರಲಯದ ಶಂಕೆ ಕವಿಯಿತು. ಮನಸ್ಸು ಭಯಗ್ರಸ್ತವಾಯಿತು. ಆ ಚತುರಂಗದ ಸೆಣಸಾಟದಲ್ಲಿ ಒಬ್ಬರು ಇನ್ನೊಬ್ಬರನ್ನು ವಧಿಸತೊಡಗಿದರು. ವಸುದೇವನೂ ಅವನ ಪುತ್ರರೂ ಪ್ರದ್ಯುಮ್ನ ಶಂಬರೂ ಅನೇಕ ವಿದ್ಯಾಧರರೂ ಶಸ್ತ್ರಜ್ವಾಲೆಗಳಿಂದ ಶತ್ರುರಾಜರನ್ನು ಭಸ್ಮಮಾಡುತ್ತಿದ್ದರು. ದಾವಾನಲದಂತೆ ಮುಂದೆ ನುಗ್ಗುತ್ತಿದ್ದರು.ಇದೇ ಸಂದರ್ಭದಲ್ಲಿ ದೇವತೆಗಳು ನಭದಲ್ಲಿ, ''ವಸುದೇವಪುತ್ರನಾದ ಕೃಷ್ಣನು ನವಮ ನಾರಾಯಣನಾಗಿದ್ದಾನೆ; ಅಲ್ಲದೆ ಚಕ್ರಧಾರಿಯಾಗಿ ಪ್ರತಿಶತ್ರು ಜರಾಸಂಧನನ್ನು ಅವನದೇ ಚಕ್ರದಿಂದ ಯುದ್ಧದಲ್ಲಿ ಕೊಂದುಹಾಕಿದನು'' ಎಂದು ಘೋಷಿಸಿ, ವಸುದೇವನ ರಥದ ಮೇಲೆ ರತ್ನವೃಷ್ಟಿಯನ್ನು ಕರೆದರು. ಆಗ ಶತ್ರುಪಕ್ಷದ ವಿದ್ಯಾಧರರು ದೇವತೆಗಳ ಆ ಘೋಷಣೆಯನ್ನು ಕೇಳಿ ಭಯಗ್ರಸ್ತರಾಗಿ ಎಲ್ಲೆಲ್ಲಿಂದಲೋ ಒಟ್ಟಾಗಿ ಬಂದು ವಸುದೇವನಿಗೆ ಶರಣಾದರು: ವಸುದೇವನ ಪುತ್ರರಿಗೂ ಪ್ರದ್ಯುಮ್ನಶಂಬರಿಗೂ ತಮ್ಮ ಅನೇಕ ಕನ್ಯೆಯರನ್ನಿತ್ತರು. ನಾವು ವಸುದೇವನ ಸೂಚನೆಯಂತೆ ಈ ಕುಶಲವಾರ್ತೆಯನ್ನು ತಿಳಿಸಲೆಂದು ನಿಮ್ಮಲ್ಲಿಗೆ ಬಂದಿದ್ದೇವೆ. ವಾಸುದೇವನ ಭಕ್ತಿಯಿಂದ ಪ್ರೇರಿತರಾದ ಅನೇಕ ವಿದ್ಯಾಧರರಾಜರು ನಾನಾಪ್ರಕಾರದ ಕಾಣಿಕೆಗಳನ್ನು ಕೊಂಡು ವಸುದೇವನೊಂದಿಗೆ ಇಲ್ಲಿಗೆ ಬರುತ್ತಿದ್ದಾರೆ.''

ಈ ರೀತಿ ವನವತೀ ದೇವಿ ಈ ಸಂಗತಿಯನ್ನು ಹೇಳಿ ಮುಗಿಸುವಷ್ಟರಲ್ಲಿ ವಿದ್ಯಾಧರ ವಿಮಾನಗಳಿಂದ ನಭವು ತುಂಬಿಹೋಯಿತು. ವಸುದೇವನ ಅನುಯಾಯಿಗಳಾದ ವಿದ್ಯಾ

ಧರರು ಇಳಿದುಬಂದು, ಬಲದೇವ ಕೃಷ್ಣರಿಗೆ ವಂದಿಸಿ ಕಾಣಿಕೆಗಳನ್ನೊಪ್ಪಿಸಿದರು. ಕೃಷ್ಣ ಬಲದೇವರು ತಂದೆಗೆ ಮಣಿದರು. ವಸುದೇವನೂ ಅವರನ್ನಪ್ಪಿ ಪ್ರಶಂಸಿಸಿದನು. ವಸುದೇನು ಸಮುದ್ರವಿಜಯಾದಿ ಹಿರಿಯರಿಗೂ, ಪ್ರದ್ಯುಮ್ನಾದಿಗಳು ತಮಗೆ ಹಿರಿಯರಾದೆಲ್ಲರಿಗೂ ನಮಸ್ಕರಿಸಿದರು. ಕೃಷ್ಣ ಬಲದೇವರಿಂದ ಸತ್ಕೃತರಾದ ವಿದ್ಯಾಧರರು ತಮ್ಮ ಜನ್ಮವು ಸಫಲವೆಂದು ಹರ್ಷಿಸಿದರು.

ಸಂಪೂರ್ಣ ಮನೋರಥರೂ ಹರ್ಷಭರಿತರೂ ಆದ ಬಲದೇವ ವಾಸುದೇವರು ಸಮಸ್ತ ಸೇನೆಯೊಂದಿಗೆ ಪಶ್ಚಿಮದಿಕ್ಕಿನತ್ತ ಪ್ರಸ್ಥಾನ ಮಾಡಿದರು. ಜರಾಸಂಧನನ್ನು ಕೊಂದಾದ ಮೇಲೆ ಯಾದವರು ಯಾವ ಸ್ಥಾನದಲ್ಲಿ ಆನಂದನೃತ್ಯವನ್ನು ಮಾಡಿದ್ದರೋ ಅದು ಆನಂದಪುರವೆಂಬ ಹೆಸರಿನಿಂದ ಪ್ರಸಿದ್ಧವೂ ಜಿನಾಲಯಗಳಿಂದ ವ್ಯಾಪ್ತವೂ ಆಯಿತು. ಆಮೇಲೆ ಹರಿಯು ಸರ್ವರತ್ನಗಳ ಸಹಿತವಾಗಿ ಚಕ್ರರತ್ನವನ್ನು ಪೂಜಿಸಿ, ದೇವಾಸುರಮನುಷ್ಯಸಹಿತವಾಗಿ ದಕ್ಷಿಣ ಭರತಕ್ಷೇತ್ರವನ್ನು ಗೆದ್ದನು. ಸುಮಾರು ೮ ವರ್ಷಗಳು ಪ್ರತಿದಿನವೂ ಇಷ್ಟ ವಸ್ತುಗಳು ಯಾರನ್ನು ಸೇವಿಸುತ್ತಿದ್ದವೋ ಗೆಲ್ಲಲರ್ಹರಾದ ಸಮಸ್ತರಾಜರನ್ನೂ ಯಾರು ಗೆದ್ದನೋ ಅಂಥ ಕೃಷ್ಣನು ಈಗ ಕೋಟಿಕಶಿಲೆಯ ಕಡೆಗೆ ನಡೆದನು. ಆ ಉತ್ಕೃಷ್ಟ ಶಿಲೆಯ ಮೇಲೆ ಅನೇಕ ಕೋಟಿ ಮುನಿಗಳು ಸಿದ್ಧಪದವಿಯನ್ನು ಪಡೆದುದರಿಂದಲೇ ಆ ಪವಿತ್ರಶಿಲೆಗೆ ಕೋಟಿಕ ಶಿಲೆಯೆಂದು ಹೆಸರಾಯಿತು. ಕೃಷ್ಣನು ಸರ್ವಪ್ರಥಮನಾಗಿ ಅದನ್ನು ಪೂಜಿಸಿ ಆಮೇಲೆ ತನ್ನೆರಡೂ ತೋಳುಗಳಿಂದ ಅದನ್ನು ೪ ಅಂಗುಲದಷ್ಟು ಮೇಲೆತ್ತಿದ್ದನು. ಅದು ಒಂದು ಯೋಜನ ಎತ್ತರವೂ ಉದ್ದವೂ ಅಗಲವೂ ಇದ್ದು ಅರ್ಧಭರತ ಕ್ಷೇತ್ರದ ಸಮಸ್ತ ದೇವರಿಂದ ಸುರಕ್ಷಿತವಾಗಿತ್ತು. ಅದನ್ನು ಈ ಮೊದಲಿನ ತ್ರಿಪೃಷ್ಠಾದಿಯಾದ ೮ ಮಂದಿ ನಾರಾಯಣರೂ ಅಷ್ಟಷ್ಟು ಮಟ್ಟಿಗೆ ಮೇಲೆತ್ತಿದ್ದರು ; ಈಗ ಕೃಷ್ಣನು ೪ ಅಂಗುಲದವರೆಗೆತ್ತಿದನು. ಯುಗಯುಗದಲ್ಲೂ ಕಾಲಭೇದದಿಂದಾಗಿ ಪ್ರಧಾನಪುರುಷರು ಮೊದಲುಗೊಂಡು ಎಲ್ಲ ಶಕ್ತರಿಗೂ ಶಕ್ತಿಯು ಬೇರೆ ಬೇರೆಯಾಗುತ್ತಲೇ ಬಂದಿದೆ. ಹಾಗೆ ಶಿಲೆಯೆತ್ತಿದ ಆತನ ಶಕ್ತಿಯನ್ನು ನೋಡಿ, ಸಮಸ್ತಸೇನೆಯೂ ಕೃಷ್ಣನು ಮಹತ್ತಾದ ದೇಹಬಲವುಳ್ಳವನೆಂದರಿಯಿತು. ಅಮೇಲೆ ಕೃಷ್ಣನು ಬಾಂಧವರೊಂದಿಗೆ ದ್ವಾರಿಕೆಗೆ ತೆರಳಿದನು. ಹಿರಿಯರು ಹರಸಿ ಅಭಿನಂದಿಸಿದರು. ನಗರಪ್ರವೇಶವಾಯಿತು. ಜತೆಗೆ ಬಂದಿದ್ದ ಭೂಚರ ಖೇಚರರಿಗೆಲ್ಲಾ ಭೋಗ್ಯವಸ್ತುಗಳಿತ್ತು ಶ್ರೇಷ್ಠಭವನಗಳಲ್ಲಿರಿಸಲಾಯಿತು.

ಅಮೇಲೆ ಎಲ್ಲಾ ಭೂಚರ ಖೇಚರರಾಜರೂ ಮಹಾಪ್ರಸಿದ್ಧರಾದ ಬಲದೇವ ಕೃಷ್ಣರಿಗೆ ಅರ್ಧಭರತಕ್ಷೇತ್ರದ ಸ್ವಾಮಿಗಳಾಗಿ ಅಭಿಷೇಕಮಾಡಿದರು. ಆಮೇಲೆ ಕೃಷ್ಣನು ಜರಾಸಂಧನ ದ್ವಿತೀಯ ಪುತ್ರ ಸಹದೇವನನ್ನು ರಾಜಗೃಹದ ರಾಜನನ್ನಾಗಿ ಮಾಡಿದನು. ಅಲ್ಲದೆ ಮಗಧ ದೇಶದ ಕಾಲುಭಾಗವನ್ನು ಅವನಿಗೆ ಪ್ರಧಾನಮಾಡಿದನು. ಉಗ್ರಸೇನನ ಮಗ ದ್ವಾರನಿಗೆ ಮಥುರಾಪುರಿಯನ್ನಿತ್ತನು. ಮಹಾನೇಮಿಗೆ ಶೌರ್ಯಪುರವಿತ್ತನು. ಪಾಂಡವರಿಗೆ ಪ್ರೀತಿಪೂರ್ವಕವಾಗಿ ಅವರಿಗೆ ಪ್ರಿಯವಾದ ಹಸ್ತಿನಾಪುರವಿತ್ತನು. ರುಧಿರ

ರಾಜನ ಮೊಮ್ಮಗ ರುಕ್ಮನಾಭನಿಗೆ ಕೋಶಲ ದೇಶವಿತ್ತನು. ಹೀಗೆಯೇ ಚಕ್ರಪಾಣಿ ಕೃಷ್ಣನು ಬಂದ ಖೇಚರ ಭೂಚರ ರಾಜರಿಗೆಲ್ಲ ಯಥೋಚಿತ ಸ್ಥಾನಗಳನ್ನಿತ್ತನು. ಆಮೇಲೆ ಕೃಷ್ಣನಿಂದ ಬೀಳ್ಕೊಂಡು ಪಾಂಡವಾದಿಗಳೆಲ್ಲ ಯಥಾಸ್ಥಾನಗಳಿಗೆ ಹೋದರು. ಯಾದವರು ದ್ವಾರಿಕೆಯಲ್ಲಿ ಸುಖದಿಂದಿರುತ್ತಿದ್ದರು.

ಸುದರ್ಶನ ಚಕ್ರ, ಶಾರ್ಙ್ಗಧನು, ಸೌನಂದಕ ಖಡ್ಗ, ಕೌಮುದೀಗದೆ, ಅಮೋಘ ಮೂಲಾ ಶಕ್ತಿ, ಪಾಂಚಜನ್ಯ ಶಂಖ, ಕೌಸ್ತುಭ ಮಣಿ—ಇವು ಕೃಷ್ಣನ ೭ ರತ್ನಗಳು. ಬಲದೇವನಿಗೆ ಅಪರಾಜಿತವೆಂಬ ಹಲ, ದಿವ್ಯವಾದ ಗದೆ, ಮುಸಲ, ಶಕ್ತಿ, ಮಾಲೆ—ಇವು ೫ ರತ್ನಗಳು. ೧೬ ಸಹಸ್ರ ಪ್ರಮುಖ ರಾಜರು ಮತ್ತು ೮ ಸಹಸ್ರ ಭಕ್ತರು, ಗಣಬದ್ಧ ದೇವರೂ ತನ್ನನ್ನು ಸೇವಿಸುತ್ತಿರಲು ಕೃಷ್ಣನು ಸುಖದಲ್ಲಿದ್ದನು. ಅವನಿಗೆ ರತಿಕಾಲದಲ್ಲಿ ದೇವಾಂಗನೆಯರಿಗೆ ಸಮಾನರಾದ ಹಾವಭಾವಗಳಿಂದ ಮನಸೆಳೆಯುವ ೧೬ ಸಹಸ್ರ ಪತ್ನಿಯರು ಸೇವೆಗಿದ್ದರು. ಹಾಗೆಯೇ ಬಲದೇವನಿಗೆ ೮ ಸಹಸ್ರ ಉತ್ತಮವನಿತೆಯರು ಬಲದೇವನನ್ನು ಸುಖಪಡಿಸುತ್ತಿದ್ದರು. ಈಯಿಬ್ಬರೂ ತಂತಮ್ಮ ಪತ್ನಿಯರೊಂದಿಗೆ ಸುಖದಲ್ಲಿದ್ದರು.

೫೪. ದ್ರೌಪದೀಹರಣಾಹರಣ ದಕ್ಷಿಣಮಥುರಾನಿವೇಶ ವರ್ಣನ

ಈಗ ಶ್ರೇಣಿಕ ರಾಜನು ಗೌತಮರನ್ನು ಪಾಂಡವರ ವಿಚಾರವಾಗಿ ಪ್ರಶ್ನಿಸುತ್ತಲೂ ಅವರು ಅದನ್ನು ಈ ರೀತಿ ನಿರೂಪಿಸತೊಡಗಿದರು :

"ಪಾಂಡವರು ಹಸ್ತಿನಪುರದಲ್ಲಿ ಯಥಾಕ್ರಮದಲ್ಲಿ ಇರತೊಡಗಿದಾಗ ಕುರುದೇಶನವರು ತಮ್ಮ ಮುನ್ನಿನ ಸ್ವಾಮಿಗಳನ್ನು ಪಡೆದು ನಲಿದರು. ಪಾಂಡವರ ನೆಮ್ಮದಿಯ ಸುರಾಜ್ಯವು ನಡೆಯತೊಡಗಿದಾಗ ಸಕಲ ವರ್ಣಾಶ್ರಮದವರೂ ದುರ್ಯೋಧನಾದಿಗಳನ್ನು ಪೂರ್ತಿಯಾಗಿ ಮರೆತುಹೋದರು.

ಒಂದು ದಿನ ಸದಾ ಸಂಚಾರಿಯೂ ಕಲಹಪ್ರಿಯನೂ ಆದ ನಾರದನು ಪಾಂಡವರ ಭವನಕ್ಕೆ ಬಂದನು. ಪಾಂಡವರು ಆತನನ್ನು ಅತ್ಯಾದರದಿಂದ ನೋಡಿಕೊಂಡರು. ಆದರೆ ನಾರದನು ದ್ರೌಪದಿಯ ಭವನಕ್ಕೆ ಬಂದಾಗ ಆಕೆ ಅಲಂಕಾರ ಮಾಡಿಕೊಳ್ಳುವುದರಲ್ಲಿ ಉತ್ಸುಕಳಾಗಿದ್ದುದರಿಂದ, ನಾರದನು ಬಂದುದೂ ಹೋದುದೂ ಆಕೆಗೆ ಗೊತ್ತಾಗಲಿಲ್ಲ. ಅವನು ಅವಳ ವರ್ತನೆಯಿಂದ ಕ್ರೋಧೋದ್ದೀಪ್ತನಾದನು. ದ್ರೌಪದಿಗೆ ದುಃಖವುಂಟು ಮಾಡಲು ದೃಢನಿಶ್ಚಯ ಮಾಡಿಕೊಂಡು ಅದೇ ನಿಶ್ಚಯದಿಂದ ಪೂರ್ವಧಾತಕೀಖಂಡದ ಭರತಕ್ಷೇತ್ರದ ಕಡೆಗೆ ಆಕಾಶಮಾರ್ಗವಾಗಿ ಹೋದನು. ಅಂಗದೇಶದ ಅಮರಕಂಕಾಪುರಿಯನ್ನು ತಲಪಿ ಅಲ್ಲಿ ಸ್ತ್ರೀಲೋಲನಾದ ಪದ್ಮನಾಭನೆಂಬರಸನನ್ನು ನೋಡಿದನು. ಪದ್ಮನಾಭನು ನಾರದನನ್ನು ಆತ್ಮೀಯನಾಗಿ ಭಾವಿಸಿ ತನ್ನ ಅಂತಃಪುರವನ್ನು ತೋರಿಸಿದನು. ಅಲ್ಲದೆ "ಇಂಥ ಸ್ತ್ರೀರೂಪವನ್ನು ನೀವು ಮತ್ತೆಲ್ಲಾದರೂ ಕಂಡಿದ್ದೀರಾ?" ಎಂದು ಪ್ರಶ್ನಿಸಿದನು. ಆ ಪ್ರಶ್ನೆಯು ನಾರದನಿಗೆ ಪಾಯಸಕ್ಕೆ ತುಪ್ಪ ಸೇರಿದಂತೆ ಅನುಕೂಲವಾಗಿ

ತೋರಿ, ಅವನು ದ್ರೌಪದಿಯ ಲೋಕೋತ್ತರ ಸೌಂದರ್ಯವನ್ನು ವರ್ಣಿಸಿ ಪದ್ಮನಾಭನಿಗೆ ದ್ರೌಪದಿಯ ಹುಚ್ಚು ಹಿಡಿಯುವ ಹಾಗೆ ಮಾಡಿಬಿಟ್ಟನು. ಆಮೇಲೆ ದ್ರೌಪದಿಯ ನಿವಾಸದ ದ್ವೀಪ, ಕ್ಷೇತ್ರ, ನಗರ ಮತ್ತು ಭವನ ಇವುಗಳ ನೆಲೆಯನ್ನು ತಿಳಿಸಿ, ತಾನು ಎಲ್ಲಿಗೋ ಹೊರಟುಹೋದನು.

ಪದ್ಮನಾಭನು ದ್ರೌಪದಿಯ ಪ್ರಾಪ್ತಿಯ ಇಚ್ಛೆಯಿಂದ ತೀವ್ರವಾದ ತಪಸ್ಸು ಕೈಕೊಂಡು ಪಾತಾಲಲೋಕದ ಸಂಗಮಕದೇವನನ್ನು ಆರಾಧಿಸಿದನು. ಹೀಗೆ ಆರಾಧಿತನಾದ ದೇವನು ರಾತ್ರಿಯ ವೇಳೆ ನಿದ್ರಿಸುತ್ತಿದ್ದ ದ್ರೌಪದಿಯನ್ನು ಪದ್ಮನಾಭನ ನಗರಕ್ಕೆ ಎತ್ತಿ ತಂದುಬಿಟ್ಟನು. ಹಾಗೆ ತಂದು ಆಕೆಯನ್ನು ಭವನೋದ್ಯಾನದಲ್ಲಿರಿಸಿ ಪದ್ಮನಾಭನಿಗೆ ಅದರ ಸೂಚನೆಯಿತ್ತನು. ದೊರೆಯು ಅಲ್ಲಿಗೆ ಹೋಗಿ ಸಾಕ್ಷಾತ್ ಸುರಾಂಗನೆಯಂತಿದ್ದ ದ್ರೌಪದಿಯನ್ನು ನೋಡಿದನು. ದ್ರೌಪದಿಯಾದರೋ ತನ್ನ ಸರ್ವತೋಭದ್ರ ಶಯ್ಯೆಯಿಂದೆಚ್ಚತ್ತು, ನಿದ್ದೆ ತಿಳಿದರೂ ಇದು ಕನಸು ಎಂದುಕೊಳ್ಳುತ್ತ, ಮತ್ತೆ ಮತ್ತೆ ಮಲಗುತ್ತಿದ್ದಳು. ಹೀಗೆ ಬಾರಿಬಾರಿಗೂ ಕಣ್ಣು ಮುಚ್ಚುತ್ತಿದ್ದ ಆಕೆಯ ಆಶಯ ತಿಳಿದು ಪದ್ಮನಾಭನು ಮೆಲ್ಲಗೆ ಸಮೀಪಿಸಿ ಹೋಗಿ ಪ್ರಿಯವಾಕ್ಯಗಳನ್ನು ಹೀಗೆ ನುಡಿಯತೊಡಗಿದನು. "ಎಲೈ ಆಯತಾಕ್ಷಿ, ಇತ್ತ ನೋಡು. ಇದು ಸ್ವಪ್ನವಲ್ಲ. ಇದು ಧಾತಕೀಖಂಡದ್ವೀಪ: ನಾನು ಅರಸಾದ ಪದ್ಮನಾಭ. ನಾರದನು ನನಗೆ ನಿನ್ನ ಮನೋಹರವಾದ ರೂಪವನ್ನು ಬಣ್ಣಿಸಿದನು. ನನ್ನಿಂದ ಆರಾಧಿತನಾದ ದೇವನು ನನಗಾಗಿ ನಿನ್ನನ್ನು ಇಲ್ಲಿಗೆ ಅಪಹರಿಸಿ ತಂದಿದ್ದಾನೆ"—ಎಂದನು.

ಇದನ್ನು ಕೇಳುತ್ತಲೂ ದ್ರೌಪದಿ ಗಾಬರಿಗೊಂಡಳು. "ಇದೇನಾಯಿತು; ಅಯ್ಯೋ, ನನಗೆ ಇಂಥ ದುರಂತದುಃಖವು ಬಂದಿತಲ್ಲಾ!" ಎಂದುಕೊಂಡಳು. "ಎಲ್ಲಿಯವರೆಗೆ ನನಗೆ ಅರ್ಜುನನ ದರ್ಶನವಾಗದೋ, ಅಲ್ಲಿಯವರೆಗೆ ನಾನು ಆಹಾರವನ್ನು ಸ್ವೀಕರಿಸುವುದಿಲ್ಲ" ಎಂದು ನಿಶ್ಚಯಿಸಿ, ಅರ್ಜುನನೊಬ್ಬನೇ ಬಿಚ್ಚುವಂತೆ ವೇಣೀಬಂಧವನ್ನು ಮಾಡಿಕೊಂಡಳು. ಆಮೇಲೆ ಆ ಶೀಲವತಿ ದ್ರೌಪದಿಯು ಕಾಮಪೀಡಿತನಾದ ಪದ್ಮನಾಭನಿಗೆ "ಬಲದೇವಕೃಷ್ಣರು ನನ್ನ ಸೋದರರು; ಧನುರ್ಧರನಾದ ಪಾರ್ಥನು ನನ್ನ ಪತಿ. ಪತಿಯೂ ಅವನಿಗೆ ಜ್ಯೇಷ್ಠನಾದ ಭೀಮನೂ ಮಹಾವೀರರು; ಪತಿಗೆ ಅನುಜರಾದ ನಕುಲಸಹದೇವರು ಯಮೋಪಮರು. ಜಲಸ್ಥಳಗಳಲ್ಲಿ ಅವರುಗಳನ್ನು ಯಾರೂ ತಡೆಯುವುದು ಶಕ್ಯವಲ್ಲ. ಮನೋರಥಸಮ ಶೀಘ್ರಗಾಮಿಯಾದ ಅವರ ರಥಗಳು ಸಮಸ್ತ ಪೃಥ್ವಿಯಲ್ಲೂ ಸುತ್ತುತ್ತವೆ. ಆದ್ದರಿಂದ ಎಲೈ ರಾಜ, ನಿನ್ನ ಬಂಧುಬಾಂಧವರೊಡನೆ ನಿನಗೆ ಇವರಿಂದ ಒಳ್ಳೆಯದಾಗಬೇಕೆಂದಿದ್ದರೆ, ನನ್ನನ್ನು ಸರ್ಪಿಣಿಯ ಸಮನಾಗಿ ಭಾವಿಸಿ, ಕೂಡಲೇ ಹಿಂದಕ್ಕೆ ಕಳಿಸಿಬಿಡು" ಎಂದಳು. ಆದರೆ ಪದ್ಮನಾಭನು ತಾನು ಹಿಡಿದ ಹಠ ಬಿಡಲಿಲ್ಲ. ಆಗ ಆ ಪರಿಸ್ಥಿತಿಗೆ ಅನುಸಾರವಾಗಿ ಸಮಯೋಚಿತವಾಗಿ ಚಿಂತಿಸಿ, ದ್ರೌಪದಿ ದೃಢವಾಗಿ "ಹೇ ರಾಜಾ, ನನ್ನ ಆತ್ಮೀಯರಾದ ಜನರು ಒಂದು ತಿಂಗಳೊಳಗೆ ಇಲ್ಲಿ ಬರದಿದ್ದ ಪಕ್ಷಕ್ಕೆ, ನಿನ್ನ ಇಚ್ಛೆಯೇನಿದೆಯೋ ಅದನ್ನು ನನ್ನದಾಗಿ ಮಾಡು"—

ಎಂದಳು. ಆಗ ಅತನು 'ತಥಾಸ್ತು' ಎಂದು ನುಡಿದು, ತನ್ನ ಪತ್ನಿಯರೊಡನೆ ಅವಳಿಗೆ ಅನುಕೂಲವಾಗಿ ನಡೆಯುತ್ತ, ನೂರಾರು ಪ್ರಿಯವಸ್ತುಗಳಿಂದ ಅವಳನ್ನು ಪ್ರಲೋಭನಗೊಳಿಸುತ್ತ ಇರತೊಡಗಿದನು. ದ್ರೌಪದಿ ಭಯವುಳಿದು ಸುಮ್ಮನಿದ್ದು ಒಂದೇ ಸಮನೆ ಕಣ್ಣೀರ್ಗರೆಯುತ್ತ, ಆಹಾರವಿಹಾರವನ್ನು ಬಿಟ್ಟು, ಪತಿಯ ಹಾದಿ ಕಾಯುತ್ತಿದ್ದಳು.

ಇತ್ತ ದ್ರೌಪದಿ ಹಠಾತ್ತನೆ ಕಾಣದಾಗುತ್ತಲೂ, ಪಾಂಡವರು ಏನು ಮಾಡುವುದಕ್ಕೂ ತೋಚದೆ ಗಾಬರಿಗೊಂಡರು. ಅವರು ನಿರುಪಾಯರಾದಾಗ ಕೃಷ್ಣನಲ್ಲಿಗೆ ಹೋಗಿ ಎಲ್ಲಾ ಸಂಗತಿಯನ್ನೂ ತಿಳಿಸಿದರು. ಅದನ್ನು ಕೇಳಿ ಯಾದವರೂ ಕೃಷ್ಣನೂ ತುಂಬ ನೊಂದರು. ಆಗಲೇ ಇಡೀ ಭರತಕ್ಷೇತ್ರದಲ್ಲಿ ಆ ಸುದ್ದಿಯನ್ನು ಪ್ರಚುರಪಡಿಸಿದರು. ಆದರೆ ಎಲ್ಲಿಯೂ ಪತ್ತೆಯಾಗದಿರಲು, ಯಾರೋ ಕ್ಷುದ್ರಸ್ವಭಾವದ ವ್ಯಕ್ತಿ ಈಕೆಯನ್ನು ಅಪಹರಿಸಿ ಅನ್ಯಕ್ಷೇತ್ರಕ್ಕೆ ಕೊಂಡೊಯ್ದಿರಬೇಕು ಎಂದು ಚಿಂತಿಸಿದರು. ಆ ಸುದ್ದಿ ಸಂಗ್ರಹದಲ್ಲಿಯೇ ಎಲ್ಲ ಯಾದವರೂ ತತ್ಪರರಾದರು.

ಒಂದು ದಿನ ಕೃಷ್ಣನು ಸಭಾಮಂಟಪದಲ್ಲಿರುವಾಗ ನಾರದನ ಸವಾರಿ ಚಿತ್ತೈಸಿತು. ಯಾದವರು ಅವನನ್ನು ಸತ್ಕರಿಸಿದರು. ಆಮೇಲೆ ಆತನು ಪ್ರಿಯಸಮಾಚಾರವನ್ನು ತಿಳಿಸುತ್ತ ತಾನು ದ್ರೌಪದಿಯನ್ನು ಧಾತಕೀಖಂಡ ದ್ವೀಪದಲ್ಲಿಯ ಅಮರಕಂಕಾಪುರಿಯಲ್ಲಿ ಪದ್ಮನಾಭರಾಜನ ಮನೆಯಲ್ಲಿ ಕಂಡೆನೆಂದು ತಿಳಿಸಿದನು. ಅಲ್ಲದೆ ಆಕೆಗೆ ಶರೀರವು ಕಪ್ಪಾಗಿ ಕೃಶವಾಗಿ ಹೋಗಿದೆಯೆಂದೂ, ಸದಾ ಕಂಬನಿಯನ್ನು ಸುರಿಸುತ್ತಿರುವಳೆಂದೂ, ಪದ್ಮನಾಭನ ಅಂತಃಪುರಸ್ತ್ರೀಯರು ಆಕೆಯನ್ನು ಅತ್ಯಾದರದಿಂದ ನೋಡಿಕೊಳ್ಳುತ್ತಿರುವರೆಂದೂ ಹೇಳಿದನು. ಆಕೆಗೆ ತನ್ನ ಶೀಲವ್ರತವೇ ಈಗ ಎಲ್ಲಕ್ಕಿಂತ ಮಿಗಿಲಾದ ಭರವಸೆಯೆಂದೂ, ಒಂದೇ ಸಮನೆ ಆಕೆ ನಿಟ್ಟುಸಿರು ಬಿಡುತ್ತಿರುವಳೆಂದೂ ನುಡಿದನು. "ನಿಮ್ಮಂಥ ಸೋದರರು ಇರುತ್ತ ಆಕೆಗೆ ಶತ್ರುಗೃಹದಲ್ಲಿರುವ ಈ ಪಾಡೇಕೆ?" ಎಂದು ಕೇಳಿದನು. ಹೀಗೆ ದ್ರೌಪದಿಯ ಸುದ್ದಿ ತಿಳಿಯುತ್ತಲೂ ಕೃಷ್ಣಾದಿಗಳು ಸಂತೋಷಿಸಿದರು. ಅಪಕಾರದೊಟ್ಟಿಗೇ ಉಪಕಾರಮಾಡುವ ನಾರದನನ್ನು ಪ್ರಶಂಸಿಸಿದರು. "ಆ ದುಷ್ಟನು ದ್ರೌಪದಿಯನ್ನು ಕದ್ದುಕೊಂಡು ಎಲ್ಲಿಗೆ ತಾನೆ ಹೋಗುತ್ತಾನೆ? ಸಾಯಲು ಬಯಸುವ ಆ ದುರಾಚಾರಿಯನ್ನು ಈಗಲೇ ಯಮನಲ್ಲಿಗೆ ಅಟ್ಟುತ್ತೇನೆ"—ಎನ್ನುತ್ತ ಕೆರಳಿ ಕೃಷ್ಣನು ದ್ರೌಪದಿಯನ್ನು ಬಿಡಿಸಿತರಲು ಉದ್ಯತನಾದನು.

ರಥವೇರಿ ದಕ್ಷಿಣಸಮುದ್ರತಟವನ್ನು ತಲುಪಿದನು. ಅಲ್ಲಿಗೆ ಹೋಗಿ ಧಾತಕೀಖಂಡ ದ್ವೀಪವನ್ನು ಸೇರುವ ಇಚ್ಛೆಯಿಂದ ಪಾಂಡವರೊಡನೆ ನಿಯಮಸ್ಥಿತನಾಗಿ ಲವಣಸಮುದ್ರದ ಅಧಿಷ್ಠಾತೃದೇವನನ್ನು ಆರಾಧಿಸಿದನು. ಆ ದೇವನು ಪಾಂಡವರೊಡನೆ ಕೃಷ್ಣನನ್ನು ಆರು ರಥಗಳಲ್ಲಿ ಕೊಂಡೊಯ್ದನು; ಹೀಗೆಯೇ ಆ ಸಮುದ್ರವನ್ನು ದಾಟಿ ಧಾತಕೀಖಂಡ ದ್ವೀಪದ ಭರತಕ್ಷೇತ್ರವನ್ನು ತಲಪಿದರು. ಅಲ್ಲಿಗೆ ಹೋಗಿ ಇವರು ಅಮರಕಂಕಾಪುರಿಯ ಬಾಹ್ಯೋದ್ಯಾನದಲ್ಲಿ ತಂಗಿದರು. ಪದ್ಮನಾಭನಿಂದ ನಿಯೋಜಿತರಾದ ಜನರು ಕೃಷ್ಣಾದಿಗಳು ಬಂದ ವಾರ್ತೆಯನ್ನು ಅವನಿಗೆ ಮುಟ್ಟಿಸಿದರು. ಸುದ್ದಿ

ತಿಳಿಯುತ್ತಲೇ ಆತನ ಚತುರಂಗ ಬಲವು ನಗರದಿಂದ ಹೊರಗೆ ಬಂತು. ಆದರೆ ಪಾಂಡವರು ಯುದ್ಧದಲ್ಲಿ ಆ ಸೈನ್ಯವನ್ನು ಹೊಡೆದಟ್ಟಲು, ಓಡಿಹೋದ ಸೇನೆ ನಗರದೊಳಗೆ ಸೇರಿಕೊಂಡಿತು. ಪದ್ಮನಾಭನು ನಗರದ್ವಾರವನ್ನು ಮುಚ್ಚಿಸಿ ಒಳಗಿದ್ದುಬಿಟ್ಟನು. ನಗರದ್ವಾರವನ್ನು ದಾಟಿ ಹೋಗುವುದು ಪಾಂಡವರಿಗೆ ಸಾಧ್ಯವಿರಲಿಲ್ಲವಾದ್ದರಿಂದ ಕೃಷ್ಣನು ತಾನೇ ಪದಾಘಾತಗಳಿಂದ ಬಾಗಿಲನ್ನು ಮುರಿಯಲು ಮೊದಲಿಟ್ಟನು. ವಜ್ರಘಾತಸಮನಾದ ಆ ಪದಾಘಾತಗಳಿಂದ ನಗರದ ಒಳಹೊರಗೆಲ್ಲ ಅದಿರಿ ಹೋಯಿತು. ಪ್ರಾಕಾರ ಗೋಪುರಗಳೆಲ್ಲಾ ಮುರಿದು ಉರುಳಿದುವು. ಮಹಾಸೌಧಗಳೂ ಶಾಲೆಗಳೂ ಕೆಡೆದುವು. ಮದ್ದಾನೆಗಳೂ ಕುದುರೆಗಳೂ ಅತ್ತಿತ್ತ ಓಡತೊಡಗಿದುವು. ನಗರದಲ್ಲಿ ಎಲ್ಲೆಲ್ಲಿಯೂ ಹಾಹಾಕಾರವಾಯಿತು. ಜನರು ಗಾಬರಿಯಿಂದ ಹೊರಗೆ ನುಗ್ಗಿ ಬಂದರು.

ದ್ರೋಹಿ ಪದ್ಮನಾಭನು ಈಗ ನಿರುಪಾಯನಾಗಿ ಭಯಪಟ್ಟು ಗಾಬರಿಗೊಂಡು ಪೌರರನ್ನೂ ಅಂತಃಪುರದವರನ್ನೂ ಒಡಗೊಂಡು ಕೂಡಲೇ ದ್ರೌಪದಿಗೆ ಶರಣಾದನು. ಆಕೆಯನ್ನು ಕುರಿತು ವಿನಯದಿಂದ "ದೇವಿ, ನೀನು ದೇವತೆಗೆ ಸಮಾನಳು, ಸೌಮ್ಯಳು, ಪತಿವ್ರತೆ, ಪಾಪಿಯಾದ ನನ್ನನ್ನು ಕ್ಷಮಿಸು, ಕ್ಷಮಿಸು ; ಅಭಯದಾನವನ್ನು ನೀಡು" ಎಂದು ಕೇಳಿಕೊಂಡನು. ದ್ರೌಪದಿ ದಯಾವತಿ ; ಆದ್ದರಿಂದ ತನಗೆ ಶರಣಾದ ಆತನನ್ನು ಕುರಿತು "ನೀನು ಸ್ತ್ರೀವೇಷದಲ್ಲಿ ಚಕ್ರವರ್ತಿ ಕೃಷ್ಣನಿಗೆ ಶರಣಾಗು ; ಏಕೆಂದರೆ ತನಗೆ ಮಣಿದ ಅಪರಾಧಿಗಳ ಮೇಲೆ ಸಜ್ಜನರು ಸಾಮಾನ್ಯವಾಗಿ ದಯೆ ತೋರುತ್ತಾರೆ. ಆದರೆ ಭೀರುಗಳಾದವರಿಗೆ ಅಥವಾ ಭೀರುಗಳ ವೇಷದಲ್ಲಿರುವವರಿಗೆ ಅಂಥವರು ವಿಶೇಷವಾಗಿ ದಯೆತೋರುತ್ತಾರೆ" ಎಂದಳು. ಇದನ್ನು ಕೇಳಿ ಪದ್ಮನಾಭನು ಸ್ತ್ರೀವೇಷಧರಿಸಿ ತನ್ನ ಪತ್ನಿಯರೊಡಗೊಂಡು ದ್ರೌಪದಿಯನ್ನು ಮುಂದಿಟ್ಟುಕೊಂಡು ಕೃಷ್ಣನಿಗೆ ಶರಣಾದನು. ಕೃಷ್ಣನು ಶರಣಾಗತರಕ್ಷಕನಾದ್ದರಿಂದ ಅವನಿಗೆ ಅಭಯನೀಡಿ ಅವನನ್ನು ಸ್ವಸ್ಥಾನಕ್ಕೆ ಕಳಿಸಿದನು. ದ್ರೌಪದಿ ಕುಶಲಪ್ರಶ್ನ ಪೂರ್ವಕವಾಗಿ ಕೃಷ್ಣನ ಪಾದಗಳಿಗೆ ಮಣಿದು ಪಾಂಡವರೊಡನೆ ಉಚಿತವಿನಯದಿಂದ ನಡೆದುಕೊಂಡಳು. ಅರ್ಜುನನು ವಿರಹಪೀಡಿತೆ ವಲ್ಲಭೆಯನ್ನು ಅಪ್ಪಿಕೊಂಡು ತನ್ನ ಕೈಗಳಿಂದಲೇ ಅವಳ ವೇಣೀಬಂಧವನ್ನು ಬಿಚ್ಚಿದನು. ದ್ರೌಪದಿ ಪಾಂಡವರ ಜತೆಗೆ ಮಿಂದುಂಡು ಎಲ್ಲರಿಗೂ ಹೃತ್ಪೂರ್ವಕವಾಗಿ ಆತಿಥ್ಯಮಾಡಿದಳು. ಅವರೆದುರು ತನ್ನ ದುಃಖವನ್ನು ತೋಡಿಕೊಂಡಳು. ಕಣ್ಣೀರಿನೊಂದಿಗೆ ತನ್ನ ದುಃಖವನ್ನು ಅಲ್ಲಿಗೇ ಮರೆತಳು.

ಕೃಷ್ಣನು ದ್ರೌಪದಿಯನ್ನು ತನ್ನ ರಥದಲ್ಲಿ ಕೂರಿಸಿಕೊಂಡು ಸಮುದ್ರತಟಕ್ಕೆ ಬಂದು ತನ್ನ ಶಂಖವನ್ನು ಪೂರೈಸಲು ಅದರ ಧ್ವನಿ ದಿಗಂತವ್ಯಾಪ್ತವಾಯಿತು. ಆಗ ಅಲ್ಲಿ ಚಂಪಾನಗರಿಯ ಹೊರವಲಯದಲ್ಲಿದ್ದ ಜಿನೇಂದ್ರನ ವಂದನೆಗೆಂದು ಬಂದಿದ್ದ ಧಾತಕೀಖಂಡದ ವಾಸುದೇವನಾದ ಕಪಿಲನು ಕ್ಷಿತಿಕಂಪನಕಾರಿಯಾದ ಆ ಶಂಖಧ್ವನಿಯನ್ನು ಕೇಳಿ ಜಿನೇಂದ್ರನನ್ನು "ಹೇ ಸ್ವಾಮಿ, ನನಗೆ ಸಮಶಕ್ತಿಯಿರುವ ಯಾವಾತನು ಈ ಶಂಖವನ್ನು ಪೂರೈಸಿದ್ದಾನೆ ? ನನ್ನಿಂದ ಅಧಿಷ್ಠಿತವಾದ ಈ ಭರತಕ್ಷೇತ್ರದಲ್ಲಿ ನನ್ನಂಥವನು ಇನ್ನೊಬ್ಬನಿಲ್ಲ"

ಎಂದನು. ಜಿನೇಂದ್ರನು ಯಥಾರ್ಥ ಸಂಗತಿಯೇನೆಂದು ತಿಳಿಸುತ್ತಲೂ ಆ ಕಪಿಲನು ಕೃಷ್ಣನನ್ನು ನೋಡಲೆಂದು ಹೊರಡಲನುವಾದನು. ಅಗ ಜಿನೇಂದ್ರನು "ರಾಜಾ, ಲೋಕತ್ರಯದಲ್ಲಿ ಎಂದೂ ಚಕ್ರಿ ಚಕ್ರಿಗಳಿಗೆ, ಜಿನ ಜಿನರಿಗೆ, ಬಲದೇವ ಬಲದೇವರಿಗೆ, ವಾಸುದೇವ ವಾಸುದೇವರಿಗೆ, ಪ್ರತಿವಾಸುದೇವ ಪ್ರತಿವಾಸುದೇವರಿಗೆ ಪರಸ್ಪರ ಭೇಟಿಯೆಂಬುದು ನಡೆಯುವುದಿಲ್ಲ. ನೀನು ಹೊರಡುವುದಾದರೆ ಆತನಿಗೂ ನಿನಗೂ ಚಿಹ್ನಮಾತ್ರದಿಂದ ಭೇಟಿಯಾಗುವುದು ಸಾಧ್ಯ. ಪರಸ್ಪರರ ಶಂಖಧ್ವನಿ ಕೇಳುವುದು, ರಥಧ್ವಜವನ್ನು ನೋಡುವುದು ಈ ಚಿಹ್ನೆಗಳಿಂದಲೇ ನಿನ್ನ ಮತ್ತು ಆತನ ಸಾಕ್ಷಾತ್ಕಾರವಾಗುತ್ತದೆ" ಎಂದನು. ಆಮೇಲೆ ಕಪಿಲ ವಾಸುದೇವನು ಶ್ರೀಕೃಷ್ಣನತ್ತ ಲಕ್ಷ್ಯವಿಟ್ಟು ಬಂದನು. ಜಿನನು ತಿಳಿಸಿದ್ದಂತೆ ಅವನಿಗೆ ದೂರದಿಂದಲೇ ಸಮುದ್ರತಟದಲ್ಲಿ ಕೃಷ್ಣನ ಸಾಕ್ಷಾತ್ಕಾರವಾಯಿತು. ಕಪಿಲನು ಚಂಪಾನಗರಕ್ಕೆ ಮರಳಿದನು. ಅನುಚಿತ ಕಾರ್ಯಾಸಕ್ತನಾಗಿದ್ದ ಅಮರಕಂಕಾಪುರಿಯೊಡೆಯ ಪದ್ಮನಾಭನನ್ನು ಕೋಪದಿಂದ ಚೆನ್ನಾಗಿ ಛೀಮಾರಿ ಮಾಡಿದನು.

ಕೃಷ್ಣನೂ ಪಾಂಡವರೂ ಮುನ್ನಿನಂತೆಯೇ ಮಹಾಸಮುದ್ರವನ್ನು ಕೂಡಲೇ ದಾಟಿ ಈಚೆಯ ದಡಕ್ಕೆ ಬಂದುಸೇರಿದರು. ಅಲ್ಲಿ ಕೃಷ್ಣನು ವಿಶ್ರಮಿಸತೊಡಗಿದನು. ಪಾಂಡವರು ಮುಂದುವರಿದರು. ಅವರು ನೌಕೆಯಲ್ಲಿ ಗಂಗೆಯನ್ನುತ್ತರಿಸಿ ದಕ್ಷಿಣತಟಕ್ಕೆ ತಲುಪಿ ಅಲ್ಲಿ ತಂಗಿದರು. ಕ್ರೀಡಾಶೀಲನಾದ ಭೀಮನು ಅಲ್ಲಿಯೇ ದಡದಲ್ಲಿ ಎಲ್ಲಿಯೋ ತಾವು ಬಂದ ನೌಕೆಯನ್ನು ಬಯ್ತಿರಿಸಿದನು. ಹಿಂದೆ ದ್ರೌಪದಿಯೊಂದಿಗೆ ಕೃಷ್ಣನು ಬಂದಾಗ, ಆತನು ಅವರನ್ನು "ನೀವೆಲ್ಲಾ ಈ ಗಂಗೆಯನ್ನು ಹೇಗೆ ದಾಟಿ ಹೋದಿರಿ ?" ಎಂದು ಪ್ರಶ್ನಿಸಿದನು. ಭೀಮನು ವಿನೋದದಿಂದ "ನಾವು ತೋಳುಗಳಲ್ಲಿ ಈಜಿಕೊಂಡು ಬಂದೆವು" ಎಂದನು. ಕೃಷ್ಣನು ಆ ಮಾತನ್ನು ದಿಟವೆಂದೇ ತಿಳಿದು ಗಂಗೆಯನ್ನುತ್ತರಿಸಲು ಅವಸರಿಸಿದನು. ಕೃಷ್ಣನು ಸಾರಥಿ ರಥಾಶ್ವಗಳ ಸಮೇತವಾದ ರಥವನ್ನೇ ಒಂದು ಕೈಯಲ್ಲಿ ಮೇಲಕ್ಕೆತ್ತಿ, ಒಂದು ಕೈ ಎರಡು ಮೊಳಕಾಲುಗಳಿಂದಲೇ ಗಂಗೆಯನ್ನು ಸುಖವಾಗಿ ದಾಟಿಬಿಟ್ಟನು. ಆಶ್ಚರ್ಯಚಕಿತರೂ ಆನಂದಭರಿತರೂ ಆದ ಪಾಂಡವರು ಕೂಡಲೇ ಎದುರು ಬಂದು ಮಣಿದು ಆತನನ್ನಪ್ಪಿ ಆತನ ಅಪೂರ್ವಶಕ್ತಿಯನ್ನರಿತವರಾಗಿ ಸ್ತುತಿಸಿದರು. ಆಗ ಭೀಮನು ತಾನೇ, "ಇದಾದರೋ ನಾನು ಬೇಕೆಂದು ಮಾಡಿದ ತಮಾಷೆ" ಎಂದು ಎಲ್ಲರಿಗೂ ಹೇಳಿದನು. ಇದನ್ನು ಕೇಳಿ ಕೃಷ್ಣನಿಗೆ ಆಗಲೇ ಪಾಂಡವರ ಬಗ್ಗೆ ವಿರಕ್ತಿಯುಂಟಾಯಿತು. ದೇಶಕಾಲ ತಿಳಿಯದೆ ಮಾಡುವ ವಿನೋದ ಸರಿಯಲ್ಲ ! ಕೃಷ್ಣನು ಪಾಂಡವರನ್ನು ತಿರಸ್ಕರಿಸುತ್ತ "ಎಲೈ ಕುಪಾಂಡವರೇ, ನನ್ನ ಜೀವಿತದಲ್ಲಿ ನೀವೆಲ್ಲ ನೋಡುನೋಡುತ್ತಿರುವಂತೆಯೇ ನಾನಾಗಿ ಅನೇಕ ಬಾರಿ ಅಮಾನುಷಕಾರ್ಯಗಳನ್ನು ಮಾಡಿದ್ದೇನೆ. ಇದರ ಮೇಲೆ ಈ ಗಂಗೆಯನ್ನುತ್ತರಿಸಲು ನನ್ನ ಶಕ್ತಿಪರೀಕ್ಷೆಗೆ ಯಾವ ಮಾತು ಬೇಕಾಗಿತ್ತು ?" ಹೀಗೆಂದಾಡಿ ಆ ಪಾಂಡವರೊಡನೆಯೇ ಹಸ್ತಿನಪುರಕ್ಕೆ ಬಂದನು. ಅಲ್ಲಿ ಸುಭದ್ರೆಯ ಮಗ ಆರ್ಯಸೂನುವಿಗೆ ರಾಜ್ಯವಿತ್ತು, ಕೋಪದಿಂದಲೇ ಪಾಂಡವರನ್ನು

ಅಲ್ಲಿಂದ ಹೊರಡಿಸಿದನು. ತಾನು ದ್ವಾರಿಕೆಗೆ ತೆರಳಿದನು. ತನ್ನ ಪತ್ನಿಯರನ್ನು ಸಂತೋಷಪಡಿಸಿದನು,

ವಜ್ರಪಾತದಂತೆ ಕಠೋರವಾದ ಕೃಷ್ಣನ ಅಪ್ಪಣೆಯಂತೆ ಪಾಂಡವರು ತಮಗೆ ಅನುಕೂಲರಾದ ಜನರೊಂದಿಗೆ ದಕ್ಷಿಣದಿಕ್ಕಿನತ್ತ ಹೋದರು. ಅವರು ಅಲ್ಲಿ ಮಥುರಾ ನಗರಿಯನ್ನು ನಿರ್ಮಿಸಿದರು. ಅಲ್ಲಿ ದಕ್ಷಿಣ ದಿಕ್ಕಿನಲ್ಲಿ ಲವಂಗ ಕೃಷ್ಣಾಗುರು ಸುಗಂಧಾನಿಲವ್ಯಾಪ್ತವಾದ ಸಮುದ್ರತಟಗಳಲ್ಲಿಯೂ, ಚಂದನಸುಗಂಧಿತವಾದ ಮಲಯಗಿರಿಯ ಶಿಖರಗಳಲ್ಲಿ ವಿಹಾರಿಸತೊಡಗಿದರು.

ಗೌತಮಸ್ವಾಮಿ ಹೇಳುತ್ತಾನೆ : "ನೋಡು, ಲವಣಸಮುದ್ರ ಮತ್ತು ಜಂಬೂವೃಕ್ಷಗಳಿಂದ ಕೂಡಿದ ಜಂಬೂದ್ವೀಪದ ಭೂಮಿಯೆಲ್ಲಿ ? ಅತ್ಯಂತ ದುರ್ಗಮವಾದ ಧಾತಕೀಖಂಡದ ಭೂಮಿಯೆಲ್ಲಿ ? ಹೀಗಿದ್ದೂ, ಜೈನಧರ್ಮದ ಪ್ರಭಾವದಿಂದ ಕಾರ್ಯಸಿದ್ಧಿಯಾಗುತ್ತದೆ."

೫೫. ಭಗವನ್ನಿಷ್ಕ್ರಮಣಕಲ್ಯಾಣ ವರ್ಣನ

ಒಂದು ದಿನ ಕುಬೇರನಿಂದ ಕಳಿಸಲ್ಪಟ್ಟ ವಸ್ತ್ರವಿಭೂಷಣಗಳಿಂದಲೂ ಮಾಲೆ ವಿಲೇಪನಗಳಿಂದಲೂ ಅಲಂಕೃತನಾಗಿ ರಾಜಪರಿವೇಷ್ಟಿತನಾಗಿ ನೇಮಿಕುಮಾರನು ಬಲದೇವ ವಾಸುದೇವರಾದಿಯಾಗಿ ಸಕಲಯಾದವರಿಂದ ತುಂಬಿದ್ದ ಕುಸುಮಚಿತ್ರಾ ಎಂಬ ಸಭೆಗೆ ಹೋದನು. ಅರಸರು ಎದ್ದು ಎದುರಿಗೆ ಹೋಗಿ ವಂದಿಸಿದರು. ಕೃಷ್ಣನು ಮುಂದೆ ಬಂದು ಸ್ವಾಗತಿಸಿದನು. ಆಮೇಲೆ ನೇಮಿಯು ಕೃಷ್ಣನೊಡನೆ ಏಕಾಸನದಲ್ಲಿ ಕುಳಿತನು. ಅದು ಇಂದ್ರದ್ವಯರಿಂದಲೋ ಸಿಂಹದ್ವಯದಿಂದಲೋ ಅಧಿಷ್ಠಿತವಾದಂತೆ ರಂಜಿಸಿತು. ಸಭಾಮಧ್ಯೆ ನೇಮಿಕುಮಾರನು ಸಭಾಸದರ ಕಥಾಮೃತವನ್ನು ಸವಿಯುತ್ತ, ದಿವ್ಯಕಾಂತಿಯಿಂದ ಬೆಳಗುತ್ತ, ಕೆಲಹೊತ್ತು ಕೃಷ್ಣನೊಂದಿಗೆ ವಿನೋದದಿಂದಿದ್ದನು. ಆಮೇಲೆ ಬಲಿಷ್ಠರಾರೆಂಬ ಚರ್ಚೆ ಆರಂಭವಾದಾಗ, ಕೆಲಕೆಲವರು ಅರ್ಜುನನ, ಯುಧಿಷ್ಠಿರನ, ಭೀಮನ, ನಕುಲಸಹದೇವರ, ಮತ್ತಿತರರ ಬಲವನ್ನು ಮಿಗಿಲಾಗಿ ಹೊಗಳತೊಡಗಿದರು. ಮತ್ತೆ ಯಾರೋ ಬಲದೇವನು ಸರ್ವಾಧಿಕಬಲನೆಂದರು. ಮತ್ತಿನ್ನಾರೋ ದುರ್ಧರ ಗೋವರ್ಧನಗಿರಿಯನ್ನೆತ್ತಿದ ಹಾಗೂ ಬಲಪರೀಕ್ಷೆಮಾಡುವಂಥ ಅರಸರನ್ನೇ ವಿಚಲಿತಗೊಳಿಸುವ ಕೃಷ್ಣನು ಸರ್ವಾಧಿಕಬಲವಂತನೆಂದರು.

ಹೀಗೆ ಕೃಷ್ಣಸಭೆಯಲ್ಲಿದ್ದ ಅರಸರು ಬಗೆಬಗೆಯ ಮಾತಾಡುತ್ತಿರಲು, ಬಲದೇವನು ಲೀಲಾದೃಷ್ಟಿಯಿಂದ ಒಮ್ಮೆ ನೇಮಿನಾಥನತ್ತ ನೋಡುತ್ತ "ಈ ತ್ರಿಲೋಕಗಳಲ್ಲಿಯೂ ಈತನ ಸಮಾನ ಅನ್ಯ ಬಲಿಷ್ಠನಿಲ್ಲ ; ಈತನು ತನ್ನ ಅಂಗೈಯಲ್ಲೆ ಭೂಮಿಯನ್ನೆತ್ತಬಲ್ಲ ; ಸಮುದ್ರಗಳನ್ನು ದಿಕ್ಕುಗಳಿಗೆ ಸೂಸಬಲ್ಲ; ಪರ್ವತವನ್ನು ನಿರಾಯಾಸವಾಗಿ ನಡುಗಿಸಬಲ್ಲ; ದಿಟವಾಗಿ ಈತ ಜಿನೇಂದ್ರ. ಈತನಿಗೆ ಉತ್ಕೃಷ್ಟನು ಮತ್ತಾರಿರಲು ಸಾಧ್ಯ ?" ಎಂದಾಡಿದನು. ಇದನ್ನು ಕೇಳಿದ ಕೃಷ್ಣನು ಮೊದಲು ನೇಮಿಯತ್ತ ನೋಡಿ ಮುಗುಳ್ನಗೆ ನಕ್ಕು

"ಹೇ ಭಗವನ್, ನಿನಗೆ ಮಹಾದೇಹಬಲವಿರುವ ಪಕ್ಷಕ್ಕೆ ಬಾಹುಯುದ್ಧದಲ್ಲಿ ಅದರ ಪರೀಕ್ಷೆ ಏಕಾಗಬಾರದು?" ಎಂದನು. ಆಗ ನೇಮಿಯು ಅದೊಂದು ವಿಶಿಷ್ಟರೀತಿಯಲ್ಲಿ ಮೊಗವೆತ್ತಿ, "ನನಗೆ ಈ ವಿಷಯದಲ್ಲಿ ಮಲ್ಲಯುದ್ಧದ ಆವಶ್ಯಕತೆಯಾದರೂ ಏನು ? ಹೇ ಅಗ್ರಜ, ನಿನಗೆ ನನ್ನ ತೋಳ್ಬಲವನ್ನು ತಿಳಿಯಲೇಬೇಕೆಂದಿದ್ದರೆ, ಹಠಾತ್ತನೆ ಈ ಆಸನದಿಂದ ನನ್ನ ಈ ಕಾಲನ್ನಗಲಿಸು, ಸಾಕು" ಎಂದನು. ಕೃಷ್ಣನು ಆಗಲೇ ಸೊಂಟಕಟ್ಟಿ ತೋಳ್ಬಲದಿಂದ ಜಿನನನ್ನು ಗೆಲ್ಲುವ ಇಚ್ಛೆಯಿಂದ ಎದ್ದುನಿಂತನು. ಆದರೆ ಕಾಲನ್ನಲುಗಿಸುವುದಿರಲಿ, ಕಾಲಿನ ಒಂದು ಬೆರಳನ್ನು ಕೂಡ ಅಲುಗಿಸುವುದಾಗಲಿಲ್ಲ. ಮೈಯೆಲ್ಲಾ ಬೆವತಿತು. ನಿಟ್ಟುಸಿರು ಹೊರಟವು. ಕೊನೆಗೆ ಕೃಷ್ಣನು ಗರ್ವವನ್ನು ಬಿಟ್ಟು "ಹೇ ದೇವ, ನಿನ್ನ ಬಲ ಅಲೌಕಿಕವೂ ಆಶ್ಚರ್ಯಕರವೂ ಆದುದು" ಎಂದು ಸ್ಪಷ್ಟವಾಗಿ ಹೇಳಿದನು. ಆಗಲೇ ಇಂದ್ರನಿಗೆ ಆಸನಕಂಪನವಾಯಿತು. ಅವನು ದೇವಸಮೇತನಾಗಿ ಬಂದು ಜಿನನನ್ನು ಪೂಜಿಸಿ, ಸ್ತುತಿಸಿ, ವಂದಿಸಿ ಹೋದನು. ಅತ್ತ ನೇಮಿ ಹಲವು ರಾಜರಿಂದ ಪರಿವೃತನಾಗಿ ತನ್ನ ಮನೆಗೆ ಹೋದನು. ಇತ್ತ ಕೃಷ್ಣನೂ ತನ್ನಲ್ಲೇ ತನ್ನ ವಿಷಯವಾಗಿ ಶಂಕಿಸುತ್ತ ತನ್ನ ಮನೆಗೆ ಹೋದನು. ಸಂಕ್ಲಿಷ್ಟಚೇತಸರು ಜಿನೇಂದ್ರವಿಷಯದಲ್ಲೂ ಶಂಕಿಸುತ್ತಾರೆ. ಅಂದಿನಿಂದ ಪ್ರತಿದಿನವೂ ಕೃಷ್ಣನು ನೇಮಿನಾಥನನ್ನು ಅತ್ಯಾದರದಿಂದ ಸೇವಿಸುತ್ತ, ಪ್ರೀತಿಪುರಸ್ಸರವಾಗಿ ಪೂಜಿಸುತ್ತ ಇರತೊಡಗಿದನು.

ವಿಜಯಾರ್ಧದ ಉತ್ತರಶ್ರೇಣಿಯಲ್ಲಿ ಶ್ರುತಶೋಣಿತವೆಂಬ ನಗರ. ಅಲ್ಲಿ ಬಾಣನೆಂಬ ಒಬ್ಬ ಗರ್ವಿಷ್ಠನಾದ ವಿದ್ಯಾಧರ. ಆತನಿಗೆ ಗುಣಕಲಾಭರಣೆ ಲೋಕಪ್ರಸಿದ್ಧೆ ಉಷೆಯೆಂಬ ಪುತ್ರಿ. ಇವಳು ಪ್ರದ್ಯುಮ್ನಪುತ್ರನಾದ ಅನಿರುದ್ಧನನ್ನು ಬಹಳ ಕಾಲದಿಂದ ತನ್ನ ಹೃದಯದಲ್ಲಿ ಧರಿಸಿದ್ದಳು. ಇದು ಆಕೆಯ ಹೃದಯತಾಪಕ್ಕೆ ಎಡೆಗೊಟ್ಟಿತ್ತು. ಅದನ್ನು ಅನ್ಯರಲ್ಲಿ ಹೇಳಿಕೊಳ್ಳದೆ ಆಕೆ ತನ್ನಲ್ಲೇ ಕೊರಗುತ್ತ ಕೃಶಳಾಗುತ್ತಿದ್ದಳು. ಒಂದು ದಿನ ಆಕೆಯ ಸಖಿ ಅವಳನ್ನು ಪ್ರಶ್ನಿಸಿ, ವಿಷಯ ತಿಳಿದವಳಾಗಿ, ಇರುಳಲ್ಲಿ ಅನಿರುದ್ಧನನ್ನು ಖೇಚರಲೋಕಕ್ಕೆ ಕರೆತಂದುಬಿಟ್ಟಳು. ಬೆಳಗ್ಗೆ ಹಠಾತ್ತನೆ ಅನಿರುದ್ಧನಿಗೆ ಎಚ್ಚರವಾಗಿ ತಾನು ಮಣಿಭವನದಲ್ಲಿ ಮೃದುಶಯ್ಯೆಯ ಮೇಲೆ ಮಲಗಿರುವುದನ್ನು ಕಂಡನು. ಏಳುತ್ತಲೇ ಎದುರಿನಲ್ಲಿ ಕನ್ನೆಯೊಬ್ಬಳನ್ನು ಕಂಡನು. ಆಕೆ ಸುಂದರವೂ ಆಕರ್ಷಕವೂ ಆದ ದೇಹಯಷ್ಟಿಯಿಂದ ಮನಸೆಳೆಯುವಂತಿದ್ದಳು. ಅವಳನ್ನು ಕಂಡು ಅನಿರುದ್ಧನು "ಇಲ್ಲಿ ನನ್ನ ಮನಸೆಳೆಯುತ್ತಿರುವ ಈ ಉತ್ತಮಸ್ತ್ರೀ ಯಾರು ? ಇಂದ್ರನ ರಾಣಿಯೋ, ನಾಗವನಿತೆಯೋ ? ಏಕೆಂದರೆ ನಾನು ಇಂಥ ಮಾನವಸ್ತ್ರೀಯನ್ನು ಎಲ್ಲಿಯೂ ಎಂದೂ ಕಂಡಿಲ್ಲ. ಇಂದ್ರಪದೋಪಮವಾಗಿ ಈಯೆಡೆಯು ಕಣ್ಸೆಳೆಯುತ್ತ ಅಪೂರ್ವವಾಗಿ ತೋರುತ್ತಿದೆ. ಈಗ ನನಗೆ ಕಾಣುತ್ತಿರುವ ಇದೆಲ್ಲ ದಿಟವೋ ಸಟೆಯೋ ? ದಿಟವಾಗಿ ನಿದ್ದಿಸುತ್ತಿರುವವನ ಮನಸ್ಸು ಲೋಕವನ್ನೆಲ್ಲ ಸುತ್ತುತ್ತಿರುತ್ತದೆ"—ಎಂದು ತರ್ಕಿಸುತ್ತಿದ್ದನು. ಆಗ ಸಖಿ ಚಿತ್ರಲೇಖೆ ಬಂದು ಎಲ್ಲ ಸಂಗತಿಯನ್ನೂ ಅವನಿಗೆ ತಿಳಿಸಿ ರಹಸ್ಯವಾಗಿ ಕಂಕಣ ಕಟ್ಟಿಸಿ, ಉಷೆಯೊಂದಿಗೆ ಅವನನ್ನು ಒಡಗೂಡಿಸಿದಳು. ಉಷಾನಿರುದ್ಧರು ದಾಂಪತ್ಯಸುಖಾನುಭವ ಮಾಡತೊಡಗಿದರು.

ಇತ್ತ ಕೃಷ್ಣನು ಅನಿರುದ್ಧನು ಅಪಹೃತನಾದ ಸುದ್ದಿ ತಿಳಿಯುತ್ತಲೂ, ಬಲದೇವ ಶಂಬ ಪ್ರದ್ಯುಮ್ನ ಮೊದಲಾದ ಯಾದವರೊಡಗೊಂಡು, ಅವನನ್ನು ಕರೆತರಲು ನಭೋಮಾರ್ಗವಾಗಿ ಬಾಣನ ನಗರಕ್ಕೆ ಹೊರಟನು. ಚತುರ್ಬಲ ಸಮೇತವಾಗಿ ನಡಸಿದ ಯುದ್ಧದಲ್ಲಿ ಬಾಣನನ್ನು ಗೆದ್ದು ಉಷಾಸಹಿತನಾಗಿ ಅನಿರುದ್ಧನನ್ನು ತನ್ನೂರಿಗೆ ಕರೆತಂದನು. ಸ್ವಜನ ಪುರಜನರು ನೆಮ್ಮದಿಗೊಂಡರು.

ಒಮ್ಮೆ ವಸಂತ ಋತು ಬಂದಾಗ ಕೃಷ್ಣನು ತನ್ನ ಅಂತಃಪುರದವರು, ನೇಮಿನಾಥ, ನೃಪಜನರು, ಪೌರರು ಇವರನ್ನೊಡಗೊಂಡು ರೈವತಕಗಿರಿಗೆ ಕ್ರೀಡಾವಿಹಾರಾರ್ಥವಾಗಿ ಹೋದನು. ವೃಷಭ ತಾಲ ಗರುಡ ಧ್ವಜಗಳು ಒಪ್ಪುತ್ತಿದ್ದ ಪ್ರತ್ಯೇಕರಥಗಳಲ್ಲಿ ನೇಮಿ ಬಲ ಕೃಷ್ಣರು ಒಬ್ಬರಾದ ಮೇಲೊಬ್ಬರು ಸಾಗಿದರು. ಹಿಂದೆ ಸಮುದ್ರವಿಜಯ ಮತ್ತು ಅವನ ಸೋದರರ ಬಳಸಿನಲ್ಲಿ ಪ್ರದ್ಯುಮ್ನನು ನಡೆದನು. ಅದಕ್ಕೆ ಹಿಂದೆ ಪೌರರು,ಅದಕ್ಕೆ ಹಿಂದೆ ಕೃಷ್ಣ ಮೊದಲಾದರಸರ ಅಂತಃಪುರದವರು ಪಲ್ಲಕ್ಕಿಯೇರಿ ನಡೆದರು. ಜನಭರಿತವೂ ವನವಿರಾಜಿತವೂ ಆದ ರೈವತಕಗಿರಿ ಸುಮೇರುವಿನಂತೆ ಶೋಭಿಸುತ್ತಿತ್ತು. ಸಮೀಪಗತರಾಗುತ್ತಲೂ ಜನರೆಲ್ಲಾ ತಂತಮ್ಮ ವಾಹನಗಳನ್ನು ಬಿಟ್ಟು ಪರ್ವತದ ತಪ್ಪಲ ವನಗಳಲ್ಲಿ ವಿಹರಿಸಿದರು, ತೆಂಕಣಗಾಳಿ ಬೀಸುತ್ತಿತ್ತು. ಉಳಿದ ಶ್ರಮವೆಲ್ಲಾ ಕಳೆದೂ ರತಿಶ್ರಮವೊಂದು ಕಳೆಯಲಿಲ್ಲ. ಕೋಗಿಲೆಗಳ ಇಂಚರವೂ ತುಂಬಿಗಳ ಝೇಂಕಾರವೂ ಕೇಳುತ್ತಿತ್ತು,

ತರುಣದಂಪತಿಗಳು ಪುಷ್ಪಶಯ್ಯೆಯ ಮೇಲೆ ರತಾಸಕ್ತರಾಗಿರುತ್ತಿದ್ದರು. ಯಾದವರು ಒಂದೊಂದೂ ವನ, ಗಿಡ,ಮರ, ಲತಾಗೃಹ, ಸರಸ್ಸುಗಳಲ್ಲಿ ಕ್ರೀಡಿಸಿದರು. ಕೃಷ್ಣನು ತನ್ನ ೧೬ ಸಹಸ್ರ ಸ್ತ್ರೀಯರೊಡನೆ ನಲಿದನು. ಪತಿಯ ಆದೇಶ ಪಡೆದು ಕೃಷ್ಣ ಸತಿಯರು ತರುಲತಾರಮಣೀಯವಾದ ವನಗಳಲ್ಲಿ ನೇಮಿಯೊಡನೆ ಕ್ರೀಡಿಸತೊಡಗಿದರು. ಮಧುಮದಾಲಸವಾದ ಕಣ್ಮನಗಳಿಂದ ಕೂಡಿದ ಒಬ್ಬಳು ವನಲತೆಯ ಪುಷ್ಪಗುಚ್ಛವನ್ನು ಕೀಳುವಾಗ ಆಕೆಯ ಮುಖಸೌಗಂಧ್ಯಕ್ಕೆ ಕೆಳೆಗೊಂಡು ದುಂಬಿಗಳು ಮುತ್ತಿದುವು. ಅದರಿಂದ ಬೆದರಿದ ಆಕೆ ಮೈದುನ ನೇಮಿಯನ್ನೇ ಹಿಡಿದುಕೊಂಡಳು. ಇನ್ನೊಬ್ಬಳು ಅವನ ವಕ್ಷಃಸ್ಥಲವನ್ನು ಮುದ್ದಿಸಿದಳು. ಮತ್ತೊಬ್ಬಳು ಸ್ಪರ್ಶಿಸಿದಳು. ಮಗದೊಬ್ಬಳು ಮೂಸಿದಳು. ಮತ್ತೂ ಒಬ್ಬಳು ತನ್ನ ಮೃದುಹಸ್ತದಿಂದ ಅವನ ಹಸ್ತವನ್ನು ಹಿಡಿದುಕೊಂಡು ಅವನನ್ನು ತನ್ನತ್ತ ತಿರುಗಿಸಿಕೊಳ್ಳಲು ಯತ್ನಿಸಿದಳು. ಎಷ್ಟೋ ಮಂದಿ ಅವನಿಗೆ ಸಾಲ ತಮಾಲದ ಸಣ್ಣ ನನೆಕೊನೆಗಳಿಂದ ಗಾಳಿ ಬೀಸತೊಡಗಿದರು. ಅಶೋಕದ ನವಪಲ್ಲವಗಳಿಂದ ಕರ್ಣಾಭರಣಗಳನ್ನು ಮಾಡಿ ತೊಡಿಸಿದರು. ಕೆಲವರು ಅಪ್ಪುಗೆಯ ಇಚ್ಛೆಯಿಂದ ಪುಷ್ಪಮಾಲೆಯನ್ನು ತಲೆಗೆ, ಕೊರಳಿಗೆ ಹಾಕತೊಡಗಿದರು. ಕೆಲವರು ಅವನ ತಲೆಗೆ ಲಕ್ಷ್ಯವಿಟ್ಟು ಕುರವಕಪುಷ್ಪವನ್ನೆಸೆದರು. ಹೀಗೆ ನೇಮಿಕುಮಾರನು ಕೃಷ್ಣಸತಿಯರೊಂದಿಗೆ ಕ್ರೀಡಿಸುತ್ತ, ಆ ವಸಂತಕ್ಕೆ ಕೊನೆಯೇ ಇಲ್ಲವೆಂಬಂತೆ ಭಾವಿಸಿದನು. ಆಮೇಲೆ ಗ್ರೀಷ್ಮವು ಆತನ ಪರಿಚರ್ಯೆಗೆ ಸುಳಿಯಿತು.

ಗ್ರೀಷ್ಮವು ಬರುತ್ತಲೂ ಕೃಷ್ಣನು ಸಪರಿವಾರನಾಗಿ ಅದೇ ರಮ್ಯ ರೈವತಕಗಿರಿಯಲ್ಲೇ ಅನುದಿನವೂ ಇರತೊಡಗಿನು. ಭಗವಾನ್ ನೇಮಿನಾಥನು ಸ್ವಭಾವತಃ ರಾಗಮೋಹ ಪರಾಙ್ಮುಖನಾದರೂ ಕೃಷ್ಣಸತಿಯರ ಒತ್ತಾಯದಿಂದ ಶೀತಲೋಕದ ಜಲಾಶಯದಲ್ಲಿ ಜಲಕ್ರೀಡೆಗೆ ತೊಡಗಿದನು. ಕೃಷ್ಣಸತಿಯರು ಒಮ್ಮೆ ಈಜುತ್ತ ಒಮ್ಮೆ ಮುಳುಗುತ್ತ, ಮತ್ತೊಮ್ಮೆ ಕೈಯ ಜೀರ್ಕೊಳವಿಯಿಂದ ಪರಸ್ಪರರ ಮೊಗದತ್ತ ನೀರುಸೂಸುತ್ತಿದ್ದರು. ಅವರು ಬೊಗಸೆಗಳಲ್ಲಿಯೂ ಜೀರ್ಕೊಳವಿಗಳಲ್ಲಿಯೂ ನೀರೆತ್ತಿ ನೇಮಿಯ ಮೇಲೆ ಸೂಸಲು, ಆತನೂ ಅವರತ್ತ ನೀರುಸೂಸಿ ಅವರನ್ನು ಹಿಂದಟ್ಟುತಿದ್ದನು. ಜಲಾಶಯವು ಸುಗಂಧ ವಿಲೇಪನಗಳಿಂದ ವರ್ಣರಂಜಿತವಾಯಿತು. ಹೆಣ್ಣಾನೆಗಳು ಮಹಾಹಸ್ತಿಯೊಡನೆ ಕೊಳದಲ್ಲಿ ನಿಡುಗಾಲ ಈಸಾಡುವಂತೆ ಈ ಸತಿಯರೂ ಈಸಾಡಿದರು. ಅವರ ಬಿಸಿಲ ತಾಪದ ಆಯಾಸ ಕಳೆಯಿತು. ಆಗ ಮೇಲೆದ್ದು ಬಂದ ಅವರು ತಮ್ಮ ಅವಸ್ಥಾವಿಶೇಷದಿಂದ ರತಕಾಲದ ಶೋಭೆಯನ್ನು ತೋರುತ್ತಿದ್ದರು. ಆಮೇಲೆ ತಾವು ಪರಿಜನರು ತಂದಿತ್ತ ವಸ್ತ್ರಭೂಷಣಗಳನ್ನು ಧರಿಸಿ, ನೇಮಿಜಿನನ ಒದ್ದೆಶರೀರವನ್ನು ವಸ್ತ್ರದಿಂದ ಒರಸಿ ಅನ್ಯವಸ್ತ್ರವನ್ನು ಉಡಿಸಿದರು. ಆತನು ತೆಗೆದು ಹಾಕಿದ ಒದ್ದೆಬಟ್ಟೆಯನ್ನು ಹಿಂಡುವಂತೆ ಅದೊಂದು ರೀತಿಯ ವಿಲಾಸಪೂರ್ಣ ಮುದ್ರೆಯ ಕಟಾಕ್ಷವನ್ನು ಸೂಸುತ್ತ ನೇಮಿಕುಮಾರನು ಕೃಷ್ಣನ ಸತಿಯೂ ಆತನಿಗೆ ಅತ್ಯಂತ ಪ್ರೇಮಪಾತ್ರಳೂ ಅದ ಜಾಂಬವತಿಯನ್ನು ಪ್ರೇರಿಸಿದನು. ಆತನ ಅಭಿಪ್ರಾಯ ತಿಳಿದಕೂಡಲೇ ವಾಕ್ಚತುರೆಯಾದ ಜಾಂಬವತಿ ಕೃತಕಕೋಪದ ಕಡೆಗಣ್ಣ ನೋಟವನ್ನು ನೇಮಿಯತ್ತ ಬೀರಿ, ತುಟಿ ನಡುಗುತ್ತಿರಲು ಇಂತೆಂದಳು : "ಯಾರ ಶರೀರದ ಮತ್ತು ಕಿರೀಟರತ್ನಗಳ ಪ್ರಭೆ ಕೊಟ್ಯಂತರ ಸರ್ಪಗಳ ರತ್ನಕಾಂತಿಗೆ ಇಮ್ಮಡಿಯಾಗಿದೆಯೋ, ಯಾರು ಕೌಸ್ತುಭರತ್ನ ಭಾಸುರನೋ, ಮಹಾನಾಗಶಯ್ಯೆಯೇರಿ ತನ್ನ ದಿವ್ಯಶಂಖವನ್ನು ಪೂರೈಸಿದನೋ, ಯಾರು ನೀಲವರ್ಣನೋ, ಶಾರ್ಙ್ಗಧನುವಿಗೆ ಹೆದೆಯೇರಿಸಿದವನೋ, ಅಖಿಲ ಭೂಪರಿಗೆ ವಿಭುವೋ, ಸುಭಗಾಂಗಸಮೇತನೋ ಅಂಥ ಮಹಾಪುರುಷನು ನನ್ನ ಸ್ವಾಮಿ. ಆತ ಕೂಡ ಎಂದೂ ನನಗೆ ಇಂಥ ಕೆಲಸಕ್ಕೆ ಅಪ್ಪಣೆ ಮಾಡುವುದಿಲ್ಲ. ಹೀಗಿರಲು ನೀವಾರೋ ವಿಚಿತ್ರ ಮನುಷ್ಯರು ; ನನಗೂ ಒದ್ದೆಬಟ್ಟೆಯನ್ನು ಹಿಂಡುವಂತೆ ಅಪ್ಪಣೆ ಕೊಡುತ್ತಿದ್ದೀರಿ "

ಜಾಂಬವತಿಯ ಆ ಮಾತು ಕೇಳಿ, ಕೃಷ್ಣನ ಸತಿಯರೆಲ್ಲಾ "ಎಲೌ ಲಜ್ಜಾಹೀನಳೆ, ತ್ರಿಜಗತ್ಸ್ವಾಮಿಯೂ ಅನಂತಗುಣಧಾರಕನೂ ಆದ ಭಗವಾನ್ ಜಿನೇಂದ್ರನನ್ನು ನೀನು ಹೀಗೆ ನಿಂದಿಸುತ್ತಿರುವೆ?" ಎಂದರು. ಆಗ ನೇಮಿನಾಥನು ನಗುತ್ತ "ಕೃಷ್ಣರಾಜನ ಯಾವ ಪೌರುಷವನ್ನು ನೀನು ವರ್ಣಿಸಿದೆಯೋ ಅದು ಲೋಕದಲ್ಲಿ ಏನು ಮಹಾಕಷ್ಟದ ಕಾರ್ಯ ?" ಎಂದಿಷ್ಟು ನುಡಿದು, ಆಗಲೇ ನಗರಕ್ಕೆ ಹಿಂದಿರುಗಿ ರಾಜಮಂದಿರವನ್ನು ಹೊಕ್ಕನು. ಕೃಷ್ಣನ ಭಯಂಕರವಾದ ಹೆಡೆಗಳ ಮಹಾನಾಗಶಯ್ಯೆಯೇರಿದನು; ಶಾರ್ಙ್ಗಧನುವಿಗೆ ಹೆದೆಯೇರಿಸಿದನು ; ಪಾಂಚಜನ್ಯಶಂಖವನ್ನು ಪೂರೈಸಿದನು. ಭೂಮ್ಯಂತರಿಕ್ಷವನ್ನೂ ಸರ್ವವನ್ನೂ ವ್ಯಾಪಿಸಿದ ಆ ದನಿಗೆ ಬ್ರಹ್ಮಾಂಡವೇ ಒಡೆದುಹೋಯಿತೇನೋ

ಎನ್ನುವಂತಾಯಿತು. ಕಟ್ಟುಗಂಬವನ್ನು ಮುರಿದುಕೊಂಡು ಆನೆ ಕುದುರೆಗಳು ನಗರದಲ್ಲಿ ದಿಕ್ಕಾಪಾಲು ನುಗ್ಗಿದುವು. ಸೌಧಾಗ್ರಗಳು ಕುಸಿದುವು. ಕೃಷ್ಣನು ಕತ್ತಿಹಿರಿದನು. ಸಭೆಯು ಕ್ಷೋಭೆಗೊಂಡಿತು. ಪೌರರು ಪ್ರಲಯವೇ ಬಂತೆಂದು ಭೀತರಾದರು. ಕೃಷ್ಣನಿಗೆ ಅದು ತನ್ನ ಶಂಖದ ಧ್ವನಿಯೇ ಎಂದು ತಿಳಿದಾಗ ಕೂಡಲೇ ಆಯುಧಶಾಲೆಗೆ ಹೋಗಿ ನೋಡಿದನು. ಅಲ್ಲಿ ನೇಮಿನಾಥನು ನಾಗಶಯ್ಯೆಯ ಮೇಲೇರಿ ನಿರ್ಲಕ್ಷ್ಯವಾಗಿ ನಿಂತಿರುವುದನ್ನು ನೋಡಿ ಆಚ್ಚರಿಗೊಂಡನು. ನೇಮಿನಾಥನು ಈ ಕೆಲಸವನ್ನು ಜಾಂಬವತಿಯ ಪರುಷವಾಕ್ಯಗಳನ್ನು ಕೇಳಿ ಕೆರಳಿ ಮಾಡಿದ್ದೆಂದು ಸ್ಪಷ್ಟವಾಗುತ್ತಲೂ. ಅವನಿಗೆ ತುಂಬ ಸಂತಸವಾಯಿತು. ಆಗ ಕುಮಾರನ ಆ ಕೋಪವಿಕಾರವೂ ಕೃಷ್ಣನಿಗೆ ಸಂತೋಷಕಾರಣವೇ ಆಯಿತು. ನೇಮಿಯನ್ನಪ್ಪಿ, ಸತ್ಕರಿಸಿ, ತನ್ನ ಮನೆಗೆ ಹೋದನು. ಮನೆಗೆ ಹೋದ ಮೇಲೆ ತನ್ನ ವನಿತೆಯರ ನಿಮಿತ್ತದಿಂದ ನೇಮಿಗೆ ಪ್ರೇಮೋದ್ದೀಪನವಾಗಿದೆಯೆಂದು ತಿಳಿಯುತ್ತಲೂ ಮತ್ತೂ ಸಂತೋಷಿಸಿದನು. ಭೋಜವಂಶೀಯರ ಕುಮಾರಿ ರಾಜೀವಂತಿಯನ್ನು ನೇಮಿಗೆ ಬೇಡಿ, ನೇಮಿಕುಮಾರನ ವಿವಾಹದ ಸುದ್ದಿಯನ್ನು ಬಂಧುಗಳಿಗೆ ಕಳಿಸಿದನು. ಅರಸರನ್ನೆಲ್ಲ ಕರೆಸಿ ಮನ್ನಿಸಿದನು. ಸಮಯೋಚಿತ ಮಜ್ಜನವಿಹಿತನೂ ಭೂಷಣಭೂಷಿತನೂ ಆದ ನೇಮಿ ನಗರದಲ್ಲಿ ಎಲ್ಲರ ಮನಸೆಳೆಯುತ್ತಿದ್ದನು.

ಹೀಗಿರಲು ವರ್ಷಾಕಾಲ ಬಂತೆಂದು ಗ್ರೀಷ್ಮಋತು ಕಾಲ್ದೆಗೆಯಿತು. ಇಂಥ ವರ್ಷರ್ತುವಿನಲ್ಲಿ ಒಂದು ದಿನ ನೇಮಿಕುಮಾರನು ನಾಲ್ಕು ಕುದುರೆ ಹೂಡಿದ ರಥದಲ್ಲಿ ಕುಳಿತು ಹಲವರು ರಾಜಪುತ್ರರೊಡದೆ ವನಭೂಮಿಯತ್ತ ನಡೆದನು. ರಾಜೀಮತಿಯೂ ಪೌರಸ್ತ್ರೀಯರೂ ತೃಷಿತನೇತ್ರಗಳಿಂದ ತನ್ನ ಶರೀರದತ್ತಲೇ ನೋಡುತ್ತಿರಲು, ತನ್ನ ದರ್ಶನದಿಂದ ನೋಟಕರ ಮನಸೆಳೆಯುತ್ತ, ದಯೆತೋರುತ್ತ, ವಿಶಾಲ ರಾಜಮಾರ್ಗದಲ್ಲಿ ಮೆಲ್ಲಮೆಲ್ಲಗೆ ಸಾಗುತ್ತಿದ್ದನು. ಸಮುದ್ರವು ತನ್ನ ಚಂಚಲತರಂಗಗಳಿಂದ ಘೂರ್ಣಿಸುತ್ತ ನರ್ತನಕಾರರಂತೆ ತೋರುತ್ತಿತ್ತು. ಉಪವನವನ್ನು ಸೇರುತ್ತಲೂ, ವನಶ್ರೀಯನ್ನು ನೋಡಿ ನೇಮಿ ನಲಿದನು. ವೃಕ್ಷಪಂಕ್ತಿಗಳು ಪುಷ್ಪಾಂಜಲಿ ಮಾಡಿದುವು. ಆ ವೇಳೆಗೆ ಅವನು ಆ ವನದ ಒಂದೆಡೆಯಲ್ಲಿ ಭಯಕಂಪಿತಚೇತಸವೂ ಭಯಗ್ರಸ್ತಶರೀರವೂ ವಿಹ್ವಲೀಭೂತವೂ ಆದ ನಾನಾಜಾತಿಯ ತೃಣಭಕ್ಷಿಗಳಾದ ಪ್ರಾಣಿಗಳು ಕೆಲವು, ಮನುಷ್ಯರಿಂದ ಕಟ್ಟುಗೊಂಡಿರುವುದನ್ನು ನೋಡಿದನು. ಆತನು ತನ್ನ ಅವಧಿಜ್ಞಾನದಿಂದ ಆಯೆಲ್ಲ ಪ್ರಾಣಿಗಳನ್ನೂ ಅಲ್ಲಿ ಒಗ್ಗೂಡಿಸಿರುವುದೇಕೆಂದು ತಿಳಿಯಬಲ್ಲವನಾಗಿದ್ದರೂ, ಕೂಡಲೇ ತನ್ನ ರಥವನ್ನು ನಿಲ್ಲಿಸಿ, ಗಂಭೀರಧ್ವನಿಯಲ್ಲಿ ಸಾರಥಿಯನ್ನು ಕುರಿತು "ಈ ನಾನಾಜಾತಿಯ ಪಶುಗಳನ್ನು ಏತಕ್ಕಾಗಿ ಇಲ್ಲಿ ಒಂದೆಡೆ ಸೇರಿಸಿದ್ದಾರೆ?" ಎಂದು ಪ್ರಶ್ನಿಸಿದನು. ಸಾರಥಿಯು ವಿನಯದಿಂದ ಕೈಮುಗಿದುಕೊಂಡು, "ಸ್ವಾಮಿ, ತಮ್ಮ ವಿವಾಹೋತ್ಸವಕ್ಕೆ ಬಂದಿರುವಂಥ ಮಾಂಸಭೋಜಕರಾದ ಅರಸರಿಗಾಗಿ ನಾನಾಪ್ರಕಾರದ ಮಾಂಸವನ್ನು ಸಿದ್ಧಪಡಿಸಲೆಂದು ಈ ಪ್ರಾಣಿಗಳನ್ನು ಇಲ್ಲಿ ಕಟ್ಟಿಹಾಕಿದ್ದಾರೆ" ಎಂದನು. ಹೀಗೆನ್ನುತ್ತಲೂ ನೇಮಿನಾಥನು ಪ್ರಾಣಿಗಳ ಹಿಂಡಿನತ್ತ ನೋಡುತ್ತಿದ್ದಂತೆ ಆತನ ಹೃದಯ ಪ್ರಾಣಿದಯೆ

ಯಿಂದ ಉಕ್ಕೇರಿತು. ಆತನು ಅವಧಿಜ್ಞಾನಿಯೇ ಆಗಿದ್ದನಷ್ಟೆ. ಅದರಿಂದ ರಾಜಕುಮಾರರ ಕಡೆ ನೋಡಿ ಹೀಗೆ ನುಡಿದನು: "ವನವೇ ಮನೆಯಾದ, ವನದ ಹುಲ್ಲು ನೀರೇ ಆಹಾರವಾದ, ಅತ್ಯಂತ ನಿರಪರಾಧಿಗಳಾದ ಈ ದೀನಮೃಗಗಳನ್ನು ಲೋಕದಲ್ಲಿ ಇನ್ನೂ ಮನುಷ್ಯರು ವಧಿಸುತ್ತಾರೆ. ಮನುಷ್ಯರ ನಿಷ್ಕರುಣೆಯನ್ನು ಏನೆನ್ನೋಣ? ರಣಾಗ್ರದಲ್ಲಿ ಯಾರು ಕೀರ್ತಿಯನ್ನು ಗಳಿಸಿರುವರೋ ಅಂಥ ಶೂರರು ಹಸ್ತ್ಯಶ್ವಾದಿಗಳ ಮೇಲೇರಿ ತಮ್ಮನ್ನು ಕೊಲ್ಲಲೆದುರಾಗಿ ಬಂದವರನ್ನು ಎದುರಿಸಿ ತಾವು ಕೊಲ್ಲುವರಲ್ಲದೆ ಅನ್ಯರನ್ನಲ್ಲ. ಅಂಥವರು ಮಹೋಗ್ರಜಂತುಗಳಾದ ಶರಭ ಸಿಂಹ ಕಾಡಾನೆ ಮೊದಲಾದವುಗಳ ಗೊಡವೆಗೆ ಹೋಗದೆ, ಜಿಂಕೆ ಮುಂತಾದ ಕ್ಷುದ್ರಜಂತುಗಳ ಮೇಲೆ ಕೈಮಾಡಲು ಅವರಿಗೆ ನಾಚಿಗೆಯಾಗದೇಕೆ? ಆಹಾ, ಯಾವ ಶೂರರು ಕಾಲಿಗೆ ಮುಳ್ಳು ಚುಚ್ಚುವುದೆಂದು ಭಯಕ್ಕೆ ತಾವು ಕೆರವನ್ನು ಮೆಟ್ಟುವರೋ, ಅವರೇ ಬೇಟೆಯ ವೇಳೆ ಸಾಧುಪ್ರಾಣಿಗಳನ್ನು ನೂರಾರು ಬಗೆಯಲ್ಲಿ ತೀಕ್ಷ್ಣಶಸ್ತ್ರಗಳಿಂದ ಕೊಲ್ಲುತ್ತಾರಲ್ಲ, ಇದು ಆಚ್ಚರಿಯ ವಿಷಯ. ಮೊದಲು ಇದರಿಂದ ವಿಷಯಸುಖರೂಪವಾದ ಫಲ ದೊರೆಯಬಹುದು. ಆದರೆ ಮುಂದೆ ಈ ಪ್ರಾಣಿವಧೆ ದುಃಖಕ್ಕೆ ದಾರಿಮಾಡುತ್ತದೆ. ಬಯಸುವುದು ಮಹಾರಾಜ್ಯದ ಪದವಿಯನ್ನು; ಆದರೆ ಮಾಡುವುದು ಪ್ರಾಣಿವಧೆಯನ್ನು. ಇದರಿಂದ ಪಾಪಬಂಧವು ನಿಶ್ಚಿತ. ಫಲವಾಗಿ ದೊರೆಯುವುದು ಕಟುಫಲವಲ್ಲದೆ ರಾಜ್ಯಾದಿ ಮಧುರಫಲವಲ್ಲ. ಈ ಜೀವಿಗಳು ನಾಲ್ಕು ಬಗೆ ಬಂಧಗಳಿಗೆ ಸಿಕ್ಕಿ ದುರ್ಗತಿಯಲ್ಲಿ ತೊಳಲುತ್ತ ದುಃಖಾನುಭವ ಮಾಡುವುವು. ಪ್ರತ್ಯೇಕಭವದಲ್ಲಿಯೂ ಭಯದುಃಖಗಳಿಗೆ ಪಕ್ಕಾಗಿ ವಿಷಯಸುಖಪ್ರೇರಿತವಾಗುತ್ತದೆ. ಇಂದು ಮನುಷ್ಯಭವದಲ್ಲಿಯೂ ಈ ಮೋಹ ಆವರಿಸಿ, ಸಂಸಾರಕ್ಲೇಶಗಳನ್ನು ಪರಿಹರಿಸಿಕೊಳ್ಳಲು ಯತ್ನ ನಡೆಯುತ್ತಿಲ್ಲ. ಎಷ್ಟೇ ಹೆಚ್ಚಾದ ಸಂಸಾರಸುಖವಿಂದಲೂ ಜೀವಿಗೆ ಸಂತಸ ದೊರಕದು. ಅನ್ಯರ ಮಾತಿರಲಿ. ನಾನೇ ಸ್ವತಃ ಅನೇಕ ಸಾಗರಕಾಲ ಖಚರ ನೃಪ ಅಮರ ಜನ್ಮಗಳಲ್ಲಿ, ಜಯಂತವಿಮಾನದಲ್ಲಿ, ಹುಟ್ಟಿ ಸುಖಾನುಭವಮಾಡಿದೆನಾದರೂ ಅದರಿಂದ ನನಗೆ ತೃಪ್ತಿ ದೊರೆಯಲಿಲ್ಲ. ನನಗೆ ಮಹತ್ಸುಖವು ಸುಲಭಲಭ್ಯವಾದ್ದು. ಆದರೆ ಅದು ನಶ್ವರ, ನಿಸ್ಸಾರ; ನನ್ನ ಆಯುಸ್ಸು ಕೂಡ ಅಸಾರ. ಹೀಗಿರಲು ನನಗೆ ತೃಪ್ತಿನೀಡುವುದು ಹೇಗೆ? ಆದ್ದರಿಂದ ಈ ಅವಿನಾಶಿಯೂ ಸಂತಾಪಕರವೂ ಆದ ವಿಷಯಸುಖವನ್ನು ಬಿಟ್ಟು, ಉಗ್ರತಪದಿಂದ ಮೋಕ್ಷಸುಖವನ್ನು ಆರ್ಜಿಸುತ್ತೇನೆ."

ಹೀಗೆ ನೇಮಿಯು ಚಿಂತಿಸುವ ವೇಳೆಗೆ ಲೋಕಾಂತಿಕದೇವರು ಕೂಡಲೇ ಬಂದು ತಲೆವಾಗಿ ಕೈಮುಗಿದು, "ಪ್ರಭು, ಈಗ ಭರತಕ್ಷೇತ್ರದಲ್ಲಿ ತೀರ್ಥಪ್ರವರ್ತನದ ಸಮಯ; ಅದರಿಂದ ತೀರ್ಥಪ್ರವರ್ತನಮಾಡಿ" ಎಂದರು. ನೇಮಿಯು ಕೂಡಲೇ ಕಟ್ಟುಗೊಂಡಿದ್ದ ಮೃಗಗಳನ್ನು ಸ್ವತಂತ್ರವಾಗಿ ಬಿಟ್ಟುಬಿಟ್ಟನು. ರಾಜಕುಮಾರರೊಡನೆ ನಗರಕ್ಕೆ ಬಂದು ಸಿಂಹಾಸನವನ್ನಲಂಕರಿಸಿದನು. ಇಂದ್ರರು ಮುನ್ನಿನಂತೆ ಬಂದು ಸ್ತುತಿಸಿದರು. ಮಜ್ಜನಪೀಠದಲ್ಲಿ ಕುಳ್ಳಿರಿಸಿ ಕ್ಷೀರೋದಕದಿಂದ ಅಭಿಷೇಕ ಮಾಡಿದರು. ಅಲಂಕರಿಸಿದರು. ಆತನ

ಬಳಸಿನಲ್ಲಿ ಕೃಷ್ಣಬಲರೂ ಸುರಾಸುರರೂ ಇದ್ದರು. ಪಂಜರವನ್ನು ಭೇದಿಸಿಕೊಂಡು ಹೋಗುವ ಬಲಿಷ್ಠಸಿಂಹವನ್ನು ಯಾರೂ ಹೇಗೆ ತಡೆಯುವುದಾಗದೋ, ಹಾಗೆಯೇ ಕೃಷ್ಣನೂ ಭೋಜರೂ ಯದುಗಳೂ ನೇಮಿಯನ್ನು ತಪೋದ್ಯೋಗದಿಂದ ತಡೆಯಲಾಗ ಲಿಲ್ಲ. ಆಮೇಲೆ ನೇಮಿ ತಂದೆ ಮುಂತಾದವರನ್ನು ಸಂತವಿಸಿ ಉತ್ತರಕುರುವೆಂಬ ಸಿವಿಗೆ ಯೇರಿ ಹೊರಟನು. ಮೊದಲು ಉತ್ತಮರಾದ ಅರಸರೂ ಆಮೇಲೆ ಇಂದ್ರಾದಿ ದೇವರೂ ಅದನ್ನು ಕೊಂಡೊಯ್ದರು. ಮೇಲೆ ದೇವತೆಗಳ ಆನಂದಘೋಷ; ಕೆಳಗೆ ಭೋಜವಂಶೀಯರ ಕರುಣಾಕ್ರಂದನ. ಅಪ್ಸರೆಯರು ಜಿನನೆದುರು ನರ್ತಿಸುತ್ತಿದ್ದರು. ದೇವವೃಂದವು ಊರ್ಜಯಂತ ಗಿರಿಯನ್ನು ಮುಟ್ಟಿತು. ಅಲ್ಲಿ ಇಂದ್ರನು ನೇಮಿಯ ಸಮ್ಮತಿ ಪಡೆದು ಪಲ್ಲಕ್ಕಿಯಿಳಿಸಿದನು. ನೇಮಿ ಇಳಿದು ಹೋಗಿ ಶಿಲಾತಲವೇರಿದನು. ಪ್ರಿಯವಧುವನ್ನೂ ರಾಜ್ಯಲಕ್ಷ್ಮಿಯನ್ನೂ ಪರಿತ್ಯಜಿಸಿ, ಮಾಲ್ಯಾಭರಣಗಳನ್ನು ಕಳೆದು ಪಂಚಮುಷ್ಟಿಯಿಂದ ಕೇಶೋತ್ಪಾಟನ ಮಾಡಿಕೊಂಡನು. ಅವನಂತೆಯೇ ಸಹಸ್ರರಾಜರೂ ನಮಿನಾಥನೊಡನೆ ತಪೋದ್ಯೋಗದಲ್ಲಿದ್ದರು. ಆಯೆಲ್ಲರ ಕೇಶರಾಶಿಯನ್ನೂ ಸಂಚಯಿಸಿ ರತ್ನಪಟಲಿಕೆಯಲ್ಲಿರಿಸಿ ಕ್ಷೀರಸಾಗರದಲ್ಲಿ ಕ್ಷೇಪಿಸಲಾಯಿತು. ನೇಮಿನಾಥನು ವಸ್ತ್ರಪರಿತ್ಯಾಗ ಮಾಡಿದೆಡೆ ಶಾಸ್ತ್ರಸಮ್ಮತ ತೀರ್ಥಸ್ಥಾನವಾಯಿತು. ನೇಮಿಯು ಶ್ರಾವಣಶುದ್ಧ ಚತುರ್ಥಿ ದೀಕ್ಷಾಧಾರಣೆ ಮಾಡಿದನು. ಸುರಾಸುರರು ಸ್ತುತಿಸಿ ತಮ್ಮೆಡೆಗಳಿಗೆ ಹೋದರು.

ಆಮೇಲೆ ನೇಮಿಯು ಒಮ್ಮೆ ಆಹಾರಸ್ವೀಕಾರಕ್ಕಾಗಿ ದ್ವಾರಿಕಾಪುರಿಗೆ ಬಂದಾಗ ತೇಜಸ್ವಿಯಾದ ಪ್ರವರದತ್ತನು ಪರಮಾನ್ನವನ್ನು ನೀಡಿ ಮಹಿಮಾಸ್ಪದನಾದನು. ರಾಜ ಪುತ್ರಿಯಾದ ರಾಜೀಮತಿಯು ಅಪಾರವಿಯೋಗದಿಂದ ತನ್ನಲ್ಲಿಯೇ ಸಂತಾಪಪಡು ತ್ತಿದ್ದಳು. ತೀವ್ರಶೋಕಕ್ಕೆ ಗುರಿಯಾಗಿ ನಿರಂತರವೂ ಅಳಲುತ್ತಿದ್ದು, ಒಡವೆಗಳೂ ಕೂದಲೂ ಸಡಿಲವಾಗಿ, ದುಃಖಿಗಳಾದ ಪರಿಜನರ ಬಳಸಿನಲ್ಲಿ ಒಂದೇ ಸಮನೆ ಅಳು ತ್ತಿದ್ದಳು. ಒಮ್ಮೊಮ್ಮೆ ತನಗೆ ಸೇರಲಿದ್ದ ವರನನ್ನು ತಪ್ಪಿಸಿದ ದೈವವನ್ನು ಹಳಿಯುತ್ತ, ಒಮ್ಮೊಮ್ಮೆ ವರನ ಮೇಲೆಯೇ ತಪ್ಪುಹೊರಿಸುತ್ತ ಇದ್ದಳು. ಆಮೇಲೆ ತಪಸ್ಸನ್ನು ಹಿಡಿಯಲು ಪ್ರೇರಿಸಿದ ಗುರುಜನರ ಹಿತವಾಕ್ಯಗಳಿಂದ ಶೋಕಭಾರವು ಶಮಿಸಿ, ತಪಸ್ಸಿ ನತ್ತ ಮನಸ್ಸು ಕೊಟ್ಟಳು. ಅದರಿಂದ ಅವಳ ದುಃಖವು ಕೊನೆಗೊಳ್ಳುವುದೆಂದರಿತ ಬಂಧುಜನ ಈಗ ನೆಮ್ಮದಿಗೊಂಡರು.

ಗೌತಮಸ್ವಾಮಿ ಹೇಳುತ್ತಾನೆ: "ಹಲವು ದುಃಖಗಳಿಗೆ ನೆಲೆಯಾದ ಸ್ತ್ರೀಪರ್ಯಾಯವು ಮಿಥ್ಯಾದರ್ಶನದ ಕಾರಣವಾಗಿ ಲಭಿಸುತ್ತದೆ. ಆದ್ದರಿಂದ ಭವ್ಯಜೀವರು ಇದನ್ನು ಪರಿಹರಿಸಿಕೊಳ್ಳಲು ಸಮ್ಯಗ್ದರ್ಶನವನ್ನು ಪರಿಭಾವಿಸಬೇಕು."

೫೬. ಭಗವನ್ನೇಮಿನಾಥಕೇವಲಜ್ಞಾನ ವರ್ಣನ

ಆಮೇಲೆ ವ್ರತ ಗುಪ್ತಿ ಸಮಿತಿಗಳಿಂದ ಉತ್ಕರ್ಷಗೊಂಡಂತಹ, ಪರೀಷಹಗಳನ್ನು ಸಾಧಿಸಿದಂತಹ ನೇಮಿನಾಥನು ರತ್ನತ್ರಯಗಳಿಂದಲೂ ತಪಸ್ಸಿನಿಂದಲೂ ಶೋಭಿಸತೊಡಗಿ

ದನು. ಧರ್ಮಧ್ಯಾನ ಶುಕ್ಲಧ್ಯಾನಗಳತ್ತ ಮನಸ್ಸುಕೊಟ್ಟನು. ಸಂಕಟವನ್ನು ಆರ್ತವೆನ್ನು ತ್ತಾರೆ. ಆರ್ತದ ವೇಳೆ ಮಾಡುವ ಧ್ಯಾನಕ್ಕೆ ಆರ್ತಧ್ಯಾನ ಎಂದು ಹೆಸರು. ಈ ಆರ್ತ ಧ್ಯಾನವು ಅತ್ಯಂತ ಕೃಷ್ಣ, ನೀಲ ಮತ್ತು ಕಾಪೋತಲೇಶ್ಯಗಳ ಬಲದಿಂದ ಉತ್ಪನ್ನವಾಗು ತ್ತದೆ. ಬಾಹ್ಯ ಮತ್ತು ಆಭ್ಯಂತರಭೇದದಿಂದ ಆರ್ತಧ್ಯಾನವು ಎರಡು ಪ್ರಕಾರದವಾಗಿವೆ. ಅಳುವುದು, ಮತ್ತೊಬ್ಬರ ಸಂಪತ್ತನ್ನು ನೋಡಿ ಅಚ್ಚರಿಪಡುವುದು ಮತ್ತು ವಿಷಯ ಗಳಲ್ಲಿ ಆಸಕ್ತಿ ತಾಳುವುದು ಬಾಹ್ಯ ಆರ್ತಧ್ಯಾನವೆನಿಸುತ್ತದೆ. ಆಭ್ಯಂತರ ಆತ್ಮಧ್ಯಾನವು ಸ್ವಸಂವೇದನೆಯಿಂದ ತಿಳಿಯಲ್ಪಡುತ್ತದೆ.

ಆಭ್ಯಂತರ ಆರ್ತಧ್ಯಾನದಲ್ಲಿ ನಾಲ್ಕು ಭೇದಗಳಿವೆ. ಬಯಸಿದ ವಸ್ತು ದೊರೆಯ ಲಿಲ್ಲವಲ್ಲ ಎಂದು ಚಿಂತಿಸುವುದು ಪ್ರಥಮ ಆರ್ತಧ್ಯಾನ. ಬಯಸಿದ ವಸ್ತು ಲಭಿಸಿಯೂ ಅದು ಎಲ್ಲಿ ಕೈಬಿಟ್ಟು ಹೋಗುತ್ತದೋ ಎಂದು ಚಿಂತಿಸುವುದು ದ್ವಿತೀಯ ಆರ್ತದ್ಯಾನ. ಇಷ್ಟವಿಷಯದ ವಿಯೋಗವು ಎಂದೆಂದೂ ಆಗದಿರಲೆಂದು ಚಿಂತಿಸುವುದು ತೃತೀಯ ಆರ್ತಧ್ಯಾನ. ಇಷ್ಟವಿಷಯದ ವಿಯೋಗವಾಗಿದ್ದು, ಅದರ ಅಂತವನ್ನು ಕುರಿತು ಚಿಂತಿ ಸುವುದು ಚತುರ್ಥ ಆರ್ತಧ್ಯಾನ.

ಕ್ರೂರ ಅಭಿಪ್ರಾಯಗಳಿಂದ ಕೂಡಿದ ಜೀವವನ್ನು ರುದ್ರವೆನ್ನುತ್ತಾರೆ. ಅದು ಮಾಡುವ ಧ್ಯಾನಕ್ಕೆ ರೌದ್ರಧ್ಯಾನವೆನ್ನುವರು. ಅದು ಹಿಂಸಾನಂದ, ಚೌರ್ಯಾನಂದ, ಮೃಷಾನಂದ ಮತ್ತು ಪರಿಗ್ರಹಾನಂದವೆಂದು ನಾಲ್ಕು ಪ್ರಕಾರದವಾಗಿವೆ. ಹಿಂಸೆಯ ಮೂಲಕ ಅತಿಶಯವಾದ ಆನಂದವನ್ನು ಹೊಂದುವುದು ಹಿಂಸಾನಂದ. ಮತ್ತೊಬ್ಬರ ಸಂಪತ್ತನ್ನು ಬಲವಂತವಾಗಿ ಕಸಿದುಕೊಳ್ಳಬೇಕೆಂಬ ಆಲೋಚನೆ ಮಾಡುವುದು ಚೌರ್ಯಾನಂದ. ಇನ್ನೊಬ್ಬರನ್ನು ತನ್ನ ಕುಯುಕ್ತಿಗಳಿಂದ ವಂಚಿಸಬೇಕೆಂದು ಆಲೋ ಚಿಸುವುದು ಮೃಷಾನಂದ. ಚೇತನ, ಅಚೇತನ ಎರಡೂ ಬಗೆಯ ಪರಿಗ್ರಹದ ರಕ್ಷಣೆಯ ವಿಷಯವನ್ನು ಚಿಂತಿಸುತ್ತಾ "ನಾನು ಇದರ ಒಡೆಯ, ಇದು ನನ್ನ ಸ್ವಂತದ್ದಾಗಿದೆ" ಎಂದು ಮೇಲಿಂದ ಮೇಲೆ ಭಾವಿಸುವುದು ಪರಿಗ್ರಹಾನಂದ. ಈ ರೌದ್ರಧ್ಯಾನವೆಂಬುದು ತೀವ್ರವಾದ ಕೃಷ್ಣ, ನೀಲ ಹಾಗೂ ಕಾಪೋತ ಲೇಶ್ಯಗಳ ಬಲದಿಂದ ಉಂಟಾಗುತ್ತದೆ.ಈ ಧ್ಯಾನದಿಂದಾಗುವ ಪರಿಣಾಮವೆಂದರೆ ನರಕಗತಿ. ಮೋಕ್ಷಾಭಿಲಾಷಿಯಾದ ಪುರುಷನು ಆರ್ತ ರೌದ್ರಗಳೆಂಬ ಎರಡೂ ಬಗೆಯ ಅಶುಭಧ್ಯಾನಗಳನ್ನು ಬಿಟ್ಟು, ಶುದ್ಧಭಿಕ್ಷೆಯನ್ನು ಸ್ವೀಕರಿಸುವ ಭಿಕ್ಷು-ಮುನಿಯಾಗಿ ಧರ್ಮಧ್ಯಾನ-ಶುಕ್ಲಧ್ಯಾನಗಳಲ್ಲಿ ತನ್ನ ಚಿತ್ತವನ್ನು ನೆಲೆಗೊಳಿಸಬೇಕು.

ಬಾಹ್ಯ ಮತ್ತು ಆಧ್ಯಾತ್ಮಿಕ ಭಾವಗಳ ಯಥಾರ್ಥ ಭಾವವೇ ಧರ್ಮವೆನಿಸುತ್ತದೆ. ಆ ಧರ್ಮದಿಂದ ಕೂಡಿದ ಧ್ಯಾನವು ಧರ್ಮಧ್ಯಾನವೆನಿಸುತ್ತದೆ. ಶಾಸ್ತ್ರಗಳ ಅರ್ಥವನ್ನು ಅರಸುವುದು, ಶೀಲವ್ರತವನ್ನು ಪಾಲಿಸುವುದು, ಗುಣಸಮೂಹವನ್ನು ಪ್ರೀತಿಸುವುದು ಮುಂತಾದುವು ಧರ್ಮಧ್ಯಾನದ ಬಾಹ್ಯಲಕ್ಷಣಗಳು. ಆಭ್ಯಂತರ ಲಕ್ಷಣಗಳು ಹತ್ತು ಬಗೆ ಯಾಗಿವೆ. ಅಪಾಯವಿಚಯ, ಉಪಾಯವಿಚಯ, ಜೀವವಿಚಯ, ಅಜೀವವಿಚಯ,

ವಿಪಾಕವಿಚಯ, ವಿರಾಗವಿಚಯ, ಭವವಿಚಯ, ಸಂಸ್ಥಾನವಿಚಯ, ಆಜ್ಞಾವಿಚಯ, ಹೇತುವಿಚಯ ಎಂಬ ಹೆಸರುಗಳು ಅವಕ್ಕಿವೆ. ಧರ್ಮಧ್ಯಾನವು ಅಪ್ರಮತ್ತ ಗುಣಸ್ಥಾನದಲ್ಲಿ ಉಂಟಾಗುತ್ತದೆ, ಪ್ರಮಾದದ ಅಭಾವದಲ್ಲಿ ಉತ್ಪನ್ನವಾಗುತ್ತದೆ. ಪೀತ ಮತ್ತು ಪದ್ಮನಾಮಕ ಶುಭಲೇಶ್ಯೆಗಳಿಂದಾಗುತ್ತದೆ. ಸ್ವರ್ಗ ಮತ್ತು ಮೋಕ್ಷರೂಪದ ಫಲಗಳನ್ನು ಕೊಡುವಂಥದಾಗಿದೆ.

ಶುಚಿತ್ವಕ್ಕೆ ಸಂಬಂಧಿಸಿದುದು ಶುಕ್ಲಧ್ಯಾನವೆನಿಸುತ್ತದೆ. ಅದರಲ್ಲಿ ಶುಕ್ಲ ಮತ್ತು ಪರಮಶುಕ್ಲ ಎಂಬೆರಡು ಭೇದಗಳಿವೆ. ಶುಕ್ಲದಲ್ಲಿ ಪೃಥಕ್ತ್ವವಿತರ್ಕ ವೀಚಾರ ಮತ್ತು ಏಕತ್ವವಿತರ್ಕ ಎಂಬೆರಡು ಭೇದಗಳಿವೆ. ಪರಮಶುಕ್ಲದಲ್ಲಿ ಸೂಕ್ಷ್ಮಕ್ರಿಯಾಪ್ರತಿಪಾತಿ ಮತ್ತು ವ್ಯುಪರತ ಕ್ರಿಯಾನಿವರ್ತಿ ಎಂಬೆರಡು ಭೇದಗಳಿವೆ.

ಧರ್ಮಾಸ್ತಿಕಾಯದ ಅಭಾವದಲ್ಲಿ ಸಿದ್ಧಾತ್ಮನು ಲೋಕಾಂತವನ್ನು ಉಲ್ಲಂಘಿಸಿ ಮುಂದೆ ಹೋಗುವುದಿಲ್ಲ. ಅವನು ಅದೇ ಸ್ಥಾನದಲ್ಲಿ ಅನಂತಸುಖವನ್ನು ಉಪಭೋಗಿಸುತ್ತ ವಿರಾಜಮಾನನಾಗುತ್ತಾನೆ. ನಾಲ್ಕು ವರ್ಗಗಳಲ್ಲೂ ಪ್ರಾಣಿಗಳಿಗೆ ಮೋಕ್ಷವೇ ಹೆಚ್ಚು ಹಿತವನ್ನುಂಟುಮಾಡುವಂಥದು. ಎಲ್ಲ ಕರ್ಮಗಳೂ ಕ್ಷಯವಾಗುವುದೇ ಮೋಕ್ಷದ ಲಕ್ಷಣ. ಅದು ಉತ್ತಮಧ್ಯಾನದಿಂದ ಮಾತ್ರವೇ ಲಭಿಸುತ್ತದೆ. ಕರ್ಮಪ್ರಕೃತಿಗಳಿಂದ ನಿವಾರಣೆಗೊಳ್ಳುವುದೇ ಅನಂತಸುಖವನ್ನು ಕೊಡುವ ಮೋಕ್ಷವೆನಿಸುತ್ತದೆ.

ಸಯೋಗಕೇವಲಿಯು ಗುಣಸ್ಥಾನವನ್ನು ಉಲ್ಲಂಘಿಸಿ ಆಗಾಮೀಗುಣಸ್ಥಾನವನ್ನು ಪಡೆದಾಗ ಆಗ ಅಯೋಗ ಕೇವಲಿಯೆನಿಸುತ್ತಾನೆ. ಅನ್ಯತರ ವೇದನೀಯ, ದೇವಗತಿ, ಪಂಚಶರೀರ, ಪಂಚಸಂಘಾತ, ಪಂಚಬಂಧನ, ಔದಾರಿಕ ವೈಕ್ರಿಯಕ ಆಹಾರಕ ಎಂಬ ಮೂರು ಅಂಗೋಪಾಂಗಗಳು, ಆರು ಸಂಸ್ಥಾನಗಳು, ಆರು ಸಂಹನನಗಳು, ಐದು ವರ್ಣ,ಐದು ರಸ, ಎಂಟು ಸ್ಪರ್ಶ, ಎರಡು ಗಂಧ, ದೇವಗತ್ಯಾನುಪೂರ್ವಿ, ಅಗುರುಲಘು, ಉಚ್ಛ್ವಾಸ,ಪರಘಾತ, ಉಪಘಾತ, ಪ್ರಶಸ್ತ ಮತ್ತು ಅಪ್ರಶಸ್ತವೆಂಬ ಭೇದದಿಂದ ಎರಡು ಬಗೆಯ ವಿಹಾಯೋಗತಿಗಳು, ಪ್ರತ್ಯೇಕ ಶರೀರ, ಅಪರ್ಯಾಪ್ತ, ಸ್ಥಿರ, ಅಸ್ಥಿರ, ಶುಭ, ಅಶುಭ, ದುರ್ಭಗ, ಸುಸ್ವರ, ದುಃಸ್ವರ, ಅನಾದೇಯ, ಅಯಶಃಕೀರ್ತಿ, ನಿರ್ಮಾಣ ಮತ್ತು ನೀಚಗೋತ್ರ ಎಂಬ ಎಪ್ಪತ್ತೆರಡು ಪ್ರಕೃತಿಗಳನ್ನು ನಷ್ಟಗೊಳಿಸುತ್ತದೆ.ಮತ್ತೆ ಕೊನೆಯಲ್ಲಿ ಸಾತಾವೇದನೀಯ ಅಸಾತಾವೇದನೀಯಗಳಲ್ಲಿ ಒಂದು, ಮನುಷ್ಯ ಆಯುಷ್ಯ, ಮನುಷ್ಯಗತಿ, ಮನುಷ್ಯ ಗತ್ಯಾನುಪೂರ್ವಿ, ಪಂಚೇಂದ್ರಿಯ ಜಾತಿ, ತ್ರಸ, ಬಾದರ, ಪರ್ಯಾಪ್ತ, ಸುಭಗ, ಆದೇಯ, ಉಚ್ಚಗೋತ್ರ, ಯಶಸ್ಕೀರ್ತಿ ಮತ್ತು ತೀರ್ಥಂಕರ ಎಂಬೀ ಹದಿಮೂರು ಪ್ರಕೃತಿಗಳನ್ನು ನಷ್ಟಗೊಳಿಸುತ್ತಾನೆ. ಅಯೋಗಕೇವಲಿ ಗುಣಸ್ಥಾನದಲ್ಲಿ ಆ ಜೀವವು ಪ್ರದೇಶಪರಿಸ್ಪಂದದ ಅಭಾವದಿಂದಾಗಿ ಸ್ವಾಭಾವಿಕವಾಗಿಯೇ ಸ್ಥಿರವಾಗಿರುತ್ತದೆ. ಅ ಇ ಉ ಋ ಲೃ ಎಂಬ ಐದು ಲಘು ಅಕ್ಷರಗಳ ಉಚ್ಚಾರಣೆಗೆ ಎಷ್ಟು ಕಾಲ ಬೇಕಾಗುತ್ತದೆಯೋ ಅಷ್ಟು ಕಾಲದವರೆಗೆ ಹದಿನಾಲ್ಕನೆಯ ಗುಣಸ್ಥಾನದಲ್ಲಿದ್ದು, ಆ ಜೀವವು ಸಿದ್ಧಜೀವವೆನಿಸುತ್ತದೆ. ಜೀವದ ಈ ಸಿದ್ಧಿಯು ಸಾದಿ

ಹಾಗೂ ಅನಂತವಾಗಿದೆ ಮತ್ತು ಅನಂತಗುಣಗಳ ಸನ್ನಿಧಾನದಿಂದ ಕೂಡಿದೆ.

ಭಗವಾನ್ ನೇಮಿನಾಥನು ಧರ್ಮಧ್ಯಾನದ ದಶಭೇದಗಳನ್ನು ಧ್ಯಾನಿಸುತ್ತ ಛದ್ಮಸ್ಥ ಅವಸ್ಥೆಯ ಐವತ್ತಾರು ದಿವಸಗಳನ್ನು ಸಮೀಚೀನ ತಪಶ್ಚರಣೆಯ ಮೂಲಕ ಕಳೆದನು. ಆಮೇಲೆ ಆಶ್ವಯುಜ ಶುಕ್ಲ ಪ್ರತಿಪದೆಯ ಪ್ರಾತಃಕಾಲ ಶುಕ್ಲಧ್ಯಾನವನ್ನು ಭಾವಿಸಿ ನಾಲ್ಕು ಘಾತಿಕರ್ಮಗಳನ್ನು ಸುಟ್ಟು ಕೇವಲಜ್ಞಾನ ಕೇವಲದರ್ಶನ ಆದಿಯಾಗಿ ಅನಂತ ಚತುಷ್ಟಯಗಳನ್ನು ಪಡೆದನು. ಘಂಟಾದಿ ಧ್ವನಿಗಳಿಂದ ದೇವತೆಗಳು ಜಿನನ ಕೈವಲ್ಯಜ್ಞಾನ ಪ್ರಾಪ್ತಿಯನ್ನರಿತರು. ಇಂದ್ರಾದಿಗಳು ಆಸನಕಂಪನ ಮುಕುಟಕಂಪನಗಳಾಗುತ್ತಲೂ ಅವಧಿಜ್ಞಾನದಿಂದ ಅದನ್ನು ಅರಿತರು. ತ್ರಿಲೋಕೇಂದ್ರರೂ ತಮ್ಮ ದೇವಸೇನೆಯೊಡನೆ ಊರ್ಜಯಂತ ಗಿರಿಗೆ ಬಂದರು. ಇಂದ್ರರು ಸಪ್ತಾನೀಕಿನೀಪರಿವೃತರಾಗಿ ಹಾಗೆ ಬಂದು ಆ ಗಿರಿಯನ್ನು ತ್ರಿಃಪ್ರದಕ್ಷಿಣೆ ಮಾಡಿದರು. ಮಂದಾರಗಳ ಪುಷ್ಪವೃಷ್ಟಿಯಾಯಿತು. ದೇವಾಂಗನೆಯರ ಗೀತೆಯೂ ದುಂದುಭಿಧ್ವಾನವೂ ನಡೆದುವು. ಅಶೋಕವೃಕ್ಷವು ಪ್ರಕಟವಾದುದೇ ಮುಂತಾಗಿ ಅಷ್ಟಮಹಾಪ್ರಾತಿಹಾರ್ಯಗಳಿಂದಲೂ ದೇವಕೃತವಾದ ಮೂವತ್ತನಾಲ್ಕು ಅತಿಶಯಗಳಿಂದಲೂ ವಿಭೂಷಿತನಾಗಿ ಹರಿವಂಶ ಶಿರೋಮಣಿಯಾದ ಇಪ್ಪತ್ತೆರಡನೆಯ ತೀರ್ಥಂಕರ ನೇಮಿನಾಥನು ಪೃಥಿವಿಯಲ್ಲಿ ಪ್ರಕಟವಾದನು.

೫೭. ಸಮವಸರಣ ವರ್ಣನ

ಆಮೇಲೆ ದೇವರು ಇಂದ್ರನ ಆಜ್ಞೆಯಂತೆ ಕ್ಷಣಮಾತ್ರದಲ್ಲಿ ತ್ರಿಜಗದ ಜೀವಿಗಳಿಗೂ ಶರಣಭೂತವಾದ ಸಮವಸರಣವನ್ನು ರಚಿಸಿದರು. ಬಲದೇವ ಕೃಷ್ಣರನ್ನು ಮೊದಲುಗೊಂಡು ಯಾದವರೂ ಭೋಜರೂ ಸಮಸ್ತದ್ವಾರಿಕಾವಾಸಿಗಳೂ ವೈಭವದಿಂದ ಊರ್ಜಯಂತಗಿರಿಯನ್ನು ಏರಿದರು. ಒಳಹೊರಗೆ ಜಿನೇಂದ್ರ ಸಮವಸರಣವನ್ನು ನೋಡಿ ಪರಮಾಶ್ಚರ್ಯಗೊಂಡರು. ತೀರ್ಥಂಕರ ಸಮವಸರಣಭೂಮಿ ಹೇಗಿರುತ್ತದೆಂದು ಇಲ್ಲಿ ಸಂಕ್ಷೇಪದಿಂದ ಶ್ರೋತೃಗಳಿಗಾಗಿ ವರ್ಣಿಸಲ್ಪಡುತ್ತದೆ.

ಸಮವಸರಣದ ದಿವ್ಯಭೂಮಿಯು ಸ್ವಾಭಾವಿಕ ಭೂಮಿಗಿಂತ ಒಂದು ಹಸ್ತ ಎತ್ತರವಾಗಿರುತ್ತದೆ. ಅದಕ್ಕಿಂತ ಒಂದು ಹಸ್ತ ಮೇಲಕ್ಕೆ ಕಲ್ಪಭೂಮಿಯಿರುತ್ತದೆ. ಆ ಭೂಮಿಯು ತನ್ನ ಅನುಪಮ ಶೋಭೆಯಿಂದ ಸ್ವರ್ಗಸಿರಿಯನ್ನೂ ಗೆಲ್ಲುವಂತಿರುತ್ತದೆ. ಸುಖದಾಯಕವೂ ದೇಶಕಾಲಗಳನ್ನು ಅನುಸರಿಸಿಯೂ ಇರುವ ಅದು ಒಂದು ಯೋಜನ ಕನಿಷ್ಠವಿಸ್ತಾರವನ್ನೂ ಹನ್ನೆರಡು ಯೋಜನ ಉತ್ಕೃಷ್ಟವಿಸ್ತಾರವನ್ನೂ ಒಳಗೊಂಡುದಾಗಿರುತ್ತದೆ. ಆ ಭೂಮಿಯ ನಾಲ್ಕೂ ಮಹಾದಿಕ್ಕುಗಳಲ್ಲಿ ಎರಡೆರಡು ಕೋಶ ಮಹಾವಿಸ್ತಾರದಿಂದ ಕೂಡಿದ ನಾಲ್ಕು ಮಹಾವೀಥಿಗಳಿವೆ. ಅವುಗಳ ಮಧ್ಯದಲ್ಲಿ ನಾಲ್ಕು ಮಾನಸ್ತಂಭಗಳಿವೆ. ಮನುಷ್ಯ, ಸುರ, ಅಸುರರೆಲ್ಲರೂ ಬಂದು ಅವುಗಳಿಗೆ ನಮಸ್ಕರಿಸುತ್ತಾರೆ. ಮನುಷ್ಯರು ಮತ್ತು ದೇವತೆಗಳು ನಿಂತು ಮಾನಸ್ತಂಭದ ಪೂಜೆಯನ್ನು ಮಾಡುವ ಜಾಗಕ್ಕೆ ಆಸ್ಥಾನಾಂಗಣವೆಂದು ಹೆಸರು. ಈ ಮಾನಸ್ತಂಭಗಳು ಹನ್ನೆರಡು